ಸಂಪುಟ: 05 ಸಂಚಿಕೆ: 169 ಪುಟಗಳು: 08 ಮಂಗಳವಾರ 02 ಸೆಪ್ಟೆಂಬರ್ 2025 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಸಾಧ್ಯವೇ ಇಲ್ಲ ಎಂದರೆ ಏನನ್ನೂ ಸಾಧಿಸಲಾಗದು. ಪ್ರಯತ್ನದಿಂದ ನಷ್ಟವೇನಿದೆ? ಗೆದ್ದರೆ ಸಂತೋಷ ಸಿಗುವುದು, ಸೋತರೆ ಅನುಭವ ಖಚಿತ.

# ಉದಯ UV ವಾಹಿನಿ


ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

# ರಾಜಕೀಯ ಅಸ್ತಿತ್ವಕ್ಕೆ ಬಿಜೆಪಿ ಹೋರಾಟ: ಪ್ರಿಯಾಂಕ್

• ಉದಯವಾಹಿನಿ, ಬೆಂಗಳೂರು

ಹೈದರ್ ಅಲಿ, ಟಿಪ್ಪು ಸುಲ್ತಾನ್ ಕಾಲದಲ್ಲೂ ದಸರಾ ವಿಜ್ರಂಭಣೆಯಿಂದ ನಡೆಯುತ್ತಿತ್ತು. ಈಗಾಗಲೂ ನಡೆಯುತ್ತಿದೆ. ಬಿಜೆಪಿ ನಾಯಕರದ್ದು ಕೇವಲ ರಾಜಕೀಯ ಹೇಳಿಕೆಗಳು ಎಂದು ಸಚಿವ ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದರು. ವಿಧಾನಸೌಧದಲ್ಲಿ ಸೋಮವಾರ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಇದ್ದಾಗ ಆಗಿನ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರನ್ನು ಕರೆಸಿದ್ರು. ಆದರೆ ಅವರಿಗೆ ಕಾರಣಾಂತರದಿಂದ ಬರಲಿಕ್ಕೆ ಆಗಿಲ್ಲ. ನಿಸಾರ್ ಅಹ್ಮದ್, ಅಬ್ದುಲ್ ಕಲಾಂ ಅವರನ್ನು ದಸರಾಗೆ ಆಹ್ವಾನಿದ್ದು, ಮುಸ್ಲಿಂ ಎಂಬ ಕಾರಣಕ್ಕಾ? ಅಥವಾ ಅವರ ಸ್ವಂತ ಸಾಮರ್ಥ್ಯದ ಕಾರಣಕ್ಕಾ? ಎಂದು ಪ್ರಶ್ನಿಸಿದರು.

ಅದೇ ರೀತಿ ಕರ್ನಾಟಕ ಪರವಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮುಷ್ತಾಕ್ ಬಾನು ಅವರು ಸಾಧನೆ ಮಾಡಿದ್ದಾರೆ.



ಅದಕ್ಕೆ ಅವರ ಸಾಧನೆ ನೋಡಿ ಮೆಚ್ಚಿ ಅವರನ್ನು ಕರೆಸಿದ್ದೇವೆ, ಅದರಲ್ಲಿ ತಪ್ಪು ಏನಿದೆ? ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

**ಬಿಜೆಪಿ ನಾಯಕರು ದೇವರುಗಳ ವಕ್ತಾರರು**

ಬಾನು ಮುಸ್ತಾಕ್ ಅವರನ್ನು ಆಹ್ವಾನಿಸಿದರೆ ತಾಯಿ ಚಾಮುಂಡೇಶ್ವರಿ ಏನು ಅನ್ನಲ್ಲ. ಇವರೇ ಚಾಮುಂಡೇಶ್ವರಿ ತಾಯಿ ವಕ್ತಾರರು ತರ ಆಡ್ತಾರೆ. ಯಾರು ಇವರೆಲ್ಲಾ, ಇವರ ಕೊಡುಗೆ ಶೂನ್ಯ. ಇವರು ಕರ್ನಾಟಕ ರಾಜ್ಯ, ಸಮಾಜ, ಭಾಷೆ ಕೊಡುಗೆ ಏನು ಇಲ್ಲ. ರಾಜಕೀಯ ಅಷ್ಟೇ ಬೇರೆ ಏನು ಇಲ್ಲ. ಇವರಿಗೆ ಬೇರೆ ಕೆಲಸ ಇಲ್ಲ. ರಾಜಕೀಯ ಅಸ್ತಿತ್ವಕ್ಕೆ ಆ ರೀತಿ ಮಾಡ್ತಾ ಇದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಚಾಮುಂಡೇಶ್ವರಿ ಹಿಂದುಗಳ ಆಸ್ತಿ ಅಲ್ಲ ಎಂಬ ಡಿಕೆ ಶಿವಕುಮಾರ್ ಹೇಳಿಕೆ ವಿಚಾರವಾಗಿ ಮಾತನಾಡಿ, ಬಹಳಷ್ಟು ಕಡೆ ನಮ್ಮ ಸೌಹಾರ್ದ ಹೇಗೆ ಇದೆ ಅಂದ್ರೆ, ಚಿತ್ತಾಪುರದಲ್ಲಿ ನಾಗಾವಿ ಎಲ್ಲಮ್ಮ ದೇವಸ್ಥಾನಕ್ಕೆ ಚಾದರ ಮುಸಲ್ಮಾನರ ಮನೆಯಿಂದ ಬರುತ್ತೆ. ಅದು ನಮ್ಮ ಇತಿಹಾಸ, ನಮ್ಮ ಪರಂಪರೆ. ಇದೆ ರೀತಿ ಬಹಳಷ್ಟು ಇದೆ. ನಮ್ಮ ರಾಜ್ಯದಲ್ಲಿ ರಾಷ್ಟ್ರದಲ್ಲಿ ಕೋಮು ಸೌದಾರ್ಯತೆ ಒಟ್ಟಾಗಿ ಕೆಲಸ ಮಾಡುತ್ತಾರೆ. ಎಷ್ಟು ಕಡೆ ದರ್ಗಾದಲ್ಲಿ ಸಂಭ್ರಮಾಚರಣೆ ಇದ್ದಾಗ ಹಿಂದುಗಳು ಭಾಗಿಯಾಗುತ್ತಾರೆ. ಹಿಂದುಗಳ ಸಂಪ್ರದಾಯದಲ್ಲಿ ಮುಸ್ಲಿಮರು ಬಂದು ಪ್ರಾರ್ಥನೆ ಮಾಡ್ತಾರೆ. ಅದರಲ್ಲಿ ತಪ್ಪು ಏನಿದೆ? ಎಂದು ಪ್ರಶ್ನಿಸಿದರು. ಇವರುಗಳು ಏನಾದರೂ ಹೇಳಬೇಕು.

ಬಿಜೆಪಿಯವರು ಎಷ್ಟು ದೊಡ್ಡವರು ಆಗಿದ್ದಾರೆ ಅಂದ್ರೆ, ಎಲ್ಲಾ ದೇವರುಗಳಿಗೆ ಕೂಡ ಬಿಜೆಪಿ ನಾಯಕರು ವಕ್ತಾರರಾಗಿದ್ದಾರೆ. ಟಿಪ್ಪು ಸುಲ್ತಾನ್ ಹೈದರಾಲಿ ಕಾಲದಲ್ಲಿ ಕೂಡ ದಸರಾ ನಡೆದಿತ್ತು ಒಡೆಯರ್ ಕಾಲದಲ್ಲಿ ಸಹ ನಡೆದಿತ್ತು ಎಂದು ಕಿಡಿಕಾರಿದರು. ಡಿಕೆಶಿ ಬಿಜೆಪಿ ಸೇರೋಕೆ ಯತ್ನ ಎಂಬ ಯತ್ನಾಳ್ ಆರೋಪ ವಿಚಾರವಾಗಿ ಪ್ರತಿಕ್ರಿಯೆ ನೀಡಿ, ಯಾರಿ ಸ್ವಂತ ಅಸಸ್ಮೆಂಟ್ ಮಾಡಿಕೊಳ್ಳೋದಕ್ಕೆ ಸಾಧ್ಯ ಆಗಿಲವೋ, ಅವರು ನಮ್ಮ ಅಧ್ಯಕ್ಷರ ಬಗ್ಗೆ ಅಸಸ್ಮೆಂಟ್ ಮಾಡ್ತಾ ಇದ್ದಾರೆ. ಯತ್ನಾಳ ಅವರಿಗೆ ಅವರನ್ನು ಬಿಜೆಪಿಯಿಂದ ಯಾಕೆ ಹೊರಗೆ ಹಾಕಿದ್ದಾರೆ ಅಂತ ಗೊತ್ತಿಲ್ಲ, ಡಿಕೆ ಶಿವಕುಮಾರ್ ಅವರ ಬಗ್ಗೆ ಸಿಎಂ ಬಗ್ಗೆ ಸರ್ಕಾರದ ಬಗ್ಗೆ ಮಾತಾಡೋಕೆ ಅವರು ಯಾರು? ಎಂದು ಪ್ರಶ್ನಿಸಿದರು. ಬಿಜೆಪಿಯಿಂದ ಯಾಕೆ ಹೊರಗೆ ಹೋಗಿದ್ದಾರೆ ಎಂಬುವುದ್ನು ಅವರು ಮೊದಲು ತಿಳಿದುಕೊಳ್ಳಲಿ. ಯಾಕೆ ಹೊರಗೆ ಹಾಕಿದರೆ ಅದನ್ನು ಹೇಳಿ. ಅವರ ಮಾತಿಗೆ ಹೆಚ್ಚು ಬೆಲೆ ಕೊಡಬೇಡಿ. ಅವರ ಪಕ್ಷದಲ್ಲಿ ಅವರ ಮಾತಿಗೆ ಬೆಲೆ ಇರ್ಲಿಲ್ಲ. ನಮ್ಮ ಪಕ್ಷದ ಬಗ್ಗೆ ಮಾತಾಡಿದಾಗ ಯಾಕೆ ಬೆಲೆ ಕೊಡಬೇಕು ಎಂದು ತಿರುಗೇಟು ನೀಡಿದರು.

## ಕರ್ನಾಟಕ ಸೇರಿ 6 ರಾಜ್ಯಗಳಿಗೆ 'ಸುಪ್ರೀಂ' ನೋಟಿಸ್

• ಉದಯವಾಹಿನಿ, ಬೆಂಗಳೂರು

ಲಿಂಗತ್ವ ಅಲ್ಪಸಂಖ್ಯಾತರನ್ನೂ ಒಳಗೊಂಡ ಸಮಗ್ರ ಲೈಂಗಿಕ ಶಿಕ್ಷಣವನ್ನು (ಸಿಎಸ್‌ಇ) ಶಾಲಾ ಪಠ್ಯಕ್ರಮದಲ್ಲಿ ಸೇರಿಸಬೇಕೆಂದು ಕೋರಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ನಡೆಸಿತು. ಬಳಿಕ ಈ ಕುರಿತು ಪ್ರತಿಕ್ರಿಯಿಸುವಂತೆ ಕೇಂದ್ರ ಸರ್ಕಾರ, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಹಾಗೂ ಕರ್ನಾಟಕ ಸೇರಿದಂತೆ 6 ರಾಜ್ಯಗಳಿಗೆ ಸೂಚಿಸಿತು. ಮುಖ್ಯ ನ್ಯಾಯಮೂರ್ತಿ ಬಿ.ಆರ್ ಗವಾಯಿ ಹಾಗೂ ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರಿದ್ದ ಪೀಠವು, ಅರ್ಜಿದಾರರ ಪರ ವಕೀಲರಾದ ಗೋಪಾಲ್, ಶಂಕರನಾರಾಯಣನ್ ಅವರ ವಾದವನ್ನು ಆಲಿಸಿತು. ಬಳಿಕ 8 ವಾರಗಳ ಒಳಗಾಗಿ ಪ್ರತಿಕ್ರಿಯಿಸುವಂತೆ ನೋಟಿಸ್ ಜಾರಿ ಮಾಡಿತು. ಅರ್ಜಿದಾರರಾದ, 12ನೇ ತರಗತಿ ವಿದ್ಯಾರ್ಥಿನಿ ಕಾವ್ಯ ಮುಖರ್ಜಿ ಅವರು, ಕೇಂದ್ರ ಸರ್ಕಾರ, ಎನ್‌ಸಿಆರ್‌ಟಿ, ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ತೆಲಂಗಾಣ, ಪಂಜಾಬ್ ಮತ್ತು ತಮಿಳು ನಾಡುಗಳನ್ನು ಉಲ್ಲೇಖಿಸಿ ಅರ್ಜಿ ಸಲ್ಲಿಸಿದ್ದರು. ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣಾ ಕಾಯಿದೆ 2019ರ ಸೆಕ್ಷನ್ 2(ಡಿ) ಮತ್ತು 13ರ ಅಡಿಯಲ್ಲಿ, ಲಿಂಗ ಗುರುತಿಸುವಿಕೆ, ಲಿಂಗ ವೈವಿಧ್ಯತೆ ಮತ್ತು ಲಿಂಗಗಳ ನಡುವೆ ವ್ಯತ್ಯಾಸದ ಕುರಿತ ವಿಷಯಗಳನ್ನು ಶಾಲಾ ಪಠ್ಯಕ್ರಮದಲ್ಲಿ ಸೇರಿಸುವಲ್ಲಿ ಸಂಬಂಧಪಟ್ಟ ಮಂಡಳಿಗಳು ನಿರ್ಲಕ್ಷ್ಯ ವಹಿಸಿವೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

## ಮಳೆ ಅವಾಂತರಕ್ಕೆ ಓರ್ವ ಬಲಿ, ಇನ್ನೋರ್ವನ ಪರಿಸ್ಥಿತಿ ಗಂಭೀರ

• ಉದಯವಾಹಿನಿ, ಬೆಂಗಳೂರು

ರಾಜಧಾನಿಯಲ್ಲಿ ಸೋಮವಾರ ಸಂಜೆ ಏಕಾಏಕಿ ಸುರಿದ ಭಾರೀ ಮಳೆಗೆ ಓರ್ವ ಬಲಿಯಾಗಿದ್ದಾರೆ. ಘಟನೆಯಲ್ಲಿ ಇನ್ನೋರ್ವ ಕಾರ್ಮಿಕನಿಗೆ ಗಂಭೀರ ಗಾಯವಾಗಿದೆ. ಯಲಹಂಕ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು, ಕಟ್ಟಡ ನಿರ್ಮಾಣಕ್ಕೆಂದು ಗುಂಡಿ ತೋಡಿದ್ದ ವೇಳೆ ಮಣ್ಣು ಕುಸಿದು ದುರಂತ ಸಂಭವಿಸಿದೆ. ಎಂಬೆಸಿ ಗ್ರೂಪ್‌ಗೆ ಸೇರಿದ ಕಟ್ಟಡ ನಿರ್ಮಾಣ ಕಾಮಗಾರಿ ವೇಳೆ ಈ ದುರಂತ ನಡೆದಿದೆ. ಭಾರಿ ಮಳೆಯಿಂದಾಗಿ ನೀರು ನುಗ್ಗಿ ಮಣ್ಣು ಕುಸಿದಿದ್ದರಿಂದ ಇಬ್ಬರು ಕಾರ್ಮಿಕರು ಇದರ ಅಡಿಯಲ್ಲಿ ಸಿಲುಕಿಕೊಂಡಿದ್ದರು. ಇದರಲ್ಲಿ ಒಬ್ಬರನ್ನು ರಕ್ಷಣೆ ಮಾಡಲಾಗಿದ್ದರೆ, ಇನ್ನೊಬ್ಬರು ಪ್ರಾಣ ಕಳೆದುಕೊಂಡಿದ್ದಾರೆ.

## ಜಿಲ್ಲಾಸ್ಪತ್ರೆಯಲ್ಲಿ ಭ್ರೂಣಲಿಂಗ ಪತ್ತೆ ಮೇಲ್ನೋಟಕ್ಕೆ ಸಾಬೀತು

• ಉದಯವಾಹಿನಿ, ರಾಮನಗರ

ಭ್ರೂಣಲಿಂಗ ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಮನಗರ ಜಿಲ್ಲಾಆಸ್ಪತ್ರೆ ರೇಡಿಯಾಲಜಿಸ್ಟ್ ಡಾ.ಶಶಿ ಎಸ್.ಎಲ್. ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. ಬೆಂಗಳೂರು ವಾಣಿ ವಿಲಾಸ್ ಆಸ್ಪತ್ರೆಯಲ್ಲಿ ಪತ್ತೆಯಾಗಿದ್ದ ಭ್ರೂಣ ಹತ್ಯೆ ಪ್ರಕರಣದಲ್ಲಿ ರಾಮನಗರದ ಜಿಲ್ಲಾಸ್ಪತ್ರೆಯಲ್ಲಿ ಭ್ರೂಣಲಿಂಗ ಪತ್ತೆ ಮಾಡಲಾಗಿದೆ ಎಂದು ಆರೋಪ ಕೇಳಿ ಬಂದಿತ್ತು.

ಆ.25 ರಂದು ಜಿಲ್ಲಾಸ್ಪತ್ರೆಯಲ್ಲಿನ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಯಂತ್ರವನ್ನು ಸೀಜ್ ಮಾಡಿ, ತನಿಖೆ ಮುಂದುವರಿಸಲಾಗಿತ್ತು. ಲಿಂಗ ಪತ್ತೆ ಮೂಲಕ ಹೆಣ್ಣು ಮಗು ಎಂದು ಖಚಿತ ಪಡೆಸಿಕೊಂಡಿರುವುದು ತನಿಖೆಯಲ್ಲಿ ಮೇಲ್ನೋಟಕ್ಕೆ ಸಾಬೀತಾಗಿದೆ. ಸ್ಕ್ಯಾನಿಂಗ್ ಯಂತ್ರ ಪರಿಶೀಲನೆಯಲ್ಲಿ ಆ.23ರಂದು ಮಧ್ಯಾಹ್ನ 3.37ರ ಸಮಯದಲ್ಲಿ ಈ ಗರ್ಭಿಣಿಗೆ ಸ್ಕ್ಯಾನಿಂಗ್ ಮಾಡಿಸಿರುವುದು ದೃಢಪಟ್ಟಿರುತ್ತದೆ. ಮುಂಚಿತವಾಗಿಯೇ ಈ ಗರ್ಭಿಣಿ ಯಾವುದೇ ಪರೀಕ್ಷೆಗಾಗಿ ದಿನಾಂಕವನ್ನು ನಿಗದಿಪಡಿಸಿಕೊಂಡಿರಲಿಲ್ಲ. ಕೆಲವೊಂದು ಎಫ್-ಫಾರಂಗಳನ್ನು ಪರೀಕ್ಷಿಸಿದಾಗ ಬೇರೆ ವ್ಯಕ್ತಿಗಳಿಗೆ ಸಂಬಂಧಿಸಿದ ದಾಖಲೆಗಳು ದೊರೆತಿವೆ. ಇವರ ದಾಖಲೆಗಳು ಲಭ್ಯವಾಗಿಲ್ಲ. ರಾಮನಗರ ಜಿಲ್ಲಾಸ್ಪತ್ರೆಯಲ್ಲಿ ಭ್ರೂಣ ಲಿಂಗ ಪತ್ತೆ ಮಾಡಿರುವುದರಿಂದಲೇ ಭ್ರೂಣಲಿಂಗ ಹತ್ಯೆ ಆಗಿದೆ ಎಂಬ ಆರೋಪ ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ.

ರೇಡಿಯಾಲಜಿಸ್ಟ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾ. ಶಶಿ ಎಸ್.ಎಲ್. ಹೆಚ್ಚಿನ ತನಿಖೆಗೆ ಒಳಪಡಿಸಲು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಆಯುಕ್ತರು ಡಾ.ಶಶಿ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

# ಕಾಂಗ್ರೆಸ್ ವಿರುದ್ಧ ಧರ್ಮಾಸ್ತ್ರ ಪ್ರಯೋಗ

**ಧರ್ಮಸ್ಥಳ ಗ್ರಾಮದಲ್ಲಿ ಸಾವಿರಾರು ಮೃತದೇಹಗಳನ್ನು ಹೂಳಲಾಗಿದೆ ಎಂದು ಆರೋಪಿಸಿ ಅಪಪ್ರಚಾರ ಮಾಡಲಾಗುತ್ತಿದೆ. ಇದು ವ್ಯವಸ್ಥಿತವಾಗಿ ಕ್ಷೇತ್ರದ ಮೇಲೆ ಮಸಿ ಬಳಿಯುವ ಕೆಲಸ ಎಂದು ಬಿಜೆಪಿ ನಾಯಕರು, ಕಾರ್ಯಕರ್ತರು ಸೇರಿ ಧರ್ಮಸ್ಥಳ ಚಲೋ ಆರಂಭಿಸಿದ್ದಾರೆ. ಧರ್ಮ ಸ್ಥಳ ಚಲೋ ಕಾರ್ಯಕ್ರಮ ಧರ್ಮಸ್ಥಳ ಕ್ಷೇತ್ರದ ಹೊರವಲಯದಲ್ಲಿರುವ ಮೈದಾನದಲ್ಲಿ ಬೃಹತ್ ಸಮಾವೇಶ ಆಯೋಜನೆಯಾಗಿತ್ತು. ಇದರಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಸಂಸದ ತೇಜಸ್ವಿ ಸೂರ್ಯ, ವಿಧಾನಸಭೆ ವಿಪಕ್ಷನಾಯಕ ಆರ್ ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ, ಛಲವಾದಿ ನಾರಾಯಣ ಸ್ವಾಮಿ, ಶೋಭಾ ಕರಂದ್ಲಾಜೆ ಸೇರಿದಂತೆ ಬಿಜೆಪಿ ನಾಯಕರು ಭಾಗಿಯಾಗಿದ್ದರು. ಸಾವಿರಕ್ಕೂ ಹೆಚ್ಚು ಬಿಜೆಪಿ ಕಾರ್ಯಕರ್ತರು, ಸುತ್ತಮುತ್ತಲಿನ ಜನರು ಸಮಾವೇಶದಲ್ಲಿ ಭಾಗವಹಿಸಿದ್ದರು. ಎಲ್ಲೆಲ್ಲೂ ಕೇಸರಿಮಯವಾಗಿತ್ತು.**



• ಉದಯವಾಹಿನಿ, ಬೆಳ್ತಂಗಡಿ

ಬೃಹತ್ ಸಮಾವೇಶದಲ್ಲಿ ಪ್ರಹ್ಲಾದ್ ಜೋಶಿ ಮಾತನಾಡಿ, ಧರ್ಮಸ್ಥಳ ಐತಿಹಾಸಿಕ ಸ್ಥಳ, ಪವಿತ್ರ ಭೂಮಿ. ಧರ್ಮಸ್ಥಳ- ನಮ್ಮ ಧರ್ಮ, ನಂಬಿಕೆ ಮತ್ತು ಇತಿಹಾಸ ಹಾಗೂ ಧಾರ್ಮಿಕತೆಯ ಭವಿಷ್ಯದ ಸಂಬಂಧ ಹೊಂದಿದೆ. ಧರ್ಮಸ್ಥಳ ಧರ್ಮದ ಸ್ಥಾನ. ಧರ್ಮಸ್ಥಳದ ಹೆಸರಿಗೆ ಕಪ್ಪು ಚುಕ್ಕೆ ಹಚ್ಚಲು ಪಣತೊಟ್ಟ ಕಾಣದ ಕೈಗಳು ಇಂದು ಹೆದರಿವೆ. ಧರ್ಮಸ್ಥಳ ವಿರುದ್ಧದ ಷಡ್ಯಂತ್ರ ಪ್ರಕರಣ ಎನ್‌ಐಎಗೆ ವಹಿಸಬೇಕು ಎಂದು ಆಗ್ರಹಿಸಿದರು.

ಧರ್ಮಸ್ಥಳದ ಪಾವಿತ್ರ್ಯತೆಯನ್ನು ಹಾಳು ಮಾಡಬೇಕೆಂಬ ಪಿತೂರಿ ಮುರಿದು ಹೋಗುತ್ತಿದೆ. ಧರ್ಮಸ್ಥಳದ ಮೇಲೆ ನಡೆದ ದಾಳಿಗೆ ಧರ್ಮವೇ ಉತ್ತರವನ್ನು ನೀಡುತ್ತಿದೆ. ಅಂದು ಇತಿಹಾಸದಲ್ಲಿ ಭಾರತದ ಹಿಂದೂ ದೇವಾಲಯಗಳ ಮೇಲೆ ಆಕ್ರಮಣಗಳು ನಡೆದವು. ಇಂದು ಸಹ ನಮ್ಮ ದೇವಾಲಯಗಳ ಮೇಲೆ ಎಡಪಂಥೀಯ ಸರ್ಕಾರಗಳು, ಕಾಣದ ಕೈಗಳ ಆಕ್ರಮಣ ಮುಂದುವರೆಯುತ್ತಲೇ ಇದೆ. ದೇವಾಲಯಗಳು ನಮ್ಮ ಧರ್ಮದ ಪ್ರಾಣವಾಯು. ಇವು ಯಾರ ಆಸ್ತಿ ಅಲ್ಲ, ಇದು ಭಕ್ತರ ಆಧ್ಯಾತ್ಮಿಕ ಕೇಂದ್ರ. ಧರ್ಮಸ್ಥಳದ ಪರದ ಹೋರಾಟ ರಾಜಕೀಯವಲ್ಲ, ಇದು ಧರ್ಮ - ಸಂಸ್ಕೃತಿಯ ರಕ್ಷಣೆಗಾಗಿ ನಡೆಯುತ್ತಿರುವ ಪ್ರಾಮಾಣಿಕ ಹೋರಾಟ ಎಂದು ಪ್ರಹ್ಲಾದ್ ಜೋಶಿ ಹೇಳಿದರು.

**ಹಿಂದೂ ವಿರೋಧಿ ಸರ್ಕಾರಕ್ಕೆ ಪಾಠ ಕಲಿಸಲು ಧರ್ಮಸ್ಥಳ ಚಲೋ ಆರಂಭಿಸಲಾಗಿದೆ. ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದ ನಂತರ, ಕರ್ನಾಟಕದ ರಾಜ್ಯದ ಗೃಹಮಂತ್ರಿಯನ್ನು ಅವರ ಮನೆಗೆ ಹೋಗಲು ಸರ್ಕಾರ ತಡೆದಿದೆ. ಧರ್ಮಸ್ಥಳ ವಿಚಾರದಲ್ಲಿ ಒಂದು ತಿಂಗಳಿಂದ ನಿತ್ಯ ಅಪಪ್ರಚಾರ ನಡೆಯುತ್ತಿದೆ. ಇಲ್ಲಿಯವರೆಗೂ ತಾಳ್ಮೆಯಿಂದಲೂ ಇದ್ದೆವು. ಧರ್ಮಸ್ಥಳ ವಿಚಾರಕ್ಕೆ ಎಸ್‌ಐಟಿ ತನಿಖೆ ವೇಳೆ ನಾವು ಸ್ವಾಗತಿಸಿದ್ದೆವು. ಆದರೆ, ಅಪಪ್ರಚಾರ ಆಗುತ್ತಿದ್ದರೆ, ಸರ್ಕಾರ ತಡೆಯುತ್ತದೆ ಎಂದುಕೊಂಡೆವು. ಆದರೆ, ಮಾಡಲಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಗುಡುಗಿದರು.**

**ಸೌಜನ್ಯ ಕೇಸ್‌ಗೆ ನ್ಯಾಯ ಬೇಕು**

**ಬುರುಡೆ ಗ್ಯಾಂಗ್ ಜೊತೆ ಸರ್ಕಾರದ ನಂಟು**

ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಧರ್ಮ ರಕ್ಷಿತನ ಧರ್ಮ ರಕ್ಷಿಪದು ಎಂಬ ಘೋಷ ವಾಕ್ಯದಡಿ ಭಾಷಣ ಮಾಡಿದ ಅವರು, ಧರ್ಮಸ್ಥಳಕ್ಕೆ ಯಾವ ವ್ಯಕ್ತಿ ಕಳಂಕ ಹಚ್ಚಬೇಕು ಎಂದು ಬುರುಡೆ ಇಟ್ಟುಕೊಂಡು ಧರ್ಮಸ್ಥಳದಿಂದ ದೆಹಲಿವರೆಗೂ ಆಟವಾಡಿದರು.

ಬುರುಡೆ ಸರ್ಕಾರದ ವಿರುದ್ಧ ಹೋರಾಡಬೇಕು. ರಾಜ್ಯದಲ್ಲಿ ಇರುವುದು ಸರ್ಕಾರವಲ್ಲ ಬುರುಡೆ ಸರ್ಕಾರ. ಬರಿಬುರುಡೆ ಬಿಡುವುದೇ ಇವರ ಕೆಲಸ. ಸೌಜನ್ಯ ಕೇಸ್ಗೆ ರಕ್ಷಣೆ, ನ್ಯಾಯ ಎರಡಕ್ಕೂ ನ್ಯಾಯಾಲಯದಲ್ಲಿ ಹೋರಾಟ ಮಾಡಬೇಕು. ಬುರುಡೆ ಗ್ಯಾಂಗ್ ಜೊತೆ ಬುರುಡೆ ಬಿಡಬಾರದು. ಬುರುಡೆ ಹೇಳುವವರನ್ನು ಮುಂದಿಟ್ಟುಕೊಂಡು ಎಡಪಂಥೀಯರ ಜೊತೆ ಸೇರಿ ಧರ್ಮಸ್ಥಳ, ಮಂಜುನಾಥನಿಗೆ ಕಳಂಕ ತರುತ್ತಿದ್ದಾರೆ. ನಾವು ಬಿಜೆಪಿ ನಾಯಕರಾಗಿಯಲ್ಲ, ಮಂಜುನಾಥ ಭಕ್ತರಾಗಿ ಹೋರಾಟ ಮಾಡಲು ಬಂದಿದ್ದೇವೆ. ಸರ್ಕಾರ ಮಾಡುತ್ತಿರುವ ಅನಾಚಾರದ ವಿರುದ್ಧ ಹೋರಾಡಬೇಕು ಎಂದು ಛಲಾದಿ ನಾರಾಯಣ ಸ್ವಾಮಿ ಹೇಳಿದರು.

**ಬುರುಡೆ ಗ್ಯಾಂಗ್ ಸಿನಿಮಾಗೆ ಕಾಂಗ್ರೆಸ್ ಪ್ರೊಡ್ಯುಸರ್:** ಕಾಂಗ್ರೆಸ್ ಸರ್ಕಾರ ಧರ್ಮದ ರಾಜಕಾರಣ ಮಾಡುತ್ತಿದೆ. ಸೌಜನ್ಯ ಕೇಸ್ ತನಿಖೆ ಮಾಡುವುದಕ್ಕೆ ನಮ್ಮ ಹೋರಾಟವಿಲ್ಲ. ಧರ್ಮಸ್ಥಳ ವಿರುದ್ಧ ಅಪಪ್ರಚಾರ ಮಾಡುತ್ತಿರುವುದರ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದೇವೆ. ಮಂಜುನಾಥನ ಕ್ಷೇತ್ರಕ್ಕೆ ಬರೋಕೆ ಸಿಎಂ, ಡಿಸಿಎಂಗೆ ಮಾನಮರ್ಯಾದೆ ಇದ್ಯಾ. ವೀರೇಂದ್ರ ಹೆಗಡೆಯವರ ಕುಟುಂಬ ಚಿತ್ರಹಿಂಸೆ ಪಟ್ಟಿದೆ ಅವರ ಶಾಪ ನಿಮ್ಮನ್ನು ತಟ್ಟದೆ ಬಿಡಲ್ಲ ಎಂದು ಹೇಳಿದರು. ಚಂದಮಾಮ ಬೇತಾಳನ ಧರ್ಮಸ್ಥಳಕ್ಕೆ ಹಿಡ್ಕೊಂಡು ಬಂದಿದ್ದಾರೆ. ಬುರುಡೆ ಗ್ಯಾಂಗ್ ಸಿನಿಮಾ ಮುಂದೆ ಆರ್‌ಆರ್ ಕೆಜಿಎಫ್ ಏನೂ ಇಲ್ಲ. ಡೈರೆಕ್ಟರ್ ಯಾರೋ ಇರಬಹುದು. ಇದಕ್ಕೆ ಪ್ರೊಡ್ಯೂಸರ್ ಮಾತ್ರ ಸರ್ಕಾರ. ಧರ್ಮಸ್ಥಳ ಆಯ್ತು ಈಗ ಚಾಮುಂಡಿ ಬೆಟ್ಟಕ್ಕೆ ಬಂದಿದ್ದೀರಾ. ದಸರಾ ಎಲ್ಲರದ್ದೂ ಅಂತೀರಾ. ಧರ್ಮಸ್ಥಳಕ್ಕೂ ಕರ್ಕೊಂಡು ಬನ್ನಿ ಬಾನು ಮುಷ್ತಾಕ್‌ರನ್ನ ಎಂದು ಆರ್ ಅಶೋಕ್‌ಕಿಡಿಕಾರಿದರು.

## ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಖಂಡಿಸಿ ಬಿಜೆಪಿ ಹೋರಾಟ

**ಬೃಹತ್ ಸಮಾವೇಶದಲ್ಲಿ ಬಿಜೆಪಿ ನಾಯಕರು, ಕಾರ್ಯಕರ್ತರು ಭಾಗಿ**





ಬುರುಡೆ ಹೇಳುವವರನ್ನು ಮುಂದಿಟ್ಟುಕೊಂಡು ಎಡಪಂಥೀಯರ ಜೊತೆ ಸೇರಿ ಧರ್ಮಸ್ಥಳ, ಮಂಜುನಾಥನಿಗೆ ಕಳಂಕ ತರುತ್ತಿದ್ದಾರೆ. ನಾವು ಬಿಜೆಪಿ ನಾಯಕರಾಗಿಯಲ್ಲ, ಮಂಜುನಾಥ ಭಕ್ತರಾಗಿ ಹೋರಾಟ ಮಾಡಲು ಬಂದಿದ್ದೇವೆ. ಸರ್ಕಾರ ಮಾಡುತ್ತಿರುವ ಅನಾಚಾರದ ವಿರುದ್ಧ ಹೋರಾಡಬೇಕು

-ಛಲವಾದಿ ನಾರಾಯಣ ಸ್ವಾಮಿ, ಬಿಜೆಪಿ ವಕ್ತಾರ




ಧರ್ಮಸ್ಥಳ ಸಣ್ಣ ದೇವಾಲಯವಲ್ಲ. ಕೋಟ್ಯಾಂತರ ಭಕ್ತರನ್ನು ಹೊಂದಿರುವ ಪುಣ್ಯಕ್ಷೇತ್ರ. ಬೀದಿಲಿ ಹೋಗುವವನು ದೂರು ಕೊಟ್ಟದ್ದಕ್ಕೆ ಪ್ರಾಥಮಿಕ ತನಿಖೆ ಮಾಡಲು ಶುರು ಮಾಡಿದರು. ಈ ಸರ್ಕಾರಕ್ಕೆ ಭಗವಂತ ಒಳಿತನ್ನು ಮಾಡುತ್ತಾನೆಯೇ. ಈ ವೇದಿಕೆ ಮೂಲಕ ನಾವು ಸೌಜನ್ಯ ಹತ್ಯ ಕೇಸ್‌ನ್ನು ಮರುತನಿಖೆ ಮಾಡಬೇಕು ಎಂದು ಆರಂಭಿಸಬೇಕು

-ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ




ಧರ್ಮಸ್ಥಳದಲ್ಲಿ ಸಾವಿರಾರು ಶವ ಹೂಲಾಲಾಗಿದೆ ಎಂದು ದೂರು ಕೊಟ್ಟ ನಂತರ ಎಸ್‌ಐಟಿ ರಚನೆ ಮಾಡಿದ್ರಿ. ಇದನ್ನು ನಾವು ಬೆಂಬಲಿಸಿದ್ದೆವು. ಆದರೆ, ತನಿಖಾ ತಂಡ ಪ್ರಕರಣದ ಹಿಂದಿರುವ ಸಣ್ಣ ಮೀನುಗಳನ್ನು ಹಿಡಿಯುತ್ತಿದೆ. ಆದರೆ, ತಿಮಿಂಗಿಲಕ್ಕಾಗಿ ಬಲೆ ಬೀಸಬೇಕು

-ಆರ್ ಅಶೋಕ್, ವಿರೋಧ ಪಕ್ಷದ ನಾಯಕ



ಮೊದಲಿಗೆ ಎಸ್‌ಐಟಿ ಬೇಕಿಲ್ಲ ಎಂದು ಹೇಳಿ ಮತ್ತೆ ಸರ್ಕಾರ ತನಿಖೆ ತಂಡ ರಚಿಸಿದ್ಯಾಕೆ ಯಾರೋ ಒಬ್ಬ ಬುರುಡೆ ತಂದು ಕೊಟ್ಟಾಗ, ಅವನ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿಲ್ಲ. ಜೊತೆಗೆ ಎಲ್ಲಿಂದ ಬುರುಡೆ ಸಿಕ್ಕಿತ್ತು ಎಂದು ಸಹ ಪ್ರಶ್ನೆ ಮಾಡಿಲ್ಲ. 16 ಗುಂಡಿ ಅಗೆದರೂ ಬುರುಡೆ ಮಾತ್ರ ಸಿಗಲಿಲ್ಲ

-ಪ್ರಹ್ಲಾದ್ ಜೋಶಿ, ಕೇಂದ್ರ ಸಚಿವ



ಚಾಮುಂಡಿ ಬೆಟ್ಟ ಹಿಂದೂಗಳದ್ದೇ, ಹಿಂದೂಗಳದ್ದು ಮಾತ್ರ! ಹೀಗಂತ ಹೋರಾಟದ ಬಿಸಿ ಮೂಲಕ ಡಿಸಿಎಂ ಡಿಕೆಶಿ ಹಾಗೂ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ಬಿಜೆಪಿ ಮುಂದಾಗಿದೆ. ಚಾಮುಂಡಿ ಬೆಟ್ಟ ಹಿಂದೂಗಳದ್ದಲ್ಲ ಎಂಬ ಮಾತಿಗೆ ಮೈಸೂರಿನಲ್ಲೇ ತಕ್ಕ ಉತ್ತರ ಕೊಡಲು ಬಿಜೆಪಿ ಅಖಾಡ ಸಿದ್ದ ಮಾಡಿಕೊಳ್ತಿದೆ. ಧರ್ಮಸ್ಥಳ ಚಲೋ ಮಾದರಿಯಲ್ಲೇ ಚಾಮುಂಡಿ ಚಲೋಗೆ ಕೇಸರಿ ಸಜ್ಜಾಗುತ್ತಿದೆ. ಮೈಸೂರಿನಿಂದ ಚಾಮುಂಡಿ ಬೆಟ್ಟದವರೆಗೆ ನಡಿಗೆ ಜಾಥಾಕ್ಕೆ ಬಿಜೆಪಿ ಚಿಂತನೆ ನಡೆಸಿದೆ. ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ, ವಿಪಕ್ಷ ನಾಯಕ ಆರ್ ಅಶೋಕ್ ನೇತೃತ್ವದಲ್ಲಿ ಚಾಮುಂಡಿ ಚಲೋಗೆ ಸಧ್ಯದಲ್ಲೇ ಮುಹೂರ್ತ ಫಿಕ್ಸ್ ಮಾಡಲಾಗುತ್ತದೆ. ಚಾಮುಂಡಿ ಚಲೋ ಮೂಲಕ ಮತ್ತೊಂದು ಹಿಂದುತ್ವ ಅಸ್ತ್ರ ಪ್ರಯೋಗ ಮಾಡಲಿದೆ. ಧರ್ಮಸ್ಥಳ ಹೋರಾಟ ಜತೆ ಜತೆಗೇ ಚಾಮುಂಡಿ ಹೋರಾಟ ಕೈಗೊಂಡು ಸರ್ಕಾರಕ್ಕೆ ಎದಿರೇಟು ಕೊಡಲು ಪಣ ತೊಟ್ಟಿದೆ.

**ಮತ್ತೊಂದು ಧರ್ಮಾಸ್ತ್ರಕ್ಕೆ ಕೇಸರಿ ಸಜ್ಜು!**

**ಕಾಂಗ್ರೆಸ್ ಸರ್ಕಾರ, ಎಡಪಂಥೀಯರ ವಿರುದ್ಧ ಬಿಜೆಪಿ ನಾಯಕರ ವಾಗ್ದಾಳಿ**

**ಬಿಜೆಪಿ ಧರ್ಮಸ್ಥಳ ಚಲೋ**

**ತಿರುಗೇಟು ನೀಡಿದ ಸಿದ್ದರಾಮಯ್ಯ!**

ಬಿಜೆಪಿಯ ಚಾಮುಂಡಿ ಚಲೋ ಬಗ್ಗೆ ಮೈಸೂರಿನಲ್ಲಿ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ. ಚಾಮುಂಡಿ ಬೆಟ್ಟ ಹಿಂದೂಗಳ ಆಸ್ತಿನೇ ಇರಬಹುದು. ಈಗ ವಿಚಾರ ಇರುವುದು ದಸರಾ ಬಗ್ಗೆ. ಚಾಮುಂಡಿ ಬೆಟ್ಟದ್ದು ಅಲ್ಲ ಎಂದಿದ್ದಾರೆ. ಡಿಕೆಶಿ ಹೇಳಿದ್ದು ನನಗೆ ಗೊತ್ತಿಲ್ಲ. ದಸರಾ ವಿಚಾರ ಬಗ್ಗೆ ಮಾತ್ರ ಈಗ ಚರ್ಚೆಯಲ್ಲಿ ಇದೆ. ಚಾಮುಂಡಿ ಬೆಟ್ಟದ್ದು ಅಲ್ಲ ಅಂತ ಸಿಎಂ ಹೇಳಿದ್ರು. ಇನ್ನು, ಹಿಂದುತ್ವ ಗಟ್ಟಿ ಆಗುತ್ತೆ ಎಂದು ಬಿಜೆಪಿ ಈ ಯಾತ್ರೆಗಳ ಪ್ಲಾನ್ ಮಾಡುತ್ತಿದೆ. ಇವರಿಂದ ಹಿಂದುತ್ವ ಗಟ್ಟಿಯಾಗಲ್ಲ. ನಾನು ಕೂಡ ಹಿಂದೂ. ನಾವೆಲ್ಲರೂ ಕೂಡ ಹಿಂದೂಗಳೇ ಎಂದು ತಿರುಗೇಟು ನೀಡಿದ್ದಾರೆ. ನಾನು ನಮ್ಮ ಊರಲ್ಲಿ ರಾಮ ಮಂದಿರ ಕಟ್ಟಿಸಿದ್ದೇನೆ. ಹಿಂದೂಗಳು ಎಂದರೆ ಸುಳ್ಳು ಹೇಳುವುದು, ಅಪಪ್ರಚಾರ, ಮಾಡುವುದಲ್ಲ. ಮನುಷ್ಯತ್ವ ಇರುವವರು ಹಿಂದೂಗಳು. ಅಮಾನವೀಯ ನಡವಳಿಕೆ ತೋರುವವರು ಹಿಂದೂಗಳಲ್ಲ. ಸುಳ್ಳು ಹೇಳುವುದು ಬಿಟ್ಟು ಬಿಜೆಪಿ ಗೆ ಏನೂ ಗೊತ್ತು ಹಿಂದೂಗಳೆಲ್ಲಾ ಬಿಜೆಪಿ ಜೊತೆ ಇಲ್ಲ ಅಂತ ಸಿಎಂ ಟಾಂಗ್ ನೀಡಿದ್ದಾರೆ.



# ಸಂಪುಟದಿಂದ ವಜಾಗೊಂಡರೂ ರಾಜಣ್ಣ ಸೈಲೆಂಟ್

■ ರಾಜಣ್ಣ ಅವರನ್ನು ಮತ್ತೆ ಸಂಪುಟಕ್ಕೆ ಸೇರಿಸಿಕೊಳ್ಳಲು ದೆಹಲಿಗೆ ನಿಯೋಗ ತೆರಳುವ ಸಾಧ್ಯತೆ ■ ತೆರೆಮರೆಯಲ್ಲಿ ಸಿದ್ದು ಆಪ್ತನ ತಂತ್ರಗಾರಿಕೆ

• ಉದಯವಾಹಿನಿ, ಬೆಂಗಳೂರು

ಮತಕಳ್ಳತನದ ಕುರಿತಾಗಿ ಕೆ ಎನ್ ರಾಜಣ್ಣ ನೀಡಿದ್ದ ಹೇಳಿಕೆ ಅವರ ಪಾಲಿಗೆ ದುಬಾರಿಯಾಗಿ ಪರಿಣಮಿಸಿದೆ. ಸಚಿವ ಸಂಪುಟದಿಂದ ವಜಾಗೊಂಡರೂ ಸದ್ಯ ರಾಜಣ್ಣ ಸೈಲೆಂಟ್ ಆಗಿದ್ದಾರೆ.

ಆದರೆ ತೆರೆಮರೆಯಲ್ಲಿ ಮಾಜಿ ಸಚಿವ ಏನೆಲ್ಲಾ ತಂತ್ರಗಾರಿಕೆ ನಡೆಸುತ್ತಿದ್ದಾರೆ ಎಂಬುವುದು ಸಾಕಷ್ಟು ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ.

ಸಿದ್ದರಾಮಯ್ಯ ಪರವಾಗಿ ಗಟ್ಟಿ ಧ್ವನಿಯಲ್ಲಿ ಮಾತನಾಡುತ್ತಿದ್ದ ಕೆ ಎನ್ ರಾಜಣ್ಣ ಅವರು ಡಿಕೆಶಿ ಬಣದ ಕೆಂಗಣ್ಣಿಗೆ ಗುರಿಯಾಗಿದ್ದರು. ರಾಜಣ್ಣ ವಿರುದ್ಧ ಹೈಕಮಾಂಡ್ ನಾಯಕರಿಗೆ ಡಿಕೆಶಿ ಬಣ ದೂರನ್ನು ನೀಡಿತ್ತು. ಈ ನಡುವೆ ರಣದೀಪ್ ಸಿಂಗ್ ಸುರ್ಜೇವಾಲ ಅವರ ವಿರೋಧವನ್ನು ರಾಜಣ್ಣ ಕಟ್ಟಿಕೊಂಡಿದ್ದರು.

ಸಂದರ್ಭ ಕಾಯುತ್ತಿದ್ದ ರಾಜಣ್ಣ ವಿರೋಧಿ ಬಣಕ್ಕೆ ಮತಕಳ್ಳತನದ ಕುರಿತಾದ ಅವರ ಹೇಳಿಕೆ ಬ್ರಹ್ಮಾಸ್ತ್ರವಾಗಿ ದೊರಕಿತ್ತು. ಇದನ್ನೇ ಮುಂದಿಟ್ಟುಕೊಂಡು ಅವರು ಹೈಕಮಾಂಡ್ ನಾಯಕರ ಗಮನಕ್ಕೆ ತಂದಿದ್ದರು. ಇದರಿಂದ ಕೆರಳಿದ ಹೈಕಮಾಂಡ್ ಅಧಿವೇಶನದ ನಡೆಯುತ್ತಿದ್ದ ಸಂದರ್ಭದಲ್ಲೇ ಸಂಪುಟದಿಂದ ವಜಾಗೊಳಿಸಿತ್ತು. ಇಂತಹದೊಂದು ಕಠಿಣ ತೀರ್ಮಾನವನ್ನು ತಡೆಯಲು ಸಿದ್ದರಾಮಯ್ಯ ಅವರಿಂದಲೂ ಸಾಧ್ಯವಾಗಿರಲಿಲ್ಲ.



**ಸಿದ್ದು ಮೌನ, ರಾಜಣ್ಣನೂ ಸೈಲೆಂಟ್!:** ಸಂಪುಟದಿಂದ ಅಗೌರವಯುತವಾಗಿ ವಜಾಗೊಂಡರೂ ಕೆ ಎನ್ ರಾಜಣ್ಣ ಬಂಡಾಯ ಸಾರಲಿಲ್ಲ. ವಜಾ ನಿರ್ಧಾರದ ಹಿಂದೆ ಯಾರ ಕೈವಾಡ ಇದೆ ಎಂಬ ಬಗ್ಗೆ ಹೇಳಿಕೆಯನ್ನು ನೀಡಿದ್ದರೂ ಸಿದ್ದರಾಮಯ್ಯ ಅವರ ಪರವಾಗಿ ಮತ್ತೆ ಬ್ಯಾಟಿಂಗ್ ಮಾಡುತ್ತಲೇ ಇದ್ದಾರೆ. ಆದರೆ ತನ್ನ ಮುಂದಿನ ಹೆಜ್ಜೆಯ ಬಗ್ಗೆ ಅವರು ಯಾವುದೇ ಸುಳಿವನ್ನು ಬಿಟ್ಟುಕೊಟ್ಟಿಲ್ಲ.

**ಹಾಗಾದ್ರೆ ಮುಂದಿನ ನಡೆ ಏನು?**

ಸದ್ಯ ತನ್ನ ಮುಂದಿನ ನಡೆಯ ಸುಳಿವನ್ನು ರಾಜಣ್ಣ ಬಿಟ್ಟುಕೊಡಲಿಲ್ಲ. ಆದರೆ ರಾಜಣ್ಣ ಅವರು ಹಾಗೂ ಆಪ್ತರು ದೆಹಲಿಗೆ ತೆರಳುವ ಸಾಧ್ಯತೆ ಇದೆ. ಸದ್ಯ ರಾಹುಲ್ ಗಾಂಧಿ ಬಿಹಾರ ಚುನಾವಣೆಯಲ್ಲಿ ಬ್ಯುಸಿಯಾಗಿದ್ದಾರೆ. ಹೀಗಾಗಿ ರಾಹುಲ್ ಗಾಂಧಿಯನ್ನು ಕೆಲವು ದಿನಗಳ ಬಳಿಕ ಭೇಟಿ ಮಾಡಿ ಮಾತುಕತೆ ನಡೆಸವ ಸಾಧ್ಯತೆ ಇದೆ. ಆದರೆ ರಾಜಣ್ಣ ಅವರಿಗೆ ಹೈಕಮಾಂಡ್ ನಿಂದ ಯಾವ ರೀತಿಯಲ್ಲಿ ಸ್ಪಂದನೆ ಸಿಗಲಿದೆ ಎಂಬುವುದು ಮಾತ್ರ ಕುತೂಹಲಕ್ಕೆ ಕಾರಣವಾಗಿದೆ.

**ತೆರೆಮರೆಯಲ್ಲಿ ತಂತ್ರಗಾರಿಕೆ?** ಕೆ ಎನ್ ರಾಜಣ್ಣ ಅವರು ಸೈಲೆಂಟ್ ಆಗಿದ್ದರೂ ತೆರೆಮರೆಯಲ್ಲಿ ತಂತ್ರಗಾರಿಕೆ ನಡೆಸುತ್ತಿದ್ದಾರಾ? ಎಂಬ ಪ್ರಶ್ನೆಯೂ ಮೂಡುತ್ತಿದೆ. ರಾಜಣ್ಣ ಅವರ ತುಮಕೂರಿನ ನಿವಾಸದಲ್ಲಿ ದಲಿತ ಸಮುದಾಯದ ಮಠಾಧೀಶರ ಒಕ್ಕೂಟದ ನಿಯೋಗದಿಂದ 15 ಕ್ಕೂ ಹೆಚ್ಚು ಮಠಾಧೀಶರು ಭೇಟಿ ನೀಡಿದ್ದರು. ಇದೇ ಸಂದರ್ಭದಲ್ಲಿ ಮಠಾಧೀಶರ ಜೊತೆಗೆ ರಾಜಣ್ಣ ಸಭೆಯನ್ನು ನಡೆಸಿದ್ದಾರೆ. ಏಕಾಏಕಿ ಅಗೌರವಯುತವಾಗಿ ಸಂಪುಟದಿಂದ ವಜಾಗೊಳಿಸಿರುವ ಬಗ್ಗೆ ಮಠಾಧೀಶರು ತಮ್ಮ ಅಸಮ್ಮತಿಯನ್ನು ಇದೇ ವೇಳೆ ವ್ಯಕ್ತಪಡಿಸಿದ್ದಾರೆ. ಸುಮಾರು ಒಂದು ತಾಸುಗಳ ಕಾಲ ಚರ್ಚೆಯನ್ನು ನಡೆಸಿದ್ದಾರೆ. ಶೀಘ್ರದಲ್ಲಿ ಒಂದು ನಿಯೋಗ ದೆಹಲಿಗೆ ತೆರಳಿ ರಾಜಣ್ಣ ಅವರನ್ನು ಮರಳಿ ಸಂಪುಟಕ್ಕೆ ಸೇರ್ಪಡೆಗೊಳಿಸಲು ಒತ್ತಡ ಹೇರುವ ನಿಟ್ಟಿನಲ್ಲಿಯೂ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ಇನ್ನು ಈ ಎಲ್ಲಾ ಬೆಳವಣಿಗೆಗಳ ಬಗ್ಗೆ ಸಿಎಂ ಸಿದ್ದರಾಮಯ್ಯ ಯಾವ ಹೇಳಿಕೆಯನ್ನು ನೀಡಿಲ್ಲ. ಅವರ ಮೌನವೂ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ. ಇದರ ನಡುವೆ ಸಿದ್ದರಾಮಯ್ಯ ಅವರ ಆಪ್ತರಾಗಿರುವ ರಾಜಣ್ಣ ಅವರನ್ನು ಸಂಪುಟದಿಂದ ಏಕಾ ಏಕಿ ಕೈಬಿಡುವುದನ್ನು ತಪ್ಪಿಸಲು ಸಿದ್ದರಾಮಯ್ಯ ಅವರಿಂದ ಯಾಕಾಗಿ ಸಾಧ್ಯವಾಗಿಲ್ಲ? ಎಂಬ ಪ್ರಶ್ನೆಯೂ ಉದ್ಭವಿಸುತ್ತಿದೆ.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹10,588/Gram24ct ₹9,705/Gram22ct ಬೆಳ್ಳಿ: ₹126.00/Gram

# ಗಿಡಗಳನ್ನು ನೆಟ್ಟು ಬೆಳೆಸುವಂತೆ ಸಮಾಜ ಸೇವಕಿ ಮನವಿ



• ಉದಯವಾಹಿನಿ ಕೆ.ಆರ್.ಪುರ

ಸ್ವಚ್ಛ, ಸುಂದರ ಮತ್ತು ಆರೋಗ್ಯವಂತ ಪರಿಸರ ನಿರ್ಮಾಣಕ್ಕಾಗಿ ಹೆಚ್ಚು ಹೆಚ್ಚು ಗಿಡಗಳನ್ನು ನೆಟ್ಟು ಬೆಳೆಸುವಂತೆ ಸಮಾಜ ಸೇವಕಿ ತೃಪ್ತಿ ರವಿ ರೆಡ್ಡಿ ಸಾರ್ವಜನಿಕರಲ್ಲಿ ಮನವಿ ಮಾಡಿದರು. ಮಹದೇವಪುರ ಕ್ಷೇತ್ರದ ಮಾರತ್ತಹಳ್ಳಿ ಸಂಜಯನಗರದ ಸರ್ಕಾರಿ ಆಸ್ಪತ್ರೆ ಅಂಗಳದಲ್ಲಿ ಸ್ಟೈಲ್ ಅಂಡ್ ಟ್ರೆಂಡ್ಸ್ ವತಿಯಿಂದ ಆಯೋಜಿಸಿದ ಗಿಡ ನೆಡುವ ಕಾರ್ಯಕ್ರಮದಲ್ಲಿ ಗಿಡ ನೆಟ್ಟು ಗಿಡಕ್ಕೆ ನೀರೆರೆದು ಮಾತನಾಡಿದ ಅವರು ನಗರದಲ್ಲಿ ಶಬ್ದ, ವಾಯು ಮಾಲಿನ್ಯ ಹೆಚ್ಚುತ್ತಿದೆ. ಮರಗಳ ನಾಶದಿಂದ ನಾನಾ ಸಮಸ್ಯೆಗಳಿಂದ ಭೂಮಿ ಅಪಾಯದ ಅಂಚಿನಲ್ಲಿದೆ. ಆದಾ ಕಾರಣ ಪ್ರತಿಯೊಬ್ಬರೂ ಜಾಗೃತರಾಗಿ ಹೆಚ್ಚು ಗಿಡಗಳನ್ನು ನೆಟ್ಟು ಪೋಷಿಸುವ ಮೂಲಕ ಪರಿಸರ ಸಂರಕ್ಷಣೆಗೆ ಮಹತ್ವದ ಕಾರ್ಯಮಾಡಬೇಕಿದೆ ಎಂದು ನುಡಿದರು. ಬಿಜೆಪಿ ಮಹಿಳಾ ಮುಖಂಡರಾದ ವೀಣಾ ಮಾತನಾಡಿ ತೃಪ್ತಿ ಅವರಂತೆ ಪ್ರತಿಯೊಬ್ಬರೂ ಸಮಾಜಕ್ಕೆ ಉಪಕಾರಿಯಾದ ಕೆಲಸಗಳನ್ನು ಮಾಡಬೇಕು, ವೃಕ್ಷ ರಕ್ಷಣೆಗೆ ಸಾಲುಮರದ ತಿಮ್ಮಕ್ಕ ಶ್ರಮಿಸಿದಂತೆ, ತೃಪ್ತಿಯವರು ಸಹ ಪರಿಸರ ಸಂರಕ್ಷಣೆಗೆ ಮುಂದಾಗಿದ್ದಾರೆ. ಅವರ ಸೇವೆಗೆ ನಮ್ಮ ಬೆಂಬಲ ನೀಡೋಣ ಎಂದರು.

ಸಮಾಜಸೇವಕ, ಯುವಮುಖಂಡ ರವಿರೆಡ್ಡಿ ಮತನಾಡಿ, ಅಭಿವೃದ್ಧಿ ಹೆಸರಿನಲ್ಲಿ ಮರ ಕಡಿಯುವುದು ಬಿಟ್ಟು, ನಿಮ್ಮ ಜನ್ಮದಿನ, ಶುಭಸಮಾರಂಭಕ್ಕೆ ಗಿಡಗಳನ್ನು ನೆಟ್ಟು ಮುಂದಿನ ಪೀಳಿಗೆಗೆ ಪರಿಸರ ಉಳಿಸಲು ಶ್ರಮಿಸಬೇಕಿದೆ ಎಂದರು. ಈ ವೇಳೆ ಪರಿಸರ ಪ್ರೇಮಿ ಮಂಜು, ಸ್ಥಳೀಯ ಬಿಜೆಪಿ ಮುಖಂಡರಾದ ಬಸವರಾಜು, ಸೇರಿದಂತೆ ನೂರಾರು ಮಹಿಳಾ ಮುಖಂಡರು, ಪರಿಸರ ಪ್ರೇಮಿಗಳು, ಸ್ಥಳೀಯ ನಿವಾಸಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

# ಭಜನ – ಪ್ರವಚನ – ಸಂಕೀರ್ತನ ಆಯೋಜನೆ : ಟಿ ಟಿ ಡಿ ಹೆಚ್.ಡಿ.ಪಿ.ಪಿ.

• ಉದಯವಾಹಿನಿ ಬೆಂಗಳೂರು

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ಯಲಹಂಕ ಉಪನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಸೆಪ್ಟೆಂಬರ್ 2 ರಿಂದ 5ರ ವರೆಗೆ ಧಾರ್ಮಿಕ/ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅವುಗಳ ವಿವರಗಳು ಈ ರೀತಿ ಇವೆ



**ಭಜನಾ ಕಾರ್ಯಕ್ರಮ :** (ಪ್ರತಿದಿನ ಸಂಜೆ 6-00 ರಿಂದ 7-00) ಸೆಪ್ಟೆಂಬರ್ 2-ಯಲಹಂಕದ ವೈಷ್ಣವಿ ಭಜನಾ ಮಂಡಳಿ, ಸೆಪ್ಟೆಂಬರ್ 3-ಮತ್ತಿಕೆರೆಯ ಶ್ರೀ ಲಕ್ಷ್ಮೀ ವೆಂಕಟೇಶ್ವರ ಭಜನಾ ಮಂಡಳಿ, ಸೆಪ್ಟೆಂಬರ್ 4-ಯಲಹಂಕದ ಹನುಮಾನ್ ಕೀ ಜೈ ಭಜನಾ ಮಂಡಳಿ.

**ಪ್ರವಚನ ಕಾರ್ಯಕ್ರಮ :** ಸೆಪ್ಟೆಂಬರ್ 2 ರಿಂದ 4ರ ವರೆಗೆ (ಪ್ರತಿದಿನ ಸಂಜೆ 7-00 ರಿಂದ 8-00). ಶ್ರೀ ಕಂಬಾಲೂರು ವಿಜಯವಿಠಲಾಚಾರ್ಯರಿಂದ ಪ್ರೋಷ್ಠಪದಿ ಭಾಗವತ ವಿಷಯವಾಗಿ ಧಾರ್ಮಿಕ ಪ್ರವಚನ.

**ಹರಿನಾಮ ಸಂಕೀರ್ತನೆ :** ಸೆಪ್ಟೆಂಬರ್ 5, ಶುಕ್ರವಾರ, ಸಂಜೆ 6-30 ರಿಂದ 8-00ರ ವರೆಗೆ ಹರಿನಾಮ ಸಂಕೀರ್ತನೆ. ಗಾಯನ : ಶ್ರೀಮತಿ ಚಾಂದನಿ ಗರ್ತಿಗರೆ, ಮೃದಂಗ: ಶ್ರೀ ಶ್ರೀನಿವಾಸ್ ಅನಂತರಾಮಯ್ಯ, ಪಿಟೀಲು ಶ್ರೀ ಅರ್ಜುನ್ ಎನ್. **ಕಾರ್ಯಕ್ರಮ ನಡೆಯುವ ಸ್ಥಳ:** ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಯಲಹಂಕ ಉಪನಗರ, ಬೆಂಗಳೂರು-560064. ಹೆಚ್ಚಿನ ಮಾಹಿತಿಗಾಗಿ : ಡಾ|| ಪಿ. ಭುಜಂಗರಾವ್, ಮೊಬೈಲ್ 7760505503 / 9035760790

# ಮಾಜಿ ಪ್ರೇಯಸಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ ಕ್ಯಾಬ್ ಚಾಲಕ..!

• ಉದಯವಾಹಿನಿ ಬೆಂಗಳೂರು

ತನ್ನ ಮಾಜಿ ಪ್ರೇಯಸಿಗೆ ಕ್ಯಾಬ್ ಚಾಲಕನೊಬ್ಬ ಹಾಡು ಹಗಲೇ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿರುವ ಘಟನೆಯೊಂದು ಬನ್ನೇರುಘಟ್ಟ ಬಳಿಯ ಹೊಮ್ಮದೇವನಹಳ್ಳಿ ಮುಖ್ಯ ರಸ್ತೆಯಲ್ಲಿ ಶನಿವಾರ ನಡೆದಿದೆ. ಆರೋಪಿಯನ್ನು ಬನ್ನೇರುಘಟ್ಟದ ಮಲೆನಲ್ಲಸಂದ್ರ ನಿವಾಸಿ ವಿಟ್ಠಲ್ (50) ಎಂದು ಗುರ್ತಿಸಲಾಗಿದ್ದು, ಸಂತ್ರಸ್ತ ಮಹಿಳೆಯನ್ನು ಬನ್ನೇರುಘಟ್ಟದ ಬಿಲ್ವರದಹಳ್ಳಿ ನಿವಾಸಿ ವನಜಾಕ್ಷಿ (25) ಎಂದು ಗುರ್ತಿಸಲಾಗಿದೆ. ವನಜಾಕ್ಷಿ ಅವರಿಗೆ ಶೇ.60ರಷ್ಟು ಸುಟ್ಟ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆಕೆಯ ಸ್ಥಿತಿ ಗಂಭೀರವಾಗಿದೆ ಎಂದು ಹೇಳಲಾಗುತ್ತಿದೆ. ಶನಿವಾರ ಮಧ್ಯಾಹ್ನ 1 ಗಂಟೆ ಸುಮಾರಿಗೆ ವನಜಾಕ್ಷಿ ಅವರು, ಪ್ರಸ್ತುತ ಲಿವ್-ಇನ್ ಸಂಗಾತಿ ಮುನಿಯಪ್ಪ (49) ವೃದ್ಧ ಸಂಬಂಧಿ ಜೊತೆಗೆ ಕುಟುಂಬದ ಸದಸ್ಯರೊಬ್ಬರನ್ನು ಭೇಟಿ ಮಾಡಲು ಕಾರಿನಲ್ಲಿ ಸೇಂಟ್ ಜಾನ್ಸ್ ಆಸ್ಪತ್ರೆಗೆ ಹೋಗುತ್ತಿದ್ದರು.

# ನಡುರಸ್ತೆಯಲ್ಲೇ ಬಸ್ ನಿಲ್ಲಿಸಿ ಬಿಎಂಟಿಸಿ ಚಾಲಕರಿಬ್ಬರ ಕಿತ್ತಾಟ

• ಉದಯವಾಹಿನಿ ಬೆಂಗಳೂರು

ನಡುರಸ್ತೆಯಲ್ಲಿಯೇ ಬಸ್ ನಿಲ್ಲಿಸಿ ಬಿಎಂಟಿಸಿ ಚಾಲಕರಿಬ್ಬರು ಗಲಾಟೆ ಮಾಡಿಕೊಂಡಿರುವ ಘಟನೆ ನಗರದ ಕಂಠೀರವ ಸ್ಟುಡಿಯೋ ರಸ್ತೆಯಲ್ಲಿ ನಡೆದಿದೆ. ಬಿಎಂಟಿಸಿ ಚಾಲಕರಿಬ್ಬರು ನಡುರಸ್ತೆಯಲ್ಲಿಯೇ ಬಸ್ ನಿಲ್ಲಿಸಿಕೊಂಡು ರಂಪಾಟ ಮಾಡಿದ್ದಾರೆ. ಪ್ರಯಾಣಿಕರು ಬಸ್ ಮೂವ್ ಮಾಡುವಂತೆ ಎಷ್ಟೇ ಕೇಳಿಕೊಂಡರೂ ತಲೆಕೆಡಿಸಿಕೊಳ್ಳದೇ ಕಿತ್ತಾಡಿದ್ದಾರೆ. ಚಾಲಕರಿಬ್ಬರ ಗಲಾಟೆ ನೋಡಿದ ಪ್ರಯಾಣಿಕರು ನೀವು ಹೀಗೆ ಮಾಡಿದರೆ ನಾವು ಯಾರಿಗೆ ಹೇಳಬೇಕು ಯಾಕೆ ಗಾಡಿಯನ್ನು ಸೈಡ್‌ಗೆ ಹಾಕಿದ್ದೀರಾ ಎಂದು ಪ್ರಶ್ನೆ ಮಾಡಿದ್ದಾರೆ. ಇವರ ಕಿತ್ತಾಟದಿಂದ ಬೇಸತ್ತ ಪ್ರಯಾಣಿಕರು ವಿಡಿಯೋ ಮಾಡಿ ಚಾಲಕರ ಬೀದಿ ರಂಪಾಟವನ್ನು ಬಿಚ್ಚಿಟ್ಟಿದ್ದಾರೆ

# ವಿಮಾನ ನಿಲ್ದಾಣ ಸಂಪರ್ಕಕ್ಕಾಗಿ ಯೋಜಿಸಿದ್ದ ಕಿರು ರೈಲು ಯೋಜನೆ ಕೈಬಿಟ್ಟ ರೈಲ್ವೆ ಇಲಾಖೆ

## ರೈಲು ಮಾರ್ಗವನ್ನು ಅನಗತ್ಯವೆಂದು ಪರಿಗಣಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ

• ಉದಯವಾಹಿನಿ ಬೆಂಗಳೂರು

ಬೆಂಗಳೂರು ನಗರದಿಂದ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕಿಸುವ ಕಿರು ರೈಲು ಯೋಜನೆಯನ್ನು ಕೈಬಿಡಲಾಗಿದೆ. ಬೆಂಗಳೂರು ನಗರದೊಂದಿಗೆ ಸಂಪರ್ಕಿಸುವ ಕಿರು ರೈಲು ಸಂಪರ್ಕವನ್ನು ರಚಿಸುವ ರೈಲ್ವೆಯ ಇಲಾಖೆಯ ಹಿಂದಿನ ಪ್ರಸ್ತಾವನೆಯನ್ನು ಪಾಲುದಾರರ ಸಭೆಯ ನಂತರ ಕೈಬಿಡಲಾಗಿದೆ. ವಿಮಾನ ನಿಲ್ದಾಣವು ಈಗಾಗಲೇ ಮೆಟ್ರೊ ಮತ್ತು ಉಪನಗರ ರೈಲು ಜಾಲಗಳಿಂದ ಸೇವೆ ಸಲ್ಲಿಸಲಾಗುತ್ತಿರುವುದರಿಂದ ಪ್ರತ್ಯೇಕ ರೈಲು ಮಾರ್ಗದ ಅಗತ್ಯವಿಲ್ಲ ಎಂದು ಅಧಿಕಾರಿಗಳು ತೀರ್ಮಾನಿಸಿದ್ದಾರೆ.

ರೈಲ್ವೆ ಸಚಿವೆ ಅಶ್ವಿನಿ ವೈಷ್ಣವ್ ಅವರು ನಗರದ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಈ ಯೋಜನೆಯನ್ನು ಫೆಬ್ರವರಿಯಲ್ಲಿ ಘೋಷಿಸಿದ್ದರು. ಈ ಪ್ರಸ್ತಾವನೆಯು ಮೂರು ನಿಲ್ದಾಣಗಳನ್ನು ಒಳಗೊಂಡ ರೈಲ್-ಓವರ್-ರೈಲ್ (ಆರ್ ಒಆರ್) ಫ್ಲೈಓವರ್ ಒಳಗೊಂಡಿತ್ತು.

ಪ್ರಸ್ತುತ, ವಿಮಾನ ನಿಲ್ದಾಣಕ್ಕೆ ಹತ್ತಿರದ ರೈಲು ನಿಲ್ದಾಣವೆಂದರೆ ಕೆಐಎ ಹಾಲ್ಟ್ ಸ್ಟೇಷನ್, ಇದು ಟರ್ಮಿನಲ್‌ನಿಂದ 3.5 ಕಿ.ಮೀ ದೂರದಲ್ಲಿದೆ. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ ಬಿಐಎಎಲ್ ನಿಲ್ದಾಣ ಮತ್ತು ಟರ್ಮಿನಲ್‌ನಡುವೆ



ಉಚಿತ ಶಟಲ್ ಸೇವೆಗಳನ್ನು ನಿರ್ವಹಿಸುತ್ತಿದೆ.

ರೈಲು ವೇಳಾಪಟ್ಟಿಗಳೊಂದಿಗೆ ಸಂಯೋಜಿಸಲಾಗಿದೆ. ಇದರ ಹೊರತಾಗಿಯೂ, ಇತರ ದೂರದ ರೈಲುಗಳು ಸಹ ಬಳಸುತ್ತಿರುವ ಯಲಹಂಕ-ದೇವನಹಳ್ಳಿ ಕಾರಿಡಾರ್‌ನಲ್ಲಿಸೀಮಿತ ರೈಲು ಸೇವೆಗಳು ಮಾತ್ರ ಲಭ್ಯವಿರುವುದರಿಂದ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಿದೆ.

ವಿಮಾನ ನಿಲ್ದಾಣ ನಿರ್ವಾಹಕರೊಂದಿಗೆ ಚರ್ಚಿಸಿದ ನಂತರ ಯೋಜನೆಯಿಂದ ಹಿಂದಕ್ಕೆ ಸರಿಯಲಾಗಿದೆ. ಮೆಟ್ರೊ ಮತ್ತು ಉಪನಗರ ರೈಲು ಮಾರ್ಗಗಳನ್ನು ಈಗಾಗಲೇ ವಿಮಾನ ನಿಲ್ದಾಣಕ್ಕೆ ವಿಸ್ತರಿಸಲಾಗುತ್ತಿರುವುದರಿಂದ, ಮತ್ತೊಂದು ರೈಲು ಮಾರ್ಗವನ್ನು ಅನಗತ್ಯವೆಂದು ಪರಿಗಣಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಏತನ್ಮಧ್ಯೆ, ನಮ್ಮ ಮೆಟ್ರೊದ ನೀಲಿ ಮಾರ್ಗದ ಕೆ.ಆರ್. ಪುರಂ-ಕೆಐಎ ಕೆಲಸಗಳು ಪ್ರಗತಿಯಲ್ಲಿವೆ.

ಹೆಚ್ಚುವರಿಯಾಗಿ, ಬೆಂಗಳೂರಿನ ಉಪನಗರ ರೈಲು ಜಾಲವನ್ನು ಕಾರ್ಯಗತಗೊಳಿಸುತ್ತಿರುವ ಕೆ-ರೈಡ್, ಕೆಎಸ್‌ಆರ್ ಬೆಂಗಳೂರನ್ನು ಯಲಹಂಕ ಮತ್ತು ದೇವನಹಳ್ಳಿಯೊಂದಿಗೆ ಸಂಪರ್ಕಿಸುವ ಸಂಪಿಗೆ ಮಾರ್ಗವನ್ನು ಅಭಿವೃದ್ಧಿಪಡಿಸುತ್ತಿದೆ, ಇದು ಬೆಂಗಳೂರು ವಿಮಾನ ನಿಲ್ದಾಣದ ಪ್ರಯಾಣಿಕರಿಗೆ ಮತ್ತೊಂದು ಪ್ರವೇಶ ವಿಧಾನವನ್ನು ಒದಗಿಸುತ್ತದೆ.

### ಬೆಂಗಳೂರು ಸಿಟಿ ರೈಲು ನಿಲ್ದಾಣಕ್ಕೆ ಹೊಸ ರೂಪ

ಬೆಂಗಳೂರಿನ ಮೆಜೆಸ್ಟಿಕ್‌ನಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣವನ್ನು 1,370 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಕಂಟೋನ್ಮೆಂಟ್ ಮತ್ತು ಯಶವಂತಪುರ ರೈಲು ನಿಲ್ದಾಣಗಳನ್ನು ಸದ್ಯಕ್ಕೆ ಅಭಿವೃದ್ಧಿಪಡಿಸಲಾಗುತ್ತಿದೆ. ದೇವನಹಳ್ಳಿಯಲ್ಲಿ ಮೆಗಾ ರೈಲ್ವೆ ಟರ್ಮಿನಲ್ ನಿರ್ಮಿಸಲು ಚಿಂತನೆ ನಡೆಸಲಾಗಿದೆ ಎಂದು ರೈಲ್ವೆ ಇಲಾಖೆಯ ಸಹಾಯಕ ಸಚಿವ ವಿ. ಸೋಮಣ್ಣ ಅವರು ತಿಳಿಸಿದ್ದಾರೆ.

**1,370 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ**

### ಚಿಕ್ಕಮಗಳೂರು - ತಿರುಪತಿ ನಡುವೆ ಹೊಸ ರೈಲು

ಚಿಕ್ಕಮಗಳೂರಿನಿಂದ ತಿರುಪತಿಗೆ ಹೊಸತೊಂದು ರೈಲನ್ನು ಆರಂಭಿಸಲು ರೈಲ್ವೆ ಇಲಾಖೆ ಒಪ್ಪಿಗೆ ನೀಡಿದೆ ಎಂದು ಚಿಕ್ಕಮಗಳೂರು ಸಂಸದ ಹಾಗೂ ಮಾಜಿ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ. ಇದರಿಂದ ಮಲೆನಾಡಿನ ಜಿಲ್ಲೆಯ ಹಲವು ವರ್ಷಗಳ ಕನಸು ಈಗ ನನಸಾಗಲಿದೆ ಎಂದು ಅವರು ತಿಳಿಸಿದ್ದಾರೆ. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ವಿ. ಸೋಮಣ್ಣ ಅವರನ್ನು ಭೇಟಿ ಮಾಡಿ ಮಾಹಿತಿ ವಿನಿಮಯ.

# ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಐಎಎಸ್, ಕೆಎಎಸ್ ಹುದ್ದೆಗಳ ಹಂಚಿಕೆ

• ಉದಯವಾಹಿನಿ ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರ, ನಗರ ಪಾಲಿಕೆಗಳಿಗೆ ಐಎಎಸ್, ಕೆಎಎಸ್ ಮತ್ತು ಐಪಿಎಸ್. ಕೆಎಸ್‌ಪಿಎಸ್ ಹುದ್ದೆಗಳನ್ನು ಹಂಚಿಕೆ ಮಾಡಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಮುಖ್ಯ ಆಯುಕ್ತರ ಒಂದು ಹುದ್ದೆ ಇರಲಿದ್ದು ಪ್ರಧಾನ ಕಾರ್ಯದರ್ಶಿ ಅಥವಾ ಅದಕ್ಕಿಂತ ಉನ್ನತ ಶ್ರೇಣಿ ಹೊಂದಿದವರಾಗಿರಬೇಕು. ಆಡಳಿತ, ಕಂದಾಯ ಮತ್ತು ಮಾಹಿತಿ ತಂತ್ರಜ್ಞಾನ ವಿಶೇಷ ಆಯುಕ್ತ, ಆರೋಗ್ಯ ಮತ್ತು ಶಿಕ್ಷಣ ವಿಶೇಷ ಆಯುಕ್ತ, ಚುನಾವಣೆ, ವಿಪತ್ತು ನಿರ್ವಹಣೆ, ಸಾರ್ವಜನಿಕ ಸಂಪರ್ಕ ವಿಶೇಷ ಆಯುಕ್ತ, ಹಣಕಾಸು ಮುಖ್ಯ ಆಯುಕ್ತ ಹುದ್ದೆಗೆ ಐಎಎಸ್ ಅಧಿಕಾರಿಗಳು ಇರಲಿದ್ದಾರೆ. ಒಂದು ಎಡಿಜಿಪಿ, ಒಂದು ಎಸ್‌ಪಿ ಹುದ್ದೆ ಇರಲಿದೆ.

ಬೆಂಗಳೂರು ಕೇಂದ್ರ, ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ನಗರ ಪಾಲಿಕೆಗಳಿಗೆ ಕಾರ್ಯದರ್ಶಿ ಶ್ರೇಣಿಯ ಐಎಎಸ್ ಅಧಿಕಾರಿಗಳು ಆಯುಕ್ತರಾಗಲಿದ್ದಾರೆ. ಹಿರಿಯ ಐಎಎಸ್ ಅಧಿಕಾರಿಗಳು ಹೆಚ್ಚುವರಿ ಆಯುಕ್ತರಾಗಲಿದ್ದಾರೆ.



ಈ ಐದು ನಗರಪಾಲಿಕೆಗಳಿಗೆ ಕೆಎಎಸ್ ಶ್ರೇಣಿಯ ಹೆಚ್ಚುವರಿ ಆಯುಕ್ತರು ತಲಾ ಒಬ್ಬರಂತೆ ಇರುವರು. ಹಿರಿಯ ಶ್ರೇಣಿಯ ಅಧಿಕಾರಿಗಳು ತಲಾ ಇಬ್ಬರಂತೆ ವಲಯ ಜಂಟಿ ಆಯುಕ್ತರಾಗಿರುವರು. ಒಂದು ಡಿವೈಎಸ್‌ಪಿ ಹುದ್ದೆ ಇರಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

**ಹಾಲಿ ವಾರ್ಡ್‌ಗಳ ಮುಂದುವರಿಕೆ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 198 ವಾರ್ಡ್‌ಗಳ ಆಧಾರದಲ್ಲಿಯೇ ಕಾರ್ಯನಿರ್ವಹಿಸುತ್ತಿವೆ. ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಹೊಸದಾಗಿ 5 ನಗರ ಪಾಲಿಕೆಗಳನ್ನು ಸರ್ಕಾರ ಅಧಿಸೂಚಿಸಿದರೂ, ಹಾಲಿ ಇರುವ ವಾರ್ಡ್‌ಗಳೇ ಮುಂದುವರಿಯಲಿವೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ ರಾವ್ ತಿಳಿಸಿದ್ದಾರೆ.

**ಹೊಸ ನಗರ ಪಾಲಿಕೆಗಳ ಕಾರ್ಯಾಚರಣೆಗೆ ಅಗತ್ಯವಿರುವ ಸಿಬ್ಬಂದಿ ಹಾಗೂ ಆಡಳಿತ ವೆಚ್ಚವನ್ನು ಗುರುತಿಸುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕಾಯ್ದೆಯಡಿಯಲ್ಲಿ, 5 ನಗರ ಪಾಲಿಕೆಗಳ ಅಧಿಸೂಚನೆಯ ನಂತರ ಸರ್ಕಾರವು ವಾರ್ಡ್‌ಗಳ ಮರುವಿಂಗಡಣೆ ಆಯೋಗವನ್ನು ರಚಿಸಲಿದೆ. ಆ ಆಯೋಗವು ಪ್ರತಿ ನಗರ ಪಾಲಿಕೆಯ ವಾರ್ಡ್‌ಗಳ ಸಂಖ್ಯೆ, ಗಡಿಗಳನ್ನು ನಿರ್ಧರಿಸಲಿದೆ. ಅಲ್ಲಿಯವರೆಗೆ ಈಗಿರುವ ವಾರ್ಡ್‌ಗಳೇ ಮುಂದುವರಿಯಲಿವೆ. ಸಾರ್ವಜನಿಕರು ಊಹಾಪೋಹಕ್ಕೆ ಕಿವಿಕೊಡಬಾರದು ಎಂದು ಹೇಳಿದ್ದಾರೆ.**

# ಜಾತಿ ಜನಗಣತಿಗಾಗಿ ಒಕ್ಕಲಿಗ ಸಮುದಾಯದಿಂದ ಸ್ವಯಂಸೇವಕರ ನಿಯೋಜನೆ!

• ಉದಯವಾಹಿನಿ ಬೆಂಗಳೂರು

ಕರ್ನಾಟಕದಲ್ಲಿ ರಾಜ್ಯಾದ್ಯಂತ ಜಾತಿ ಜನಗಣತಿ ನಡೆಯುತ್ತಿದ್ದು, ತಮ್ಮ ಸಮುದಾಯದ ಜನರ ಸಂಖ್ಯೆಯನ್ನು ನಿಖರವಾಗಿ ಎಣಿಸಲು ಒಕ್ಕಲಿಗರು ಸಾವಿರಾರು ಸ್ವಯಂಸೇವಕರನ್ನು ಸಜ್ಜುಗೊಳಿಸುತ್ತಿದೆ ಮತ್ತು ನಿಯೋಜಿಸುತ್ತಿದೆ. ನಮ್ಮ ಸಮುದಾಯದ ಜನರ ಎಣಿಕೆ ಸಂಖ್ಯೆಗಳು ತಪ್ಪಾಗಿವೆ ನಾವು 62 ಲಕ್ಷ ಅಲ್ಲ. ನಾವು ಕನಿಷ್ಠ 75 ಲಕ್ಷ ಅಥವಾ ಅದಕ್ಕಿಂತ ಹೆಚ್ಚು ಎಂದು ಒಕ್ಕಲಿಗ ಮೀಸಲಾತಿ ಹೋರಾಟ ಸಮಿತಿಯ ಅಧ್ಯಕ್ಷ ಎಂ. ನಾಗರಾಜ್ ಸಭೆಯಲ್ಲಿ ಹೇಳಿದರು. ಕಾಂತರಾಜ್ ಆಯೋಗದ ಹಿಂದಿನ ಅಂದಾಜಿನಲ್ಲಿನ ದೋಷಗಳನ್ನು ಉಲ್ಲೇಖಿಸಿ, ಪ್ರತಿ ಒಕ್ಕಲಿಗರ ಮನೆಯನ್ನು ಎಣಿಸುವುದನ್ನು ಖಚಿತಪಡಿಸಿಕೊಳ್ಳಲು ಗ್ರಾಮ ಮಟ್ಟದ ಸ್ವಯಂಸೇವಕರ ತಂಡವನ್ನು ನಿಯೋಜಿಸಲಾಗುವುದು ಸಮಿತಿ ಸಂಚಾಲಕ ಆಡಿಟರ್ ನಾಗರಾಜ್ ತಿಳಿಸಿದ್ದಾರೆ.

ನಾವು ಒಂದು ಆಂದೋಲನವನ್ನು ಪ್ರಾರಂಭಿಸುತ್ತಿದ್ದೇವೆ. ಪ್ರತಿ ಹಳ್ಳಿಯಲ್ಲಿ ಇಬ್ಬರು ತರಬೇತಿ ಪಡೆದ ಸ್ವಯಂಸೇವಕರು ಪ್ರತಿ ಕುಟುಂಬವನ್ನು ಭೇಟಿ ಮಾಡುತ್ತಾರೆ. ಎಲ್ಲಾ 69 ಜನಗಣತಿ ಮುಖ್ಯಸ್ಥರಿಗೆ ಸ್ವಯಂ ಸೇವಕರು ಮಾಹಿತಿ ಭರ್ತಿ ಮಾಡಲು ಸಹಾಯ ಮಾಡುತ್ತಾರೆ. ಈ ಬಾರಿ, ಸರ್ಕಾರ ನಮ್ಮನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದರು.

# ನಮ್ಮ ಮೆಟ್ರೋ ಆರೆಂಜ್ ಲೈನ್ ಆರಂಭಕ್ಕೂ ಮುನ್ನವೇ ಮುಕ್ತಾಯದ ಟಾರ್ಗೆಟ್ ಮುಂದಕ್ಕೆ!

• ಉದಯವಾಹಿನಿ ಬೆಂಗಳೂರು

ಇತ್ತೀಚೆಗಷ್ಟೇ ರಾಜ್ಯ ಸರ್ಕಾರ ಅನುಮೋದನೆ ನೀಡಿದ್ದ ಬೆಂಗಳೂರಿನ ಆರೆಂಜ್ ಲೈನ್ ಮೆಟ್ರೋ ಸಂಬಂಧ ಕಹಿ ಸುದ್ದಿ ಹೊರ ಬಿದ್ದಿದೆ.

ಈ ಮಾರ್ಗದ ಕಾಮಗಾರಿ ಆರಂಭಕ್ಕೂ ಮುನ್ನವೇ ಮುಕ್ತಾಯದ ಅವಧಿಯನ್ನು 2030ರಿಂದ 2031ಕ್ಕೆ ವಿಸ್ತರಣೆ ಮಾಡಲಾಗಿದೆ. ಇತ್ತೀಚೆಗಷ್ಟೇ ಪ್ರಧಾನಿ ಮೋದಿ ಹಳದಿ ಲೈನ್ ಮೆಟ್ರೋ ಉದ್ಘಾಟನೆ ಮಾಡಿ ಅದೇ ದಿನ ಆರೆಂಜ್ ಲೈನ್‌ಗೆ ಶಂಕುಸ್ಥಾಪನೆ ಮಾಡಿದ್ದರು. ಆದರೆ ಇದೀಗ ಬಹುನಿರೀಕ್ಷಿತ ಮಾರ್ಗದ ಕಾಮಗಾರಿ ಮುಕ್ತಾಯದ ಸಮಯಾವಕಾಶ ಮತ್ತೊಂದು ವರ್ಷ ಮುಂದಕ್ಕೆ ಹೋಗಿದೆ. ಈ ಮೂಲಕ 2030ಕ್ಕೆ ಮುಕ್ತಾಯವಾಗಬೇಕಿದ್ದ ಮಾರ್ಗಕ್ಕೆ ಹೆಚ್ಚುವರಿ ಒಂದು ವರ್ಷ ಕಾಯಬೇಕಾಗಿದೆ.

ಹೌದು, ಇದು ಬೆಂಗಳೂರಿನ ಬಹುನಿರೀಕ್ಷಿತ ಮಾರ್ಗಗಳಲ್ಲಿ ಒಂದಾದ ಕಿತ್ತಾಳೆ ಮಾರ್ಗದ ಬಗೆಗಿನ ಸುದ್ದಿ. ಜೆ.ಪಿ.ನಗರ 4ನೇ ಹಂತದಿಂದ ಕೆಂಪಾಪುರ ಮತ್ತು ಹೊಸಹಳ್ಳಿಯಿಂದ ಕಡಬಗೆರೆಯನ್ನು ಸಂಪರ್ಕಿಸುವ ಈ ಮಾರ್ಗದ ಕಾಮಗಾರಿಯ ಅವಧಿಯನ್ನು 2031ರ ಮೇ ತನಕ ವಿಸ್ತರಿಸಲಾಗಿದೆ.

ಬಿಎಂಆರ್‌ಸಿಎಲ್ ಮೂಲಗಳ ಪ್ರಕಾರ, ಕಿತ್ತಳೆ ಮಾರ್ಗದ ಕಾಮಗಾರಿಗೆ ಐದೂವರೆ ವರ್ಷಗಳ ಕಾಲಾವಧಿ ತೆಗೆದುಕೊಳ್ಳಲಿದೆ.

# ಸ್ವಚ್ಛತಾ ಕಾರ್ಮಿಕರಿಗೆ ಅನ್ನಪೂರ್ಣ ಯೋಜನೆ: ಸ್ಮಾರ್ಟ್ ಕಾರ್ಡ್ ಬಿಡುಗಡೆ

• ಉದಯವಾಹಿನಿ ಬೆಂಗಳೂರು

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಮಂಡಳಿಯ ಸ್ವಚ್ಛತಾ ಕಾರ್ಮಿಕರಿಗ ವಿಶಿಷ್ಟ ಯೋಜನೆಯನ್ನು ಜಾರಿಗೆ ತರುತ್ತಿದ್ದು, ಕಾರ್ಮಿಕರಿಗೆ ಸ್ಮಾರ್ಟ್ ವಿತರಿಸಲು ಮುಂದಾಗಿದೆ.

ಮಂಡಳಿಯ ನೈರ್ಮಲ್ಯೀಕರಣ ಕಾರ್ಮಿಕರ ಜೀವನ ಗುಣಮಟ್ಟ ಹೆಚ್ಚಿಸುವ ಮತ್ತು ಅವರಿಗೆ ಪೌಷ್ಟಿಕ ಆಹಾರ ಒದಗಿಸುವ ಉದ್ದೇಶದಿಂದ ಜಲಮಂಡಳಿ ಅನ್ನಪೂರ್ಣ ಯೋಜನೆಯನ್ನು ಜಾರಿಗೆ ತರುತ್ತಿದ್ದು, ಯೋಜನೆಯಡಿ, ಕಾರ್ಮಿಕರಿಗೆ ಉಪಹಾರಕ್ಕಾಗಿ ಪ್ರತಿದಿನ ರೂ.50ರಂತೆ ಮಾಸಿಕ ರೂ.1500 ಅನ್ನು ಸ್ಮಾರ್ಟ್ ಕಾರ್ಡ್‌ಗಳ ಮೂಲಕ ನೇರವಾಗಿ ಪಾವತಿಸಲಾಗುತ್ತದೆ.

ಡಿಕೆ ಶಿವಕುಮಾರ್ ಅವರು, ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್‌ಗಳನ್ನು ಹಸ್ತಾಂತರಿಸುವ ಮೂಲಕ ಯೋಜನೆಗೆ ಚಾಲನೆ ನೀಡಲಿದ್ದಾರೆ. ಯೋಜನೆ ಕುರಿತು ಮಾಹಿತಿ ನೀಡಿರುವ ಜಲಮಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್



ಅವರು, ಯೋಜನೆಯ ಭಾಗವಾಗಿ, ಮಂಡಳಿಯಲ್ಲಿ ಕೆಲಸ ಮಾಡುತ್ತಿರುವ 700 ಕ್ಕೂ ಹೆಚ್ಚು ನೈರ್ಮಲ್ಯ ಕಾರ್ಮಿಕರಿಗೆ ಆಕ್ಸಿಸ್ ಬ್ಯಾಂಕ್‌ನಿಂದ ನಡೆಸಲ್ಪಡುವ ಸ್ಮಾರ್ಟ್ ಕಾರ್ಡ್‌ಗಳನ್ನು ನೀಡಲಾಗುತ್ತದೆ. ಪ್ರತಿ ಕಾರ್ಡ್‌ಗೆ 1,500 ರೂ.ಗಳ ಮಾಸಿಕ ಭತ್ಯೆಯನ್ನು ನೇರವಾಗಿ ಜಮಾ ಮಾಡಲಾಗುತ್ತದೆ. ನಂತರ ಈ ಕಾರ್ಡ್ ಗಳನ್ನು ಕಾರ್ಮಿಕರು ತಮ್ಮ ಆಯ್ಕೆಯ ಆಹಾರ ಮಳಿಗೆಗಳಲ್ಲಿ ಬಳಸಬಹುದಾಗಿದೆ ಎಂದು ಹೇಳಿದ್ದಾರೆ. ನಮ್ಮ ನಗರವನ್ನು ಸ್ವಚ್ಛವಾಗಿ ಇಡಲು ಹಗಲು-ರಾತ್ರಿ ಶ್ರಮಿಸುತ್ತಿರುವ ಕಾರ್ಮಿಕರಿಗೆ, ಅನ್ನಪೂರ್ಣ ಯೋಜನೆಯ ಮೂಲಕ ಅವರ ಶ್ರಮವನ್ನು ಗೌರವಿಸುತ್ತಿದ್ದೇವೆ. ಎಲ್ಲಾ ಕಾರ್ಮಿಕರ ದಿನದ ಆರಂಭ ಆರೋಗ್ಯಪೂರ್ಣವಾಗಿರಲಿ ಎಂಬ ಆಶಯ ಹೊಂದಿದ್ದೇವೆ ಎಂದು ತಿಳಿಸಿದ್ದಾರೆ.

**ಇದು ದೇಶದಲ್ಲಿಯೇ ಇಂತಹ ತಂತ್ರಜ್ಞಾನ ಆಧಾರಿತ ನೇರ ಹಣ ವರ್ಗಾವಣೆ ಮಾಡುವ ಮೊದಲ ಯೋಜನೆಯಾಗಿದೆ. ಜಲಮಂಡಳಿಯ ಈ ಯೋಜನೆಯನ್ನು ಸ್ಮಾರ್ಟ್ ನಗರದ - ಮಾನವೀಯ ವಿಸ್ತರಣೆ ಎಂದು ಪರಿಗಣಿಸುತ್ತಿದೆ. ತಂತ್ರಜ್ಞಾನ ಮತ್ತು ಮಾನವೀಯತೆಯ ಸಮ್ಮಿಲನದ ಮೂಲಕ, ಈ ಯೋಜನೆ ಇತರೆ ನಗರಗಳ ಪಾಲಿಗೆ ಮಾದರಿಯೂ ಆಗಬಹುದಾಗಿದೆ ಎಂದು ಹೇಳಿದ್ದಾರೆ.**

# ಮೊದಲ ಬಾರಿಗೆ ಕೌನ್ಸಿಲಿಂಗ್ ಮೂಲಕ ಪಿಡಿಒ ವರ್ಗಾವಣೆ ಪ್ರಕ್ರಿಯೆ

• ಉದಯವಾಹಿನಿ ಬೆಂಗಳೂರು

ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಇಲಾಖೆಯು, ಪ್ರಸಕ್ತ ಸಾಲಿನಲ್ಲಿ ಒಂದು ಬಾರಿಗೆ ಅನ್ವಯಿಸುವಂತೆ ಒಂದೇ ಸ್ಥಳದಲ್ಲಿ 5 ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸಿದ ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಕೌನ್ಸಿಲಿಂಗ್ ಮೂಲಕ ವರ್ಗಾವಣೆಗೊಳಿಸಲು ಅವಕಾಶ ಕಲ್ಪಿಸಲಾಗಿದೆ. 2025ರ ಸೆಪ್ಟೆಂಬರ್ 10 ರಿಂದ 2025ರ ಸೆ.20 ರವರೆಗೆ ಕಡ್ಡಾಯ ವರ್ಗಾವಣೆ ಕೌನ್ಸಿಲಿಂಗ್, ಸೆ 23, 24ರಂದು ಸಾಮಾನ್ಯ ಕೋರಿಕೆ ವರ್ಗಾವಣೆಗಳ ಕೌನ್ಸಿಲಿಂಗ್ ಪ್ರಕ್ರಿಯೆಗಳು ಜರುಗಲಿವೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.



ಕರ್ನಾಟಕ ರಾಜ್ಯ ನಾಗರಿಕ ಸೇವೆಗಳು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂ. ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್-1 ಗ್ರೇಡ್-2) ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವರ್ಗಾವಣೆಗಳ ನಿಯಂತ್ರಣ ನಿಯಮಗಳು 2024ನ್ನು ರಚಿಸಿ, ಅಧಿಸೂಚಿಸಲಾಗಿದೆ. ನಿಯಮಗಳಿಗೆ ಸೂಕ್ತ ತಿದ್ದುಪಡಿಗಳನ್ನು ತಂದು, ಒಂದೇ ಸ್ಥಳದಲ್ಲಿ 5 ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸಿದ ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಕೌನ್ಸಿಲಿಂಗ್ ಮೂಲಕ ಕಡ್ಡಾಯವಾಗಿ ವರ್ಗಾವಣೆಗೊಳಿಸಲು ಅವಕಾಶ ಕಲ್ಪಿಸಲಾಗಿದೆ ಎಂಬ ಮಾಹಿತಿಯನ್ನು ಸಚಿವರು ಹಂಚಿಕೊಂಡಿದ್ದಾರೆ.

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ಆನ್ ಲೈನ್ ಮೂಲಕ ವಿಶೇಷ ಪ್ರಕರಣಗಳ ಅಡಿಯಲ್ಲಿ 515 ಅರ್ಜಿಗಳು ಸಾಮಾನ್ಯ ಕೋರಿಕೆಯ ಅಡಿಯಲ್ಲಿ 1,215 ಅರ್ಜಿಗಳು ಸೇರಿದಂತೆ ಒಟ್ಟು 1,730 ಅರ್ಜಿಗಳು ಸ್ವೀಕೃತಗೊಂಡಿವೆ, ಪ್ರಸ್ತುತ ಖಾಲಿ ಹುದ್ದೆಗಳ, ಕಡ್ಡಾಯ ವರ್ಗಾವಣೆಗಳ ರಾಜ್ಯವಾರು ಅಂತಿಮ ಪಟ್ಟಿ ವರ್ಗಾವಣೆಯಿಂದ ವಿನಾಯತಿಗಾಗಿ ಕೋರಿಕೆ ಸಲ್ಲಿಸಿದವರ ಪಟ್ಟಿಯನ್ನು www.rdprtransfer.karnataka.gov.in

ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು, ಕಳೆದ 29ರಂದು ವಿಶೇಷ ಪ್ರಕರಣಗಳ ಅಂತಿಮ ವರ್ಗಾವಣೆ ಆದ್ಯತಾ ಪಟ್ಟಿಯನ್ನು ಸೆಪ್ಟೆಂಬರ್ 1ರಂದು ಸಾಮಾನ್ಯ ಕೋರಿಕೆ ಮತ್ತು ಕಡ್ಡಾಯ ವರ್ಗಾವಣೆಯ ಅಂತಿಮ ಆದ್ಯತಾ ಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ತಿಳಿಸಿರುವ ಸಚಿವರು ಈ ತಿಂಗಳ 3 ರಿಂದ 8ರವರೆಗೆ ವಿಶೇಷ ಪ್ರಕರಣಗಳ ಮೊದಲ ಸುತ್ತಿನ ಕೌನ್ಸಿಲಿಂಗ್ ಹಾಗೂ ಈ ತಿಂಗಳ 8ರಂದು ವಿಶೇಷ ಪ್ರಕರಣಗಳ ಎರಡನೇ ಸುತ್ತಿನ ಕೌನ್ಸಿಲಿಂಗ್ ಕೈಗೊಳ್ಳಲಾಗುತ್ತದೆ ಎಂದು ಹೇಳಿದ್ದಾರೆ.

# ಗೋವಿಂದರಾಜನಗರದಲ್ಲಿ ಬ್ರಾಹ್ಮಣ ಭವನ ಉದ್ಘಾಟನೆ

• ಉದಯವಾಹಿನಿ ಬೆಂಗಳೂರು

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಡಾ.ರಾಜಕುಮಾರ್ ವಾರ್ಡ್‌ನ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ನೂತನವಾಗಿ ನಿರ್ಮಿಸಿದ ಶ್ರೀಪಾಂಚರಾತ್ರ ಪ್ರತಿಷ್ಠಾನ ಬ್ರಾಹ್ಮಣ ಭವನವನ್ನು ಶಾಸಕರಾದ ಎಂ.ಕೃಷ್ಣಪ್ಪ, ಪ್ರಿಯಕೃಷ್ಣ, ಯುವ ಮುಖಂಡರಾದ ಪ್ರದೀಪ್ ಕೃಷ್ಣಪ್ಪ ಉದ್ಘಾಟಿಸಿದರು. ಉದ್ಘಾಟನಾ ಕಾರ್ಯಕ್ರಮದಲ್ಲಿ ಆಗಮ ಪಂಡಿತರು, ಪುರೋಹಿತರು, ಅರ್ಚಕರು ಭಾಗವಹಿಸಿದ್ದರು. ಶ್ರೀನಿವಾಸ್ ರಾಮಾನುಜಾ ಭಟ್ಟಾಚಾರ್ಯ ಅವರು ಮಾತನಾಡಿ, ಕೊಡುಗೈದಾನಿ ಎಂದೇ ಹೆಸರುವಾಸಿ ಇರುವ ಎಂ. ಕೃಷ್ಣಪ್ಪ ಅವರು ಇವತ್ತು ಬ್ರಾಹ್ಮಣ ಸಮಾಜಕ್ಕೆ ಕಲ್ಯಾಣ ಮಂಟಪ ನಿರ್ಮಿಸಿಕೊಟ್ಟಿದ್ದಾರೆ. ಕೃಷ್ಣಪ್ಪ ದೇವರ ಮೇಲೆ ತುಂಬಾ ಭಕ್ತಿ, ನಿಷ್ಠೆ, ಹೊಂದಿರುವವರು. ಅವರ ಸುಪುತ್ರರಾದ ಪ್ರಿಯಕೃಷ್ಣ ಹಾಗೂ ಪ್ರದೀಪ್ ಕೃಷ್ಣಪ್ಪ ಇವರಿಬ್ಬರೂ ರಾಮ ಲಕ್ಷ್ಮಣ ಇದ್ದಹಾಗೆ. ಸಮಾಜಸೇವೆ ಮಾಡುವ ಜೊತೆ ಸಂಸ್ಕಾರದಿಂದ ಮಾತನಾಡುವ ಗುಣವುಳ್ಳವರು. ಕೃಷ್ಣಪ್ಪ, ಪ್ರಿಯಕೃಷ್ಣ, ಹಾಗೂ ಪ್ರದೀಪ್ ಕೃಷ್ಣಪ್ಪ ಅವರಿಗೆ ಇನ್ನೂ ಹೆಚ್ಚು ಒಳ್ಳೆಯ ಕೆಲಸ ಮಾಡಲು ಭಗವಂತ ಆಶೀರ್ವಾದ ನೀಡಲಿ ಎಂದರು.


# 5 ಪಾಲಿಕೆಗಳ ರಚನೆ: ಸುಲಲಿತ ಆಡಳಿತಕ್ಕೆ ಸಿಬ್ಬಂದಿ ಕೊರತೆಯೇ ಪ್ರಮುಖ ಅಡ್ಡಿ!

## ಸೆ.2 ರಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಆಡಳಿತ ಜಾರಿ, ಬಿಬಿಎಂಪಿ ಅಧಿಕಾರಿ, ನೌಕರರ ಸಂಘದ ಅಧ್ಯಕ್ಷ ಎ ಅಮೃತ್ ರಾಜ್ ಹೇಳಿಕೆ

• ಉದಯವಾಹಿನಿ ಬೆಂಗಳೂರು

ಬೆಳೆಯುತ್ತಿರುವ ಬೆಂಗಳೂರು ನಗರ ಒಂದೇ ಸಂಸ್ಥೆಯಿಂದ ನಿರ್ವಹಣೆ ಕಷ್ಟ ಎಂದು ಸರ್ಕಾರ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆ ಮಾಡಿ ಐದು ಪಾಲಿಕೆಗಳಾಗಿ ವಿಂಗಡಿಸಿ ಆಡಳಿತ ನಡೆಸುವುದಕ್ಕೆ ಆದೇಶ ಮಾಡಿದೆ. ಸೆ.2 ರಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಆಡಳಿತ ಜಾರಿಯಾಗಲಿದೆ. ಈ ಹಿಂದೆ ಬಿಬಿಎಂಪಿ ಜಾರಿ ಇತ್ತು. ಆದರೆ, ಇನ್ಮುಂದೆ ಗ್ರೇಟರ್ ಬೆಂಗಳೂರು ಆಡಳಿತ ಜಾರಿಯಲ್ಲಿ ಇರಲಿದೆ.

ಸುಗಮ ಪರಿವರ್ತನೆಯನ್ನು ಖಚಿತ ಪಡಿಸಿಕೊಳ್ಳುವಲ್ಲಿ ಪ್ರಮುಖ ಸವಾಲುಗಳಲ್ಲಿ ಒಂದು ವಿವಿಧ ಹಂತಗಳಲ್ಲಿ ಸಿಬ್ಬಂದಿ ಕೊರತೆಯಾಗಿದೆ. ಬಿಬಿಎಂಪಿ ಈಗಾಗಲೇ ತೀವ್ರ ಸಿಬ್ಬಂದಿ ಕೊರತೆ ಅನುಭವಿಸುತ್ತಿದೆ. ನಗರವನ್ನು ಈಗ ಐದು ಹೊಸ ನಿಗಮಗಳಾಗಿ, ಬೆಂಗಳೂರು ಮಧ್ಯ, ಉತ್ತರ, ಪೂರ್ವ, ದಕ್ಷಿಣ ಮತ್ತು ಪಶ್ಚಿಮಗಳಾಗಿ ವಿಭಜಿಸಲಾಗಿರುವುದರಿಂದ, ಸಿಬ್ಬಂದಿಗಳ ಬೇಡಿಕೆ ಹೆಚ್ಚಾಗುತ್ತದೆ.



198 ವಾರ್ಡ್‌ಗಳನ್ನು ಹೊಂದಿರುವ ಬೆಂಗಳೂರಿನಲ್ಲಿ ಒಂದು ನಿಗಮವಿತ್ತು, ಈ ವ್ಯವಸ್ಥೆಗೆ ಪೌರಕಾರ್ಮಿಕರು (ಪಿಕೆ) ಹೊರತುಪಡಿಸಿ 5,000 ಕ್ಕೂ ಹೆಚ್ಚು ಸಿಬ್ಬಂದಿ ಕೊರತೆ ಇತ್ತು. ಪೌರ ಕಾರ್ಮಿಕರು ಸೇರಿದಂತೆ 22,000 ಸಿಬ್ಬಂದಿ ಮಂಜೂರು ಮಾಡಲಾಗಿದೆ.

ಆದರೆ ಬಿಬಿಎಂಪಿ ಸುಮಾರು 17,000 ಸಿಬ್ಬಂದಿಯೊಂದಿಗೆ ಮಾತ್ರ ನಿರ್ವಹಿಸುತ್ತಿದೆ ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಸಂಘದ ಅಧ್ಯಕ್ಷ ಎ ಅಮೃತ್ ರಾಜ್ ಹೇಳಿದರು.

ಈಗ, ನಗರವನ್ನು 450 ವಾರ್ಡ್‌ಗಳಿರುವ ಐದು ನಿಗಮಗಳಾಗಿ ವಿಂಗಡಿಸಲಾಗಿದೆ. ಪ್ರತಿ ನಿಗಮವು ಮೇಯರ್, ಉಪ ಮೇಯರ್, ಆಯುಕ್ತರು, ಉಪ ಆಯುಕ್ತರು, ಮುಖ್ಯ ಇಂಜಿನಿಯರ್‌ಗಳು, ಸ್ಥಾಯಿ ಸಮಿತಿ ಮುಖ್ಯಸ್ಥರನ್ನು ಹೊಂದಿರುತ್ತದೆ.

ಪ್ರತಿಯೊಂದಕ್ಕೂ ಸಮರ್ಪಿತ ಸಿಬ್ಬಂದಿ ಬೇಕಾಗುತ್ತದೆ. ಜಿಬಿಎಗೆ ಹೆಚ್ಚಿನ ಇಂಜಿನಿಯರ್‌ಗಳು, ಪಿಎಗಳು ಪ್ಯೂನ್‌ಗಳು, ಗುಮಾಸ್ತರು, ಟೈಪಿಸ್ಟ್‌ಗಳು, ಮೊದಲ ವಿಭಾಗದ ಸಹಾಯಕರು (ಎಫ್‌ಡಿಎಗಳು), ಎರಡನೇ ವಿಭಾಗದ ಸಹಾಯಕರು (ಎಸ್‌ಡಿಎಗಳು), ಚಾಲಕರು ಬೇಕಾಗುತ್ತಾರೆ ಎಂದು ಅವರು ಹೇಳಿದರು.

ಅಸ್ತಿತ್ವದಲ್ಲಿರುವ ಕಾರ್ಯಪಡೆಯ ಬಹುಪಾಲು ಡೆಪ್ಯುಟೇಶನ್ ಅಥವಾ ಹೊರಗುತ್ತಿಗೆಯಲ್ಲಿದೆ. ಹೀಗಾಗಿ ಈ ಪದ್ಧತಿಯನ್ನು ಕೊನೆಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು. ಜಿಬಿಎ ಅಡಿಯಲ್ಲಿ ನೇರ ನೇಮಕಾತಿಯು ಸಿಬ್ಬಂದಿಗೆ ಜವಾಬ್ದಾರಿ ತರುತ್ತದೆ, ಕೆಲಸದ ಗುಣಮಟ್ಟವನ್ನು ಸುಧಾರಿಸುತ್ತದೆ.

ಡೆಪ್ಯುಟೇಶನ್‌ನಲ್ಲಿರುವವರು ಅಂತಿಮವಾಗಿ ತಮ್ಮ ಮಾತೃ ಇಲಾಖೆಗಳಿಗೆ ವಾಪಸಾಗುತ್ತಾರೆ. ಒಂದು ವೇಳೆ ಏನಾದರೂ ತಪ್ಪಾದಲ್ಲಿ ಅವರನ್ನು ಹೊಣೆಗಾರರನ್ನಾಗಿ ಮಾಡಲಾಗುವುದಿಲ್ಲ ಎಂದು ಅವರು ಹೇಳಿದರು. ನಿಗಮಗಳು ರಚನೆಯಾದ ನಂತರ ಜಿಬಿಎ ಕಾಯ್ದೆಯಡಿಯಲ್ಲಿ ಡಿಲಿಮಿಟೇಶನ್ ಆಯೋಗವನ್ನು ಸೂಚಿಸಲಾಗುವುದು ಎಂದು ಅವರು ಹೇಳಿದರು. ಈ ಆಯೋಗವು ಪ್ರತಿ ನಿಗಮದ ಅಡಿಯಲ್ಲಿರುವ ವಾರ್ಡ್‌ಗಳ ಸಂಖ್ಯೆ, ಗಡಿಗಳು ಮತ್ತು ಇತರ ವಿವರಗಳನ್ನು ನಿರ್ಧರಿಸುತ್ತದೆ ಎಂದು ಮಾಹಿತಿ ನೀಡಿದ್ದಾರೆ.

**ನೌಕರರ ಮೇಲೆ ಈಗಾಗಲೇ ಹೆಚ್ಚಿನ ಹೊರೆ ಇದೆ, ಕಾರ್ಯಗಳನ್ನು ಪೂರ್ಣಗೊಳಿಸಲು ಹೆಚ್ಚುವರಿ ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದಾರೆ. ಹೆಚ್ಚಿನ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಸರ್ಕಾರ ತಕ್ಷಣ ಕ್ರಮಗಳನ್ನು ತೆಗೆದುಕೊಳ್ಳದ ಹೊರತು, ಕೆಲಸ ಪರಿಣಾಮಕಾರಿಯಾಗಿ ನಿರ್ವಹಿಸುವುದು ಅಸಾಧ್ಯ ಎಂದು ಅವರು ತಿಳಿಸಿದ್ದಾರೆ.**

**ಐದು ನಿಗಮಗಳಿಗೆ ಅಧಿಕೃತವಾಗಿ ಅಧಿಸೂಚನೆ ಹೊರಡಿಸುವವರೆಗೆ ಪ್ರಸ್ತುತ 198 ವಾರ್ಡ್‌ಗಳು ಕಾರ್ಯನಿರ್ವಹಿಸಲಿವೆ ಎಂದು ಬಿಬಿಎಂಪಿ ಆಯುಕ್ತ ಮಹೇಶ್ವರ ರಾವ್ ತಿಳಿಸಿದ್ದಾರೆ. ಹೊಸ ನಿಗಮಗಳಿಗೆ ಅಧಿಸೂಚನೆ ಹೊರಡಿಸಿದ ನಂತರ ಅಗತ್ಯವಿರುವ ಸಿಬ್ಬಂದಿ ಸಂಖ್ಯೆ ಮತ್ತು ಅವುಗಳ ನಿರ್ವಹಣೆಗೆ ಬಜೆಟ್ ಅನ್ನು ಗುರುತಿಸುವ ಪ್ರಕ್ರಿಯೆಯಲ್ಲಿ ಬಿಬಿಎಂಪಿ ಕೆಲಸ ನಿರ್ವಹಿಸುತ್ತಿದೆ ಎಂದು ಅವರು ಹೇಳಿದರು.**

**ಬಿಬಿಎಂಪಿ ಆಯುಕ್ತ ಮಹೇಶ್ವರ ರಾವ್ ಹೇಳಿಕೆ**

# ಕೆಎನ್‌ಆರ್ ನಿವಾಸದಲ್ಲಿ ಮಠಾಧೀಶರ ಸಭೆ

## ಸಚಿವ ಕೆ.ಎನ್.ರಾಜಣ್ಣ ಅವರ ನಗರದ ಕ್ಯಾತ್ಸಂದ್ರ ನಿವಾಸಕ್ಕೆ ಭೇಟಿ ನೀಡಿ ಸುಮಾರು 2 ಗಂಟೆಗಳ ಕಾಲ ಚರ್ಚೆ

• **ಉದಯವಾಹಿನಿ ತುಮಕೂರು,**

ಕೆ.ಎನ್. ರಾಜಣ್ಣನವರನ್ನು ಕಾಂಗ್ರೆಸ್ ಹೈಕಮಾಂಡ್ ಸಂಪುಟದಿಂದ ವಜಾ ಮಾಡಿರುವ ಹಿನ್ನೆಲೆಯಲ್ಲಿ ಹಿಂದುಳಿದ ದಲಿತ ಸಮುದಾಯದ ಮಠಾಧೀಶರ ಒಕ್ಕೂಟದ ನಿಯೋಗ ಮಾಜಿ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರ ನಗರದ ಕ್ಯಾತ್ಸಂದ್ರ ನಿವಾಸಕ್ಕೆ ಭೇಟಿ ನೀಡಿ ಸುಮಾರು 2 ಗಂಟೆಗಳ ಕಾಲ ಚರ್ಚೆ ನಡೆಸಿ ಕಾಂಗ್ರೆಸ್ ಹೈಕಮಾಂಡ್ ಭೇಟಿ ಮಾಡಿ ದೆಹಲಿಗೆ ನಿಯೋಗ ತೆರಳುವ ಸಂಬಂಧ ನಿರ್ಧಾರದ ಕೈಗೊಂಡಿದೆ.

ಒಕ್ಕೂಟದಿಂದ ಮುಂದಿನ ದಿನಗಳಲ್ಲಿ ನವದೆಹಲಿಗೆ ತೆರಳಿ ಕಾಂಗ್ರೆಸ್ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲಾಗುವುದು. ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಜತೆ ಚರ್ಚಿಸಲಾಗುವುದು. ರಾಜಣ್ಣ ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುವಂತೆ ಬೇಡಿಕೆ ಸಲ್ಲಿಸಲಾಗುವುದು ಎಂದು ಮಠಾಧೀಶರು ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡುತ್ತಾ ತಿಳಿಸಿದರು. ಇದೇ ಸಂದರ್ಭದಲ್ಲಿ ಪ್ರತಿಕ್ರಿಯಿಸಿದ ಮಾಜಿ ಸಚಿವ ಕೆ.ಎನ್. ರಾಜಣ್ಣ ಅವರು, ಮಠಾಧೀಶರು ಸತ್ಯದ ಪರ ಹೋರಾಡುವುದಕ್ಕೆ ಹೆಚ್ಚಿನ ಶಕ್ತಿ ಕೊಟ್ಟಿದ್ದಾರೆ. ರಾಜಕೀಯದ ಏರುಪೇರು ಸ್ಥಿತಿಯಾಂತರದ ಬಗ್ಗೆ ಅವರ ಜತೆ ಚರ್ಚಿಸಿದ್ದೇನೆ ಎಂದರು.

ಚಿತ್ರದುರ್ಗದ ಅಖಿಲ ಕುಂಚಿಟಿಗ ಮಹಾಸಂಸ್ಥಾನ ಮಠದ ಶಾಂತವೀರ ಸ್ವಾಮೀಜಿ, ಚೆನ್ನಯ್ಯ ಗುರುಪೀಠದ ಮಾದಾರ ಚೆನ್ನಯ್ಯ ಸ್ವಾಮೀಜಿ, ಮಾಚಿದೇವ ಮಹಾಸಂಸ್ಥಾನ ಮಠದ ಬಸವ ಮಾಚಿದೇವ ಸ್ವಾಮೀಜಿ, ಮೇದಾರ ಕೇತೇಶ್ವರಮಠದ ಇಮ್ಮಡಿ ಕೇತೇಶ್ವರ ಸ್ವಾಮೀಜಿ, ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಕೃಷ್ಣ ಯಾದವಾನಂದ ಸ್ವಾಮೀಜಿ, ನಿಟ್ಟೂರಿನ ನಾರಾಯಣ ಗುರು ಮಠದ ರೇಣುಕಾನಂದ ಸ್ವಾಮೀಜಿ, ತಂಗನಹಳ್ಳಿ ಕಾಶಿ ಅನ್ನಪೂರ್ಣೇಶ್ವರಿ ಮಠದ ಬಸವ ಮಹಾಲಿಂಗ ಸ್ವಾಮೀಜಿ, ಬೆಳ್ಳಾವಿ ಕಾರದ ಮಠದ ಕಾರದ ವೀರ ಬಸವ ಸ್ವಾಮೀಜಿ, ಕೆಂಕೆರೆಯ ಚನ್ನಬಸವ ಸ್ವಾಮೀಜಿ, ಶಾಸಕ ಎಚ್.ವಿ.ವೆಂಕಟೇಶ್, ವಿಧಾನ ಪರಿಷತ್ ಸದಸ್ಯ ಆರ್. ರಾಜೇಂದ್ರ, ಮತ್ತಿತರರು ಭಾಗವಹಿಸಿದ್ದರು.



**ರಾಜಣ್ಣ ಅವರಿಗೆ ಒಂದು ಅವಕಾಶ ನೀಡಬಹುದಿತ್ತು. ಏಕಾಏಕಿ ಕೈಬಿಟ್ಟಿದ್ದು ಜನರಿಗೆ ನೋವಾಗಿದೆ. ಇದನ್ನು ಸರಿ ಮಾಡಬೇಕು. ಹೈಕಮಾಂಡ್‌ಗೆ ಮನವರಿಕೆ ಮಾಡಿಕೊಡಲಾಗುವುದು ಎಂದು ಹೊಸದುರ್ಗದ ಕನಕ ಗುರುಪೀಠದ**

**ಈಶ್ವರಾನಂದಪುರಿ ಸ್ವಾಮೀಜಿ**

**ರಾಜಣ್ಣ ಶೋಷಿತ ಸಮುದಾಯಗಳ ಗಟ್ಟಿ ಧ್ವನಿ. ಜಾತ್ಯತೀತ ನಾಯಕರಾಗಿ ಒಂದು ವ್ಯಕ್ತಿತ್ವ ಬೆಳೆಸಿಕೊಂಡಿದ್ದಾರೆ. ತಪ್ಪು ಗ್ರಹಿಕೆಯಿಂದ ಅವರನ್ನು ಸಂಪುಟದಿಂದ ಕೈ ಬಿಟ್ಟಿರುವುದು ಖಂಡನೀಯ ಎಂದರು.**

**ವಾಲ್ಮೀಕಿ ಪ್ರಸನ್ನಾನಂದ ಪುರಿ ಸ್ವಾಮೀಜಿ**

# ಕರಿಕಲ್ಲುಗುಡ್ಡೆ ಅರಣ್ಯ ಪ್ರದೇಶ ಉಡ ಬೇಟೆ: ಆರೋಪಿ ಬಂಧನ

• **ಉದಯವಾಹಿನಿ, ಹನೂರು**

ಮಲೆಮಹದೇಶ್ವರ ವನ್ಯಜೀವಿ ಧಾಮ ಕೌದಳ್ಳಿ ಅರಣ್ಯ ವಲಯದ ಕರಿಕಲ್ಲುಗುಡ್ಡೆ ಬಯಲು ಅರಣ್ಯ ಪ್ರದೇಶದಲ್ಲಿ ಉಡ ಬೇಟೆಯಾಡಿದ್ದ ಆರೋಪಿಯೊಬ್ಬನನ್ನು ಶನಿವಾರ ಅರಣ್ಯ ಇಲಾಖೆಯ ಅಧಿಕಾರಿಗಳು ಬಂಧಿಸಿದ್ದು, ಪರಾರಿಯಾದ ಮತ್ತೋರ್ವನ ಪತ್ತೆಗೆ ಬಲೆ ಬೀಸಿದ್ದಾರೆ. ತಾಲ್ಲೂಕಿನ ವಡಕೆಹಳ್ಳ ಗ್ರಾಮದ ಚಿನ್ನಮುತ್ತು (60) ಬಂಧಿತ. ಇದೆ ಗ್ರಾಮದ ಕೊಳಂದೈ ಎಂಬ ವ್ಯಕ್ತಿ ಪರಾರಿಯಾಗಿದ್ದಾನೆ. ಈ ಇಬ್ಬರು ಕರಿಕಲ್ಲುಗುಡ್ಡೆ ಅರಣ್ಯ ಪ್ರದೇಶಕ್ಕೆ ಅಕ್ರಮವಾಗಿ ಪ್ರವೇಶಿಸಿ ಉಡ ಭೇಟೆಯಾಡಿದ್ದರು.

ಈ ಬಗ್ಗೆ ದೊರೆತ ಖಚಿತ ಮಾಹಿತಿ ಮೇರೆಗೆ ಆರ್.ಎಫ್.ಒ ಉಮಾಪತಿ ಅವರು ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಸಿಬ್ಬಂದಿಯೊಂದಿಗೆ ಮನೆಯ ಮೇಲೆ ದಾಳಿ ನಡೆಸಿದಾಗ ಚಿನ್ನಮುತ್ತು ಸಿಕ್ಕಿಬಿದ್ದರೆ, ಕೊಳಂದೈ ಪರಾರಿಯಾಗಿದ್ದಾನೆ. ಉಡವನ್ನು ವಶಕ್ಕೆ ಪಡೆದ ಅಧಿಕಾರಿಗಳು ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ತಲೆಮರೆಸಿಕೊಂಡಿರುವ ಮತ್ತೊಬ್ಬ ಆರೋಪಿ ಬಂಧನಕ್ಕೆ ಬಲೆ ಬೀಸಲಾಗಿದೆ. ದಾಳಿಯಲ್ಲಿ ಸಿಬ್ಬಂದಿಗಳಾದ ಆನಂದ ಹಲಸಪ್ಪ ಗೋಳ, ವಿಕ್ರಮ್, ಮಹದೇವಸ್ವಾಮಿ, ಮಲ್ಲಪ್ಪ ಹಾಗೂ ಮಾದೇಶ್ ಭಾಗವಹಿಸಿದ್ದರು.



# ಸಾಯಿ ಸ್ವಾಸ್ಥ್ಯ ಕ್ಷೇಮ ಕೇಂದ್ರ ಉದ್ಘಾಟನೆ; ಉಚಿತ ವೈದ್ಯಕೀಯ ಸೇವೆ

• **ಉದಯವಾಹಿನಿ ಚಿಕ್ಕಬಳ್ಳಾಪುರ**

ಭಾಗ್ಯನಗರ (ಬಾಗೇಪಲ್ಲಿ) ಪಟ್ಟಣದ ಡಿವಿಜಿ ರಸ್ತೆಯಲ್ಲಿ ಸೋಮವಾರ (ಸೆ.1) ಸಾಯಿ ಸ್ವಾಸ್ಥ್ಯ ಕ್ಷೇಮ ಕೇಂದ್ರ ಮತ್ತು ಶಾಹ್ ಹ್ಯಾಪಿನೆಸ್ ತುರ್ತು ಆರೈಕೆ ಕೇಂದ್ರವನ್ನು 'ಒಂದು ಜಗತ್ತು ಒಂದು ಕುಟುಂಬ ಜಾಗತಿಕ ಮಾನವೀಯ ಸೇವಾ ಅಭಿಯಾನ'ದ ಸಂಸ್ಥಾಪಕ ಸದ್ಗುರು ಶ್ರೀ ಮಧುಸೂದನ ಸಾಯಿ ಲೋಕಾರ್ಪಣೆ ಮಾಡಿದರು. ಎಲ್ಲಾ ವೈದ್ಯಕೀಯ ಸೇವೆಗಳನ್ನು ಉಚಿತವಾಗಿ ನೀಡುವ ಈ ಕೇಂದ್ರವು ರೋಗ ನಿರ್ಣಯ (ಡಯಾಗ್ನಸ್ಟಿಕ್) ಮತ್ತು ಔಷಧಾಲಯವನ್ನೂ ಹೊಂದಿದೆ.

ಚಿಕ್ಕಬಳ್ಳಾಪುರ ತಾಲ್ಲೂಕು ಮುದ್ದೇನಹಳ್ಳಿಯಲ್ಲಿರುವ ಶ್ರೀಮಧುಸೂದನ ಸಾಯಿ ವೈದ್ಯಕೀಯ ವಿಜ್ಞಾನ, ಸಂಶೋಧನಾ ಸಂಸ್ಥೆಯ ಪ್ರಾಥಮಿಕ ಆರೋಗ್ಯ ಸೇವಾ ವಿಸ್ತರಣೆಯಾಗಿ ಈ ಕೇಂದ್ರವು ಕಾರ್ಯನಿರ್ವಹಿಸಲಿದೆ. ಸ್ವಾಸ್ಥ್ಯ ಕ್ಷೇಮ ಕೇಂದ್ರ ಲೋಕಾರ್ಪಣೆ ಮಾಡಿ ಮಾತನಾಡಿದ ಸದ್ಗುರು ಶ್ರೀ ಮಧುಸೂದನ ಸಾಯಿ, 'ಭಾರತದ ಮೊದಲ ತುರ್ತು ಆರೈಕೆ ಕೇಂದ್ರವನ್ನು ಭಾಗ್ಯನಗರದಲ್ಲಿ ಆರಂಭಿಸಿದ್ದೇವೆ. ಇದು ಎಮರ್ಜೆನ್ಸಿ ಮತ್ತು ಸಾಮಾನ್ಯ ಓಪಿಡಿ ಸೇವೆಗಳ ನಡುವೆ ಕೊಂಡಿಯಂತೆ ಕಾರ್ಯನಿರ್ವಹಿಸಲಿದೆ. ಇಲ್ಲಿ ರೋಗಪತ್ತೆಯಾದವರಿಗೆ ಹೆಚ್ಚಿನ ಚಿಕಿತ್ಸೆಯ ಅಗತ್ಯವಿದ್ದರೆ ನಮ್ಮದೇ ಆಂಬುಲೆನ್ಸ್‌ಗಳಲ್ಲಿ ಮುದ್ದೇನಹಳ್ಳಿಗೆ ಕರೆದೊಯ್ದು ಅಗತ್ಯ ಸೇವೆ ಒದಗಿಸುತ್ತೇವೆ. ಈ ಭಾಗದ ಸುಮಾರು 2 ಲಕ್ಷ ಜನರಿಗೆ ಸ್ವಾಸ್ಥ್ಯ ಕೇಂದ್ರದಿಂದ ಅನುಕೂಲವಾಗಲಿದೆ' ಎಂದು ವಿವರಿಸಿದರು.

ಮುದ್ದೇನಹಳ್ಳಿಯಲ್ಲಿರುವ ಶ್ರೀ ಮಧುಸೂದನ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ಈವರೆಗೆ ಸುಮಾರು 10 ಲಕ್ಷ ಜನರಿಗೆ ಉಚಿತ ಚಿಕಿತ್ಸೆ ಕೊಟ್ಟಿದೆ. 30 ಸಾವಿರಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆಗಳಾಗಿವೆ. 6 ಸಾವಿರಕ್ಕೂ ಹೆಚ್ಚು ಮಕ್ಕಳು ಹುಟ್ಟಿದ್ದಾರೆ. ನಮ್ಮ ಆಸ್ಪತ್ರೆಯಲ್ಲಿ ಹುಟ್ಟಿದ ಮೊದಲ ಮಗು 'ಸಾಯಿಶ್ರೀ' ಇಲ್ಲಿಯೇ ಇದ್ದಾರೆ ಎಂದು ಮಗುವನ್ನು ಎಲ್ಲರಿಗೂ ಪರಿಚಯಿಸಿದರು.

ಗ್ರಾಮೀಣ ಪ್ರದೇಶದಲ್ಲಿ ಉತ್ತಮ ಆರೋಗ್ಯ ಸೇವೆ ಒದಗಿಸಬೇಕು ಎನ್ನುವ ನಮ್ಮ ಆಶಯಕ್ಕೆ ಅಮೆರಿಕದ ಶಾಹ್ ಹ್ಯಾಪಿನೆಸ್ ಫೌಂಡೇಶನ್ ಸಹ ಕೈಜೋಡಿಸಿದೆ. ಇಂಥ ಒಟ್ಟು 20 ಸ್ವಾಸ್ಥ್ಯ ಕೇಂದ್ರಗಳನ್ನು ನಿರ್ಮಿಸಲು ಫೌಂಡೇಶನ್ ಸಂಕಲ್ಪ ಮಾಡಿದೆ. ಎಲ್ಲಾ ಕೇಂದ್ರಗಳೂ ಗ್ರಾಮೀಣ ಪ್ರದೇಶಗಳಲ್ಲಿಯೇ ಕಾರ್ಯನಿರ್ವಹಿಸಲಿವೆ. ಸತ್ಯ ಸಾಯಿ ಬಾಬಾ ಅವರ 100 ನೇ ಜನ್ಮದಿನೋತ್ಸವದ ವಿಶೇಷ ಕಾರ್ಯಕ್ರಮಗಳು ಮುದ್ದೇನಹಳ್ಳಿಯಲ್ಲಿ ನಡೆಯುತ್ತಿವೆ. 600 ಬೆಡ್ ಸಾಮರ್ಥ್ಯದ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಸಹ ಸಿದ್ಧವಾಗುತ್ತಿದೆ. ಇದೇ ನವೆಂಬರ್‌ನಲ್ಲಿ ಆಸ್ಪತ್ರೆಯ ಉದ್ಘಾಟನೆ ನಡೆಯಲಿದೆ. ಕಾರ್ಯಕ್ರಮದಲ್ಲಿ ಎಂಎಸ್ಐ ಸರ್ವೀಸಸ್‌ನ ಅಧ್ಯಕ್ಷರಾದ ಜೀವನ್ ಭಟ್, ಸಾಮಾಜಿಕ ಪರಿಣಾಮ ವಿಭಾಗದ ಸಹಾಯಕ ಮುಸಾಬ್ ಆಲಂ, ಶ್ರೀ ಮಧುಸೂದನ ಸಾಯಿ ವೈದ್ಯಕೀಯ ವಿಜ್ಞಾನ ಹಾಗೂ ಸಂಶೋಧನಾ ಸಂಸ್ಥೆಯ ಕಾರ್ಯತಂತ್ರದ ಬೆಳವಣಿಗೆ ಮತ್ತು ಶೈಕ್ಷಣಿಕ ವಿಭಾಗದ ನಿರ್ದೇಶಕ ಡಾ ಸತೀಶ್ ಬಾಬು, ಶ್ರೀ ಸತ್ಯ ಸಾಯಿ ಶಿಕ್ಷಣ ಸಂಸ್ಥೆಗಳ ಪ್ರಧಾನ ಸಂಪರ್ಕಾಧಿಕಾರಿ ಗೋವಿಂದ ರೆಡ್ಡಿ ಉಪಸ್ಥಿತರಿದ್ದರು.



# ಯಾತ್ರೆಗಳಿಂದ ಬಿಜೆಪಿಗೆ ರಾಜಕೀಯ ಲಾಭ ಸಿಗದು: ಸಿಎಂ

• **ಉದಯವಾಹಿನಿ ಮೈಸೂರು**

ಯಾವುದೇ ಯಾತ್ರೆಗಳಿಂದ ಬಿಜೆಪಿಗೆ ರಾಜಕೀಯ ಲಾಭ ಸಿಗದು ಎಂದು ಸಿದ್ದರಾಮಯ್ಯ ಹೇಳಿದರು. ಸ್ವಗ್ರಾಮವಾದ ಮೈಸೂರು ತಾಲ್ಲೂಕಿನ ಸಿದ್ದರಾಮನಹುಂಡಿಯಲ್ಲಿ ಸೋಮವಾರ ಪಿಎಂಶ್ರೀ ಕರ್ನಾಟಕ ಪಬ್ಲಿಕ್ ಶಾಲೆಯ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾಧ್ಯಮದವರ ಜೊತೆ ಅವರು ಮಾತನಾಡಿದರು.

ಬಿಜೆಪಿಯವರ ಧರ್ಮಸ್ಥಳ ಯಾತ್ರೆ, ಮೈಸೂರು ಚಲೋ ಯಾತ್ರೆಗಳ ಕುರಿತು ಪ್ರತಿಕ್ರಿಯಿಸಿ ಬಿಜೆಪಿಯವರು ಈ ಯಾತ್ರೆಗಳಿಂದ ರಾಜಕೀಯ ಲಾಭ ಸಿಗುತ್ತದೆ ಎಂದು ಭಾವಿಸಿದ್ದಾರೆ. ಎಸ್ಐಟಿ ರಚಿಸಿದಾಗ ವಿರೋಧ ಮಾಡದೆ ಇದ್ದವರು, ನಂತರದಲ್ಲಿ ಏನೂ ಸಿಗುವುದಿಲ್ಲ ಎಂದು ತಿಳಿದು ವಿರೋಧಿಸುತ್ತಿದ್ದಾರೆ. ಇದು ಢೋಂಗಿತನ' ಎಂದು ಟೀಕಿಸಿದರು.

ಬಿಜೆಪಿಯವರು ದಸರಾ ಹಬ್ಬದಲ್ಲೂ ರಾಜಕಾರಣ ಮಾಡುತ್ತಿದ್ದಾರೆ. ಬಾನು ಮುಷ್ತಾಕ್ ಅವರಿಗೆ ಬುಕರ್ ಪ್ರಶಸ್ತಿ ದೊರಕಿದ್ದು, ಎಷ್ಟು ಜನಕ್ಕೆ ಈ ಪ್ರಶಸ್ತಿ ಲಭಿಸಿದೆ ಎಂದು ಪ್ರಶ್ನಿಸಿದ ಅವರು ದಸರಾ ಮೇಲೆ ರಾಜಕಾರಣ ಯಾವುದೇ ಪರಿಣಾಮ ಬೀರುವುದಿಲ್ಲ ಎಂದರು. ಚಾಮುಂಡಿ ಬೆಟ್ಟ ಹಿಂದೂಗಳ ಆಸ್ತಿಯೇ ಇರಬಹುದು.

ದಸರಾ ಹಬ್ಬ ನಾಡ ಹಬ್ಬವಲ್ಲವೇ ನಾಡ ಹಬ್ಬ ಎಂದರೆ ಎಲ್ಲರೂ ಸೇರಿ ಮಾಡುವುದು. ಹಿಂದೂ, ಮುಸಲ್ಮಾನರು, ಕ್ರಿಶ್ಚಿಯನ್ನರು, ಬೌದ್ಧರು ಸೇರಿ ಆಚರಿಸುವ ಹಬ್ಬ' ಎಂದರು.



**ಯಾತ್ರೆ ಮಾಡುವುದರಿಂದ ಹಿಂದುತ್ವ ಗಟ್ಟಿಯಾಗುತ್ತದೆ. ಹಿಂದೂಗಳೆಲ್ಲ ಒಟ್ಟಾಗುತ್ತಾರೆ ಎಂದು ಬಿಜೆಪಿಯವರು ತಿಳಿದಿದ್ದಾರೆ. ನಾನೂ ಕೂಡ ಹಿಂದೂವೇ. ನಮ್ಮೂರಿನಲ್ಲಿ ರಾಮಮಂದಿರ ಕಟ್ಟಿದ್ದೇವೆ. ಹಿಂದುಗಳೆಂದರೆ ರಾಜಕೀಯ, ಅಪಪ್ರಚಾರ ಮಾಡುವುದಲ್ಲ, ಸುಳ್ಳು ಹೇಳುವುದಲ್ಲ. ಯಾರೇ ಆದರೂ ಮನಷ್ಯತ್ವವಿರಬೇಕು' ಎಂದರು.**

# ಗ್ರಾಮದಲ್ಲಿ ಹುಲಿ ಪ್ರತ್ಯಕ್ಷ: ಭಯದಲ್ಲಿ ರೈತರು

• **ಉದಯವಾಹಿನಿ ಗುಂಡ್ಲುಪೇಟೆ**

ತಾಲ್ಲೂಕಿನ ಚನ್ನಮಲ್ಲೀಪುರ ಗ್ರಾಮದ ಹೊರ ವಲಯದಲ್ಲಿ ರೈತರೊಬ್ಬರ ಜಮೀನಿನಲ್ಲಿ ಬೆಳಿಗ್ಗೆ ಹುಲಿ ಕಾಣಿಸಿಕೊಂಡಿದ್ದು, ಜನರು ಭಯಭೀತರಾಗಿದ್ದಾರೆ.

ಸ್ಥಳಕ್ಕೆ ಬಂದ ಅರಣ್ಯ ಇಲಾಖೆ ನೌಕರರಿಗೆ ರೈತರು ದಿಗ್ಬಂಧನ ಹಾಕಿದರು. ಕಗ್ಗಳದಹುಂಡಿ ಸಂತೋಷ್ ಅವರಿಗೆ ಸೇರಿದ ಜಮೀನಿನಲ್ಲಿ ಹುಲಿ ಕಾಣಿಸಿಕೊಂಡಿತು. ಅಲ್ಲಿಗೆ ಹೋಗಿ ಪರಿಶೀಲಿಸಿದಾಗ ಕಾಡಂದಿಯನ್ನು ಬೇಟೆಯಾಡಿ ತಿಂದಿದ್ದ ಹುಲಿ ನಮ್ಮ ಶಬ್ದ ಕೇಳಿ ಮುಂದೆ ಹೋಯಿತು. ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ನಾಲ್ಕು ಮಂದಿ ನೌಕರರು ಬರಿಗೈನಲ್ಲಿ ಸ್ಥಳಕ್ಕೆ ಆಗಮಿಸಿದರು.

ಪಟಾಕಿ ಸಿಡಿಸಿ ಹುಲಿಯನ್ನು ಓಡಿಸುವ ಪ್ರಯತ್ನ ಬೇಡ ಎಂದು ಹೇಳಿದ್ದಲ್ಲದೇ ಮೇಲಾಧಿಕಾರಿಗಳನ್ನು ಕರೆಸುವಂತೆ ಒತ್ತಾಯಿಸಿದೆವು. ಆದರೆ ವಲಯ ಅರಣ್ಯಾಧಿಕಾರಿ ಕೇಂದ್ರ ಸ್ಥಾನದಲ್ಲಿ ಇಲ್ಲ. ಎಸ್‌ಟಿಪಿಎಫ್ ಸಿಬ್ಬಂದಿ ಕ್ರೀಡಾಕೂಟಕ್ಕೆ ಹೋಗಿದ್ದಾರೆ. ನಾವೇನು ಮಾಡಲಾಗದು ಎಂದು ಸ್ಥಳಕ್ಕೆ ತೆರಳಿದ್ದ ನೌಕರರು ವಿವರಣೆ ನೀಡಿದರು. ಈ ಹಿನ್ನೆಲೆಯಲ್ಲಿ ನೌಕರರಿಗೆ ದಿಗ್ಬಂಧನ ವಿಧಿಸಿ ಆಕ್ರೋಶ ವ್ಯಕ್ತಪಡಿಸಿದೆವು ಎಂದು ಸ್ಥಳೀಯರು ತಿಳಿಸಿದರು.



**ಮಧ್ಯಾಹ್ನವಾದರೂ ಯಾವುದೇ ಅಧಿಕಾರಿ ಸ್ಥಳಕ್ಕೆ ಬರಲಿಲ್ಲ. ನಂತರ ಎಸ್‌ಟಿಪಿಎಫ್ ಸಿಬ್ಬಂದಿಯೊಬ್ಬರು ಡ್ರೋನ್ ಮೂಲಕ ಸ್ಥಳದಲ್ಲಿದ್ದ ನೌಕರರ ಸಹಕಾರದಲ್ಲಿ ಹುಲಿ ಇರುವಿಕೆ ಪರಿಶೀಲಿಸಿದರು. ನಂತರ ಹೆಜ್ಜೆ ಗುರುತಿನ ಜಾಡು ಹಿಡಿದು ಹೋದಾಗ ಹುಲಿ ಅಲ್ಲಿಂದ ತೆರಳಿರುವುದನ್ನು ಧೃಡವಾಯಿತು ಎಂದರು.**

# ರೂ.7 ಲಕ್ಷ ಮೌಲ್ಯದ ಚಿನ್ನಾಭರಣ ವಶ

• **ಉದಯವಾಹಿನಿ ನಾಗಮಂಗಲ**

ತಾಲ್ಲೂಕು ಸೇರಿದಂತೆ ಅಂತರ ಜಿಲ್ಲಾ ಸರಗಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆರೋಪಿಯನ್ನು ಬೆಳ್ಳೂರು ಠಾಣೆಯ ಪೊಲೀಸರು ಬಂಧಿಸಿ ಆರೋಪಿಯಿಂದ 7 ಲಕ್ಷ ಮೌಲ್ಯದ ಚಿನ್ನಾಭರಣವನ್ನು ವಶಪಡಿಸಿಕೊಂಡಿದ್ದಾರೆ. ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಭೂವನಹಳ್ಳಿ ಹೋಬಳಿಯ ಭೂತೇಶ್ವರನಗರದ( ಭೂರಪ್ಪನಗುಡಿ) ತಿಪ್ಪೇಶ್( ಭರತ್) ವಿವಿಧ ಸರಗಳ್ಳತನದಲ್ಲಿ ಭಾಗಿಯಾಗಿರುವ ಬಂಧಿತ ಆರೋಪಿ.

ಅ.28 ಆಂಧ್ರಪ್ರದೇಶದ ಹಿಂದೂಪುರದಲ್ಲಿ ಆರೋಪಿಯನ್ನು ಬಂಧಿಸಿದ ಬೆಳ್ಳೂರು ಪೊಲೀಸರು ನಂತರ ವಿಚಾರಣೆ ನಡೆಸಿದಾಗ ಬೆಳ್ಳೂರು ಠಾಣೆಯ ಒಂದು ಪ್ರಕರಣ ಸೇರಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಠಾಣೆಯ ವ್ಯಾಪ್ತಿಯ ಎರಡು ಸರಗಳ್ಳತನ ಪ್ರಕರಣಗಳನ್ನು ಭಾಗಿಯಾಗಿರುವುದು ಬೆಳಕಿಗೆ ಬಂದಿದೆ. ಆರೋಪಿಯಿಂದ ಒಟ್ಟು 69 ಗ್ರಾಂ ತೂಕದ ಮೂರು ಚಿನ್ನದ ಸರಗಳು, ಒಂದು ಹೋಂಡಾ ಯೂನಿಕಾನ್ ಬೈಕ್ ರೂ 7 ಲಕ್ಷದ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ತಾಲ್ಲೂಕಿನ ಬೆಳ್ಳೂರು ಹೋಬಳಿಯ ವಡ್ಡರಹಳ್ಳಿ ಗ್ರಾಮದ ಕಿರಣ್ ಕುಮಾರ್ ಎಂಬುವರ ಪತ್ನಿ ಆ.15ರಂದು ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ಕೆಲಸ ಮುಗಿಸಿ ಸ್ಕೂಟರ್ ನಲ್ಲಿ ಬೆಳ್ಳೂರು ಕ್ರಾಸ್ ಕಡೆಗೆ ಬರುತ್ತಿದ್ದಾಗ ಸಮೃದ್ಧಿ ಹೋಟೆಲ್ ಎದುರು ಹಿಂಬದಿಯಿಂದ ಬೈಕ್ ಸವಾರ ಕುತ್ತಿಗೆಯಲ್ಲಿದ್ದ 30 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಹೋಗಿದ್ದಾರೆ ಎಂದು ಬೆಳ್ಳೂರು ಠಾಣೆಗೆ ದೂರು ನೀಡಿದ್ದರು.




# ದಿ ರೈಲ್ವೆ ಕೋ ಆಪರೇಟೀವ್ ಬ್ಯಾಂಕ್‌ನ ಶತ ಪಯಣ ಸಮಾರಂಭ

• **ಉದಯವಾಹಿನಿ ಮೈಸೂರು**

105 ವರ್ಷಗಳು ಪೂರೈಸಿರುವ ನಗರದ ದಿ ರೈಲ್ವೆ ಕೋ ಆಪರೇಟೀವ್ ಬ್ಯಾಂಕ್ ತನ್ನ ಶತಮಾನೋತ್ಸವ 105ನೇ ವರ್ಷದ ಸಂಭ್ರಮವನ್ನು ಶತ ಪಯಣ ಎಂಬ ಹೆಸರಿನಲ್ಲಿ ಸೆಪ್ಟೆಂಬರ್ 6ರಂದು ಬೆಳಿಗ್ಗೆ 10.30ಕ್ಕೆ ಜೆ.ಕೆ. ಮೈದಾನದಲ್ಲಿರುವ ಎಂಎಂಸಿ, ಆರ್ಐ ಪ್ಲಾಟಿನಮ್ ಜುಬಿಲಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷರಾದಸಹಕಾರ ರತ್ನ ಪುರಸ್ಕೃತ ಎಂ.ಬಿ. ಮಂಜೇಗೌಡ ಹೇಳಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, 1920 ರಲ್ಲಿ ಒಂದು ಚಿಕ್ಕ ಸಹಕಾರ ಸಂಘವಾಗಿ ಪ್ರಾರಂಭವಾದ ಈ ಸಂಸ್ಥೆ ಇಂದು ಬೃಹದಾಕಾರವಾಗಿ ಬೆಳೆದಿದೆ. ನಮ್ಮಲ್ಲಿ 10 ಸಾವಿರಕ್ಕೂ ಅಧಿಕ ಸದಸ್ಯರಿದ್ದಾರೆ. 1200 ಕೋಟಿ ಆಸ್ತಿ ಇದೆ. ಕೇವಲ ಅರ್ಧ ಗಂಟೆಯಲ್ಲಿ ನಾವು ನಮ್ಮ ಸದಸ್ಯರಿಗೆ 25 ಲಕ್ಷ ಸಾಲ ನೀಡುತ್ತೇವೆ. ನಮ್ಮಲ್ಲಿ ಶೂನ್ಯ ಎನ್‌ಪಿಎ ಇದ್ದು, ಎಲ್ಲ ಆಧುನಿಕ ತಂತ್ರಜ್ಞಾನ ನಮ್ಮ ಬ್ಯಾಂಕಿಂಗ್ ಲಭ್ಯವಿದೆ. ಪ್ರಸಕ್ತ ಸಾಲಿನಲ್ಲಿ ನಾವು 12 ಕೋಟಿ ಲಾಭ ಗಳಿಸಿದ್ದು, ಶೇ.8.25 ಡಿವಿಡೆಂಟ್ ನೀಡಿದ್ದೇವೆ. ನಮ್ಮಲ್ಲಿ 650 ಕೋಟಿ ರೂ.ಗಳಿಗೂ ಮೀರಿದ ಠೇವಣಿಗಳಿವೆ ಎಂದು ಹೇಳಿದರು. ಈ ವಿಶೇಷ ಕಾರ್ಯಕ್ರಮಕ್ಕೆ ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ವಿವಿಧ ಗಣ್ಯರು ಮತ್ತು ರೈಲ್ವೆ ಅಧಿಕಾರಿಗಳು ಭಾಗವಹಿಸುವರು ಎಂದು ಕಾರ್ಯಕ್ರಮದ ಪಟ್ಟಿಯನ್ನು ಹೇಳಿದರು. ಶತಮಾನೋತ್ಸವ ಸಮಾರಂಭದಲ್ಲಿ ಬ್ಯಾಂಕ್ ಸ್ಥಾಪನೆಗೆ ಕೊಡುಗೆ ನೀಡಿದ ಹಿರಿಯ ಸದಸ್ಯರು ಹಾಗೂ ಪ್ರಮುಖ ವ್ಯಕ್ತಿಗಳನ್ನು ಸನ್ಮಾನಿಸಲಾಗುವುದು. ಜೊತೆಗೆ, ಬ್ಯಾಂಕ್ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡುವುದಾಗಿ ತಿಳಿಸಿದರು.



**2007ರಲ್ಲಿ ಮೈಸೂರು ಜಿಲ್ಲೆಯ ಅತ್ಯುತ್ತಮ ಸಹಕಾರ ಬ್ಯಾಂಕ್ ಎಂಬ ಗೌರವವನ್ನು ಈ ಸಂಸ್ಥೆ ಪಡೆದಿದೆ. ಬ್ಯಾಂಕ್ ಸಂಪೂರ್ಣ ಕಂಪ್ಯೂಟರೀಕರಣಗೊಂಡಿದೆ. ಎ-ಗ್ರೇಡ್ ಸ್ಥಾನಮಾನ ಗಳಿಸಿ, 2009ರಲ್ಲಿ ಕೋರ್ ಬ್ಯಾಂಕಿಂಗ್ ವ್ಯವಸ್ಥೆ ಅಳವಡಿಸಿಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ ಬ್ಯಾಂಕ್ ಅನ್ನು ಬಹುರಾಜ್ಯ ಸಹಕಾರ ಬ್ಯಾಂಕ್ ಆಗಿ ಪರಿವರ್ತಿಸಲು ಹಾಗೂ ಹುಬ್ಬಳ್ಳಿ, ಮಂಗಳೂರು, ಮಂಡ್ಯ ಮತ್ತು ದಾವಣಗೆರೆಯಲ್ಲಿ ಹೊಸ ಶಾಖೆಗಳನ್ನು ತೆರೆಯುವ ಉದ್ದೇಶವಿದೆ ಎಂದು ಅವರು ತಿಳಿಸಿದರು.**

**ಮಂಜೇಗೌಡ**

# ಎಲ್ಲಾ ಜಾತಿಯವರ ಅಭಿವೃದ್ಧಿಯಷ್ಟೆ ನಮ್ಮ ಗುರಿ

## ಜಿಲ್ಲಾಡಳಿತ ಆಯೋಜಿಸಿದ್ದ ಭಗೀರಥ ಜಯಂತಿ ಕಾರ್ಯಕ್ರಮ, ಉಪ್ಪಾರ ಸಮುದಾಯ ಭವನದ ಶಂಕುಸ್ಥಾಪನೆ

• **ಉದಯವಾಹಿನಿ ಮೈಸೂರು**

ಶೂದ್ರ, ಶ್ರಮಿಕ ವರ್ಗಗಳಿಗೆ ಆರ್ಥಿಕ ಚೈತನ್ಯ ಕೊಡಲು ಅಂದು ಭಾಗ್ಯಗಳು-ಇಂದು ಗ್ಯಾರಂಟಿಗಳು ವರದನವಾಗಿವೆ. ನಮ್ಮ ಸರ್ಕಾರ ಜಾತಿ ನೋಡಲ್ಲ. ಎಲ್ಲಾ ಜಾತಿಯವರ ಅಭಿವೃದ್ಧಿಯಷ್ಟೆ ನಮ್ಮ ಗುರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದರು. ಜಿಲ್ಲಾಡಳಿತ ಆಯೋಜಿಸಿದ್ದ ಭಗೀರಥ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಬಳಿಕ, ''ಉಪ್ಪಾರ ಸಮುದಾಯ ಭವನದ'' ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ಈ ನೆಲದ ದಾರ್ಶನಿಕರು, ಮಹಾನುಭಾವರ ಮನುಕುಲದ ಕೊಡುಗೆ ಗಮನಿಸಿ ಅವರೆಲ್ಲರ ಜಯಂತಿಯನ್ನು ಸರ್ಕಾರವೇ ಆಚರಿಸುತ್ತಿದೆ. ಜೊತೆಗೆ ಇವರೆಲ್ಲರೂ ಜಾತ್ಯತೀತ ಮನೋಭಾವದಿಂದ ನೀಡಿದ ಮೌಲ್ಯಗಳ ಆಧಾರದಲ್ಲಿ ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸುತ್ತದೆ ಎಂದರು.

ಚಾತುವರ್ಣ ವ್ಯವಸ್ಥೆಯ ಅಡಿಯಲ್ಲಿ ಶೂದ್ರರಿಗೆ ಶಿಕ್ಷಣದ ಅವಕಾಶವೇ ಇಲ್ಲ. ಇದರಿಂದಾಗಿ ಶೂದ್ರರಿಗೆ ದುಡಿಯುವ ಅವಕಾಶವೇ ಇಲ್ಲದಂತಾಯಿತು. ಶೂದ್ರರಲ್ಲಿ ಉಪ್ಪಾರ ಸಮುದಾಯ ಅತೀ ಹಿಂದುಳಿದ ಸಮುದಾಯವಾಗಿದೆ. ಅಂಬೇಡ್ಕರ್ ಅವರು ನೀಡಿರುವ ''ಶಿಕ್ಷಣ-ಸಂಘಟನೆ-ಹೋರಾಟ ಎನ್ನುವ ಮಂತ್ರವನ್ನು ನಾವು ಪಾಲಿಸುವ ಮೂಲಕ ಉಪ್ಪಾರ ಸಮುದಾಯ ಆರ್ಥಿಕ ಸಬಲರಾಗಬೇಕು. ಈ ಉದ್ದೇಶದಿಂದಲೇ ನಾನು ಉಪ್ಪಾರ ಅಭಿವೃದ್ಧಿ ನಿಗಮ ಸ್ಥಾಪಿಸಿದೆವು ಎಂದು ವಿವರಿಸಿದರು.

ಶಕ್ತಿ ಯೋಜನೆಯಡಿ 500 ಕೋಟಿ ಮಹಿಳೆಯರು ಉಚಿತ ಪ್ರಯಾಣ ಮಾಡಿರುವುದಲ್ಲದೆ, ಇದರಿಂದಾಗಿ ರಾಜ್ಯದ ಆರ್ಥಿಕ ಚಟುವಟಿಕೆಗೆ ವೇಗ ಒದಗಿ ಬಂದಿದೆ ಎಂದರು.

ಆರ್ಥಿಕ ಅಸಮಾನತೆ ಸುಮ್ಮನೆ ಭಾಷಣ ಮಾಡಿದರೆ ಹೋಗಲ್ಲ. ಕಾರ್ಯಕ್ರಮ ರೂಪಿಸಿ ಜಾರಿಗೆ ತರುವುದು ಮುಖ್ಯ. ಇದಕ್ಕಾಗಿ ನಮ್ಮ ಸರ್ಕಾರ ನಿಂತರವಾಗಿ ಶ್ರಮಿಸುತ್ತಿದೆ ಎಂದರು.

ರಾಜ್ಯದಲ್ಲಿ ದಲಿತ ಹೋರಾಟ ಜೋರಾಗಿದ್ದ ಸಂದರ್ಭದಲ್ಲಿ, '' ಹೆಂಡ ಬೇಡ-ಶಾಲೆ ಬೇಕು'' ಎನ್ನುವ ಘೋಷಣೆ ಕೂಗಿದ್ದರು. ಈ ಘೋಷಣೆಯ ಪ್ರೇರಣೆಯಿಂದ ನಾನು ಮೊರಾರ್ಜಿ ವಸತಿ ಶಾಲೆಗಳನ್ನು ಆರಂಭಿಸಿದೆ. ಈಗ ಹೋಬಳಿಗೊಂದು ವಸತಿ ಶಾಲೆಗಳಿವೆ ಎಂದರು. ನಾನು ಓದುವಾಗ ಹೋಟೆಲಿಂದ ಸಾಂಬಾರು ತಂದು, ರೂಮಲ್ಲಿ ಅನ್ನ ಮಾಡಿಕೊಂಡು ತಿನ್ನುತ್ತಿದ್ದೆವು. ಈ ಕಷ್ಟ ನನಗೆ ಗೊತ್ತಿದೆ. ಉಪ್ಪಾರ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನದ ಆಧಾರದಲ್ಲಿ ಮುಂದಿನ ಕ್ರಮ ವಹಿಸಲಾಗುವುದು. ಉಪ್ಪಾರ ಭವನಗಳಿಗೆ ಹಣ ಒದಗಿಸಲಾಗುವುದು. ಆದರೆ, ನೀವು ಶಪಥ ಮಾಡಬೇಕು. ನಿಮ್ಮ ಮಕ್ಕಳನ್ನು ಕಡ್ಡಾಯವಾಗಿ ಶಿಕ್ಷಿತರನ್ನಾಗಿ ಮಾಡುತ್ತೇವೆ ಎನ್ನುವ ಶಪಥ ಮಾಡಬೇಕು ಎಂದು ಒತ್ತಾಯಿಸಿದರು.



**ಸರ್ವ ಶ್ರಮಿಕ ವರ್ಗವನ್ನು ಗಮನದಲ್ಲಿ ಇಟ್ಟುಕೊಂಡು ಮೊದಲ ಬಾರಿ ಸಿಎಂ ಆದಾಗ ನಾನು ಹತ್ತು ಹಲವು ಭಾಗ್ಯಗಳನ್ನು ಕಲ್ಪಿಸಿದೆ. ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಐದಕ್ಕೆ ಐದೂ ಗ್ಯಾರಂಟಿಗಳನ್ನು ಜಾರಿ ಮಾಡಿದ್ದರ ಪರಿಣಾಮ ಪ್ರತೀ ಕುಟುಂಬಕ್ಕೆ 5 ರಿಂದ 6 ಸಾವಿರ ರೂಪಾಯಿಯ ನೆರವು ಪ್ರತೀ ತಿಂಗಳು ದೊರೆಯುತ್ತಿದೆ ಎಂದರು.**

**ನಾವು ನಿಮ್ಮ ಜೊತೆ ಗಟ್ಟಿಯಾಗಿ ನಿಂತಿದ್ದೇವೆ-ನೀವು ನಮ್ಮ ಜೊತೆ ಭದ್ರವಾಗಿ ನಿಲ್ಲಿ ಎಂದು ಕರೆ ನೀಡಿದರು. ಜಗದ್ಗುರು ಪುರುಷೋತ್ತಮಾನಂದಪುರಿ ಸ್ವಾಮೀಜಿ ಅವರ ದಿವ್ಯ ಸಾನಿದ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವರಾದ ಕೆ.ವೆಂಕಟೇಶ್, ಶಾಸಕರುಗಳಾದ ಪುಟ್ಟರಂಗಶೆಟ್ಟಿ, ಯತೀಂದ್ರ ಸಿದ್ದರಾಮಯ್ಯ, ದರ್ಶನ್ ಧ್ರುವನಾರಾಯಣ್, ಕೃಷ್ಣಮೂರ್ತಿ, ಗಣೇಶ್ ಪ್ರಸಾದ್, ಅನಿಲ್ ಚಿಕ್ಕಮಾದು ಸೇರಿ ಉಪ್ಪಾರ ಸಮುದಾಯದ ಮುಖಂಡರು ಹಾಗೂ ಜಿಲ್ಲಾಡಳಿತದ ಅಧಿಕಾರಿಗಳು ಉಪಸ್ಥಿತರಿದ್ದರು.**

## ಮಿನಿ ನ್ಯೂಸ್

# ಜನಗಣತಿಯಲ್ಲಿ ಹಳ್ಳಿಕಾರ ಎಂದು ಬರೆಸಲು ಸಲಹೆ

• **ಉದಯವಾಹಿನಿ, ತೋವಿನಕೆರೆ**

ಸೆಪ್ಟೆಂಬರ್ 22ರಿಂದ ಪ್ರಾರಂಭವಾಗುವ ಜನಗಣತಿಯಲ್ಲಿ ಹಳ್ಳಿಕಾರ ಎಂದು ಬರೆಸಿ ಯಾವುದೇ ಕಾರಣದಿಂದ ಹಿಂದೆ ಮುಂದೆ ಕುಲ, ಜಾತಿಗಳನ್ನು ಸೇರಿಸಬೇಡಿ ಎಂದು ರಾಜ್ಯ ಹಳ್ಳಿಕಾರ ಜನಾಂಗದ ಉಪಾಧ್ಯಕ್ಷ ಕೆ.ಎಂ.ನಾಗರಾಜು ಮನವಿ ಮಾಡಿದರು. ತೋವಿನಕೆರೆಯಲ್ಲಿ ಹಳ್ಳಿಕಾರ ಸಂಘ ಹಾಗೂ ಆರ್‌ಎಂಆರ್ ಹಳ್ಳಿಕಾರ ಫೌಂಡೇಶನ್ ಟ್ರಸ್ಟ್ ವತಿಯಿಂದ ಜನಗಣತಿಯಲ್ಲಿ ಜನಾಂಗದವರು ವಹಿಸಬೇಕಾದ ಎಚ್ಚರಿಕೆ ಬಗ್ಗೆ ಮಾತನಾಡಿದರು ಜನಗಣತಿ ಮಾಡುವರು ಬಂದಾಗ ಕೇಳುವ ಪ್ರಶ್ನೆಗಳಿಗೆ ಸ್ಪಷ್ಟವಾಗಿ ಸತ್ಯವಾದ ಮಾಹಿತಿ ನೀಡಿ. ದಾಖಲಾದ ಮಾಹಿತಿಯನ್ನು ತಕ್ಷಣ ಪರಿಶೀಲಿಸಿ. ಜನಾಂಗದ ಹಿಂದುಳಿದಿರುವ ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತರುವ ಅನಿವಾರ್ಯ ನಮಗೆ ಇದೆ. ನಮ್ಮ ಬದುಕಿನ ಪರಿಸ್ಥಿತಿ ಸರ್ಕಾರದ ಗಮನಕ್ಕೆ ತಂದು ಪ್ರವರ್ಗ 1ಕ್ಕೆ ಸೇರಿಸುವಂತೆ ಒತ್ತಡ ಹಾಕಬೇಕಾಗಿದೆ. ಸ್ಥಳೀಯ ಮುಖಂಡರು ಪ್ರತಿ ಹಂತದಲ್ಲೂ ಎಚ್ಚರಿಕೆ ವಹಿಸಲು ತಿಳಿಸಿದರು. ಕಾರ್ಯದರ್ಶಿ ಟಿ. ಶ್ರೀನಿವಾಸ ಮೂರ್ತಿ, ಮಹಾಲಿಂಗಯ್ಯ ಮಾತನಾಡಿದರು. ಸತೀಶ್, ಬಾಬು, ಶಬರಿಮಲೈ ನಾರಾಯಣಪ್ಪ, ಟಿ.ಎಲ್.ವರದರಾಜು, ಶಾಲಾಭಿವೃದ್ಧಿ ಅಧ್ಯಕ್ಷ ಮಂಜಣ್ಣ, ಸೋಮಶೇಖರ್ ಹಾಜರಿದ್ದರು.

# ಕೊಳಚೆ ನೀರಿನಲ್ಲಿಯೇ ಜನ ಓಡಾಟ

• **ಉದಯವಾಹಿನಿ ಗುಬ್ಬಿ**

ಪಟ್ಟಣದ ಹೃದಯ ಭಾಗದಲ್ಲಿ ಹೆದ್ದಾರಿಗೆ ಹೊಂದಿಕೊಂಡಂತೆ ಇರುವ ಬಸ್ ನಿಲ್ದಾಣದಲ್ಲಿ ಮಳೆ ಬಂದರೆ ಹೊರಗಿನ ನೀರು ಬಸ್ ನಿಲ್ದಾಣಕ್ಕೆ ಹರಿದುಬಂದು ನಿಲ್ಲುತ್ತದೆ. ನಿಲ್ದಾಣದಲ್ಲಿ ನೀರು ಸರಾಗವಾಗಿ ಹರಿಯಲು ಸಾಧ್ಯವಿಲ್ಲದ್ದರಿಂದ ಪ್ರಯಾಣಿಕರು ತಿರುಗಾಡಲು ಪ್ರಯಾಸ ಪಡುವಂತಾಗಿದೆ. ಮಳೆ ನೀರಿನ ಜೊತೆಗೆ ಕಸ, ಕೊಳೆತ ತರಕಾರಿ ಹರಿದು ಬರುತ್ತದೆ. ಪ್ರಯಾಣಿಕರು ನೆಮ್ಮದಿಯಿಂದ ಇಳಿದು ಹತ್ತಬೇಕಾಗಿರುವ ಬಸ್ ನಿಲ್ದಾಣ ಸಮಸ್ಯೆಗಳ ಆಗರವಾಗಿದೆ. ಬಸ್ ನಿಲ್ದಾಣದ ಪಕ್ಕದ ಸಂತೆ ಮೈದಾನಕ್ಕೆ ಹೋಗುವ ರಸ್ತೆಯಲ್ಲಿ ನೀರು ಸರಾಗವಾಗಿ ಹರಿಯದೆ ಇರುವುದರಿಂದ ಕಸ ಕಡ್ಡಿಗಳು ಬಸ್ ನಿಲ್ದಾಣದ ಒಳಗೆ ಬಂದು ನಿಲ್ಲುವಂತಾಗುತ್ತಿದೆ.

ಸಂಬಂಧಿಸಿದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಬಸ್ ನಿಲ್ದಾಣದ ಅವ್ಯವಸ್ಥೆ ಗೊತ್ತಿದ್ದರೂ ಗಮನ ಹರಿಸದೆ ಇರುವುದು ಬೇಸರದ ಸಂಗತಿ ಎಂದು ಪ್ರಯಾಣಿಕರು ಆರೋಪಿಸುತ್ತಾರೆ.

# ನ್ಯಾನೋ ದ್ರವರೂಪದ ಯೂರಿಯಾ ಬಳಸಲು ಸಲಹೆ

• **ಉದಯವಾಹಿನಿ ಹುಳಿಯಾರು**

ನ್ಯಾನೋ (ದ್ರವರೂಪದ ಯೂರಿಯಾ) ಬಳಸಿ ರೈತರು ಸಮಯ ಹಾಗೂ ಹಣ ಉಳಿಸಿ ಉತ್ತಮ ಫಸಲು ಪಡೆಯಬಹುದು ಎಂದು ಶಾಸಕ ಸಿ.ಬಿ.ಸುರೇಶ್ ಬಾಬು ಹೇಳಿದರು. ಲಕ್ಮೀಪುರ ಗ್ರಾಮದಲ್ಲಿ ಕೃಷಿ ಇಲಾಖೆಯಿಂದ ರಾಗಿ ಬೆಳೆಗೆ ಡ್ರೋನ್ ಮೂಲಕ ನ್ಯಾನೋ ಯುರಿಯಾ ಸಿಂಪಡಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಐದಾರು ರೈತರು ಒಟ್ಟಿಗೆ ಸೇರಿ ಹದಿನೈದಿಪ್ಪತ್ತು ಎಕರೆ ಬೆಳೆಗೆ ಸಿಂಪಡಣೆ ಮಾಡಿಸಿಕೊಳ್ಳಬಹುದು. ಒಂದು ಎಕರೆಗೆ ಅರ್ಧ ಲೀ. ನ್ಯಾನೋ ಗೊಬ್ಬರ ಸಾಕಾಗುತ್ತದೆ. ಘನ ರೂಪದ ಯೂರಿಯಾಕ್ಕೆ ಬೇಡಿಕೆ ಹೆಚ್ಚಾಗಿದ್ದು ಅಂಗಡಿಗಳ ಮುಂದೆ ನಿಂತು ಕಾಯುವುದನ್ನು ತಪ್ಪುತ್ತದೆ ಎಂದರು. ಕೃಷಿ ಇಲಾಖೆ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಎಚ್.ಎಸ್.ಶಿವರಾಜ್ ಕುಮಾರ್ ಮಾತನಾಡಿ, ಪ್ರತಿ ಎಕರೆಗೆ 22 ಕೆ.ಜಿ.ಯೂರಿಯಾ ಮೇಲು ಗೊಬ್ಬರವಾಗಿ ನೀಡಬೇಕು. ರೈತರು ಹೆಚ್ಚು ಯೂರಿಯಾ ಬಳಕೆಯಿಂದ ತೊಂದರೆ ಹೆಚ್ಚಾಗುತ್ತದೆ ಎಂದರು.

# ಧರ್ಮಸ್ಥಳಕ್ಕೆ ಹೊರಟ ಧರ್ಮಯಾತ್ರೆಗೆ ಚಾಲನೆ

• **ಉದಯವಾಹಿನಿ ಶಿಡ್ಲಘಟ್ಟ**

ಶಿಡ್ಲಘಟ್ಟದಿಂದ ಧರ್ಮಸ್ಥಳಕ್ಕೆ ಹೊರಟ ಧರ್ಮಯಾತ್ರೆಗೆ ನಗರದ ಅಶೋಕ ರಸ್ತೆಯ ದ್ವಿಮುಖ ಗಣಪತಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಚಾಲನೆ ನೀಡಲಾಯಿತು. ನಮ್ಮ ಹಿಂದೂ ಧರ್ಮದ ಅಸ್ತಿತ್ವಕ್ಕೆ ಧಕ್ಕೆ ಬಂದಾಗ ಹಿಂದೂಗಳೆಲ್ಲಾ ಒಂದಾಗಿ ಧರ್ಮ ರಕ್ಷಣೆಗೆ ನಿಲ್ಲಬೇಕು ಎಂದು ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ಸೀಕಲ್ ಆನಂದಗೌಡ ತಿಳಿಸಿದರು. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದಾಗಲೆಲ್ಲಾ ಹಿಂದೂ ಧರ್ಮ ಮತ್ತು ಧಾರ್ಮಿಕ ಕೇಂದ್ರಗಳನ್ನು ಗುರಿ ಮಾಡಿ ಚ್ಯುತಿಯಾಗುವಂತಹ ಕೆಲಸ ಮಾಡುತ್ತಿದೆ' ಎಂದು ದೂರಿದರು. ಇದೀಗ ಧರ್ಮಸ್ಥಳ ಮಂಜುನಾಥನ ಸನ್ನಿಧಿ ಬಗ್ಗೆ ಅಪಪ್ರಚಾರ ಮಾಡುವವರಿಗೆ ಪರೋಕ್ಷವಾಗಿ ಕುಮ್ಮಕ್ಕು ನೀಡುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು. ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಒತ್ತಾಯಿಸಿ ನೂರಾರು ಮಂದಿ ಶಿಡ್ಲಘಟ್ಟದಿಂದ ಧರ್ಮಸ್ಥಳಕ್ಕೆ ಧರ್ಮ ಯಾತ್ರೆ ಕೈಗೊಂಡಿದ್ದೇವೆ' ಎಂದರು.

# ಬೆ.ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲೂ ಮತ ಕಳ್ಳತನ ಶಂಕೆ

• **ಉದಯವಾಹಿನಿ ರಾಮನಗರ**

ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಬಿಜೆಪಿಯವರು ಮಹಾರಾಷ್ಟ್ರದಲ್ಲಿ ಮತ ಕಳ್ಳತನ ಮಾಡಿರುವಂತೆ, ರಾಜ್ಯದಲ್ಲಿ ಡಿ.ಕೆ. ಸುರೇಶ್ ಅವರ ಕ್ಷೇತ್ರವಾದ ಬೆಂಗಳೂರು ಗ್ರಾಮಾಂತರದಲ್ಲೂ ಮತ ಕಳ್ಳತನ ನಡೆಸಿರುವ ಅನುಮಾನ ಇದೆ ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯಕುಮಾರ್ ಸೊರಕೆ ಆರೋಪಿಸಿದರು. ವಿಧಾನಸಭಾ ಚುನಾವಣೆಯಲ್ಲಿ ಮಹದೇವಪುರ ಕ್ಷೇತ್ರದಲ್ಲಿ ಮತ ಕಳ್ಳತನ ನಡೆದಿರುವ ಮಾದರಿಯಲ್ಲಿ ಇಲ್ಲೂ ನಡೆದಿದೆ ಎಂದು ನಮ್ಮ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಅನುಮಾನ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಬೂತ್ ಮಟ್ಟದಿಂದ ಮತದಾರರ ಪಟ್ಟಿ ಸಂಗ್ರಹಿಸಿ ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದು ತಿಳಿಸಿದರು. ಒಂದು ವೇಳೆ ಅಕ್ರಮ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ರಾಷ್ಟ್ರೀಯ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಹೋರಾಟ ನಡೆಸಲಾಗುವುದು ಎಂದರು.

ಅಂತರಾಳದಿಂದ.. EDITORIAL

# ಶಿಕ್ಷಣ ವ್ಯವಸ್ಥೆಯಲ್ಲಿ ಪಲ್ಲಟ: ಹೆಚ್ಚುತ್ತಿರುವ ಮನೆಪಾಠದ ಪ್ರವೃತ್ತಿ



**ಸರ್ಕಾರಿ ಶಾಲೆಗಳ ಮಹತ್ವ ಏನು ಎಂಬುದನ್ನೂ ಸಿಎಂಎಸ್ ತೋರಿಸಿಕೊಟ್ಟಿದೆ. ಖಾಸಗಿ ಶಾಲೆಗಳಲ್ಲಿ ಮಗುವೊಂದಕ್ಕೆ ಶಿಕ್ಷಣ ಕೊಡಿಸಲು ಬೇಕಾಗುವ ವಾರ್ಷಿಕ ಸರಾಸರಿ ಮೊತ್ತ 25 ಸಾವಿರ, ಸರ್ಕಾರಿ ಶಾಲೆಯಲ್ಲಿ ಈ ಮೊತ್ತ 2,863 ಎಂಬುದು ಸಮೀಕ್ಷೆಯಲ್ಲಿ ಉಲ್ಲೇಖವಾಗಿದೆ. ದೇಶದ ಬಹುತೇಕ ಕಡೆಗಳಲ್ಲಿ ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳ ಎದುರು ಸೋತಿವೆ. ಆದರೆ ಕೇರಳ ರಾಜ್ಯ ಹಾಗೂ ದೆಹಲಿಯಂತಹ ಕೇಂದ್ರಾಡಳಿತ ಪ್ರದೇಶ ಈ ಮಾತಿಗೆ ಅಪವಾದವಾಗಿ ನಿಂತಿವೆ. ಕೇರಳ ಹಾಗೂ ದೆಹಲಿಯಲ್ಲಿ ಸರ್ಕಾರಿ ಶಾಲೆಗಳ ಗುಣಮಟ್ಟ ಸುಧಾರಣೆಗೆ ಈಚೆಗೆ ಕೆಲವು ವರ್ಷಗಳಲ್ಲಿ ವಿಶೇಷ ಪ್ರಯತ್ನಗಳು ನಡೆದಿವೆ. ವಿರೋಧಾಭಾಸವೆಂದರೆ, ಖಾಸಗಿ ಶಾಲೆಗಳಲ್ಲಿ ದುಬಾರಿ ಶುಲ್ಕ ಪಾವತಿಸಿದ ನಂತರವೂ ಪಾಲಕರು ತಮ್ಮ ಮಕ್ಕಳನ್ನು ಮನೆಪಾಠಕ್ಕೆ ಕಳುಹಿಸುತ್ತಿದ್ದಾರೆ. ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುವ ಪ್ರಮಾಣ ಕಡಿಮೆ ಆಗುತ್ತಿರುವುದು ಕಳವಳಕಾರಿ. ಇದನ್ನು ಸರಿಪಡಿಸಲು ಅಗತ್ಯ ಕ್ರಮಗಳು ಆಗಬೇಕು.**

ಶಿಕ್ಷಣ ಕ್ಷೇತ್ರವನ್ನು ಗಮನದಲ್ಲಿ ಇರಿಸಿಕೊಂಡು ಕೇಂದ್ರ ಸರ್ಕಾರವು ಈ ವರ್ಷದ ಆರಂಭದಲ್ಲಿ ನಡೆಸಿದ ಸಮಗ್ರ ಸಮೀಕ್ಷೆಯೊಂದು (ಸಿಎಂಎಸ್) ದೇಶದ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿನ ಒಂದಿಷ್ಟು ಅನಾರೋಗ್ಯಕರ ಬೆಳವಣಿಗೆಗಳನ್ನು ದಾಖಲಿಸಿದೆ. ದೇಶದಲ್ಲಿ ಶಾಲೆಗೆ ಹೋಗುವ ಮಕ್ಕಳ ಪೈಕಿ ಶೇ 27ರಷ್ಟು ಮಂದಿ ಶೈಕ್ಷಣಿಕ ವರ್ಷದಲ್ಲಿ ಖಾಸಗಿಯಾಗಿ ಮನೆಪಾಠ ಹೇಳಿಸಿಕೊಂಡಿದ್ದಾರೆ. ಹೀಗೆ ಮನೆಪಾಠ ಹೇಳಿಸಿಕೊಂಡ ಮಕ್ಕಳ ಪ್ರಮಾಣವು ಗ್ರಾಮೀಣ ಪ್ರದೇಶಗಳಲ್ಲಿ ಶೇ. 25.5ರಷ್ಟು ಹಾಗೂ ನಗರ ಪ್ರದೇಶಗಳಲ್ಲಿ ಶೇ 30.7ರಷ್ಟು ಇದೆ. 11 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳ ಪೈಕಿ ಶೇ 37ರಷ್ಟು ಮಂದಿ ಖಾಸಗಿಯಾಗಿ ಪಾಠ ಹೇಳಿಸಿಕೊಳ್ಳುತ್ತಿದ್ದಾರೆ.

ನಗರ ಪ್ರದೇಶಗಳ ಕುಟುಂಬಗಳು ಮನೆಪಾಠಕ್ಕಾಗಿ ವಾರ್ಷಿಕ ಸರಾಸರಿ 4,000 ವೆಚ್ಚ ಮಾಡುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ಈ ವೆಚ್ಚವು ಕಡಿಮೆ ಇದ್ದರೂ ಗಮನಾರ್ಹವಾಗಿ ಇದೆ. ಇವೆಲ್ಲವೂ ಹೇಳುತ್ತಿರುವುದು ಪರ್ಯಾಯ ಶಿಕ್ಷಣ ವ್ಯವಸ್ಥೆಯೊಂದು ಕಾರ್ಯ ನಿರ್ವಹಿಸುತ್ತಿದೆ ಎಂಬುದನ್ನು. ಮಕ್ಕಳ ಶಿಕ್ಷಣದ ಬಗ್ಗೆ ಪಾಲಕರು ಹೊಂದಿರುವ ಕಳಕಳಿ, ಆತಂಕಗಳನ್ನು ಕೂಡ ಇವೆಲ್ಲ ಪ್ರತಿಬಿಂಬಿಸುತ್ತವೆಯಾದರೂ, ಮುಖ್ಯವಾಹಿನಿಯ ಶಾಲಾ ಶಿಕ್ಷಣ ವ್ಯವಸ್ಥೆಯ ಗುಣಮಟ್ಟದ ಬಗ್ಗೆ ವಿಶ್ವಾಸ ಇಲ್ಲದಿರುವುದನ್ನೂ ಇವು ಹೇಳುತ್ತಿವೆ. ಸ್ಪರ್ಧಾತ್ಮಕತೆ, ಜೊತೆಗಾರರು ತರುವ ಒತ್ತಡ ಕೂಡ ವಿದ್ಯಾರ್ಥಿಗಳು ಮನೆಪಾಠದ ಕೇಂದ್ರಗಳಿಗೆ ಹೋಗುವುದಕ್ಕೆ ಪ್ರಮುಖ ಕಾರಣ. ಶೈಕ್ಷಣಿಕವಾಗಿ ಮಕ್ಕಳು ಎದುರಿಸಬಹುದಾದ ಸವಾಲುಗಳನ್ನು ನಿಭಾಯಿಸಲು ನೆರವಾಗುವ ಉದ್ದೇಶವು ಮನೆಪಾಠದ ವ್ಯವಸ್ಥೆಗೆ ಇದೆಯಾದರೂ, ಇದು ಮಕ್ಕಳ ಮೇಲೆ ಬಹಳಷ್ಟು ಒತ್ತಡ ಸೃಷ್ಟಿಸುತ್ತಿದೆ. ಶಾಲಾ ಅವಧಿಯ ನಂತರ ಮನೆಪಾಠ ಹೇಳಿಸಿಕೊಳ್ಳುವುದು. ನಂತರ ಹೋಂವರ್ಕ್ ಮಾಡುವುದು ಮಕ್ಕಳಿಗೆ ಶಿಕ್ಷೆಯಂತೆ ಭಾಸವಾಗಬಹುದು. ಮಕ್ಕಳಿಗೆ ಆಟವಾಡಲು ಹಾಗೂ ವಿರಮಿಸಿಕೊಳ್ಳಲು ಸಾಕಷ್ಟು ಸಮಯವೇ ಸಿಗದೆ ಇರಬಹುದು. ಮುಖ್ಯವಾಹಿನಿಯ ಶಿಕ್ಷಣ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಹೆಚ್ಚು ಮಾಡುವ ಮೂಲಕ, ಬಾಹ್ಯ ಮನೆಪಾಠದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಮೂಲಕ ಸಮತೋಲನವೊಂದನ್ನು ಸಾಧಿಸಬಹುದು. ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುವ ಪ್ರಮಾಣ ಕಡಿಮೆ ಆಗುತ್ತಿರುವುದನ್ನು ಸಮೀಕ್ಷೆಯು ತೋರಿಸಿದೆ. 1970ರ ದಶಕದಲ್ಲಿ ಸರ್ಕಾರಿ ಶಾಲೆಗೆ ಸೇರುವ ಮಕ್ಕಳ ಪ್ರಮಾಣ ಶೇ 74ರಷ್ಟು ಇದ್ದಿದ್ದು, ಈಗ ಶೇ 51–56ಕ್ಕೆ ಕುಸಿದಿದೆ. ದೇಶದ ಎಲ್ಲೆಡೆ ತಲೆ ಎತ್ತಿರುವ ಟ್ಯೂಷನ್ ಕೇಂದ್ರಗಳು ಹಾಗೂ ಖಾಸಗಿಯಾಗಿ ಮನೆಪಾಠ ಹೇಳುವವರಷ್ಟೇ ಅಲ್ಲದೆ, ದೊಡ್ಡ ಶಿಕ್ಷಣ ಸಂಸ್ಥೆಗಳು ಕೂಡ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಬಯಸುವವರನ್ನು ಗುರಿಯಾಗಿಸಿಕೊಂಡು ಕೋಚಿಂಗ್ ಕೇಂದ್ರಗಳನ್ನು ನಡೆಸುತ್ತಿವೆ. ರಾಜಸ್ಥಾನದ ಕೋಟ ಪ್ರದೇಶವು ಇಂತಹ ಕೇಂದ್ರಗಳನ್ನು ಸಾಂಕೇತಿಕವಾಗಿ ಪ್ರತಿನಿಧಿಸುವಂತೆ ಬೆಳೆದುನಿಂತಿದೆ. ಇಂತಹ ಕೆಲವು ಕೇಂದ್ರಗಳು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಸೃಷ್ಟಿಸುವ ಒತ್ತಡದ ಕಾರಣಕ್ಕಾಗಿ ಅವುಗಳ ಚಟುವಟಿಕೆಗಳು ದೇಶದ ಗಮನ ಸೆಳೆದಿವೆ. ಇಂತಹ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿದ್ದ ವಿದ್ಯಾರ್ಥಿಗಳಲ್ಲಿ ಕೆಲವರು ಆತ್ಮಹತ್ಯೆ ಮಾಡಿಕೊಂಡಿರುವ ವರದಿಗಳೂ ಇವೆ. ಇವುಗಳ ಮೇಲೆ ಕಾನೂನಿನ ನಿಗಾ ಸಮರ್ಪಕವಾಗಿ ಇಲ್ಲ. ಶಾಲಾ ಶಿಕ್ಷಣವನ್ನು ಇನ್ನಷ್ಟು ಬಲಪಡಿಸಿ, ಸಮಗ್ರ ಆಯಾಮದ ಕಲಿಕೆಯತ್ತ ಗುರಿಯನ್ನು ತಿರುಗಿಸುವ ಮೂಲಕ ಇವುಗಳಿಗೆ ಪರಿಹಾರ ಕಂಡುಕೊಳ್ಳಬಹುದು.

# ರಾಮಾಯಣ



## ಸೀತಾದೇವಿಯು ಶ್ರೀರಾಮನಿಗೆ ಆ ಹಿಂಸಾ ಧರ್ಮವನ್ನು ಹೇಳಿದ್ದು

• ಹಿಂದಿನ ಸಂಚಿಕೆಯಿಂದ

### 119 ನೆಯ ಅಧ್ಯಾಯ

ಆ ಋಷಿಗಳೆಲ್ಲರೂ ಕಂದಮೂಲ ಫಲಾಹಾರಗಳನ್ನು ಮಾಡುತ್ತ ವ್ರತನಿಯಮೋಪವಾಸಗಳಿಂದ ಕಾಯಕೇಶಪಡುತ್ತ ತಪಸ್ಸು ಮಾಡುವಂಥವರು. ಅಂಥವರು ಕ್ರೂರಕರ್ಮಿಗಳಾದ ರಾಕ್ಷಸರಿಂದ ನೊಂದು ಒಂದು ದಿನವಾದರೂ ಸುಖವನ್ನು ಕಾಣದೆ ನನ್ನ ಸಮೀಪಕ್ಕೆ ಬಂದು ಮೊರೆಯಿಟ್ಟಿದ್ದರಿಂದ ನಾನು ನನ್ನಿಂದ ಅವರಿಗೆ ಆಗಬೇಕಾದ ಸೇವೆ ಯಾವುದೆಂದು ಕೇಳಿದನು. ಆ ಋಷಿಗಳು ನನ್ನನ್ನು ಕುರಿತು' ಈ ದಂಡಕಾರಣ್ಯದಲ್ಲಿ ತಪಸ್ಸು ಮಾಡಿಕೊಂಡಿದ್ದೇವೆ. ನಾವು ಅಗ್ನಿ ಹೋತ್ರಾದಿ ಕ್ರಿಯೆಗಳನ್ನು ಮಾಡುವ ಸಮಯದಲ್ಲಿ ರಾಕ್ಷಸರು ನಮ್ಮನ್ನು ಬೆದರಿಸಿ ನಮ್ಮ ಸತ್ಕರ್ಮಗಳಿಗೆ ವಿಘ್ನ ಮಾಡುತ್ತಾರೆ. ಇದುವರೆಗೆ ನಮಗಾರೂ ಗತಿಯೂ ರಕ್ಷಕರೂ ಇಲ್ಲದ ಚಿಂತೆಪಡುತ್ತಿದ್ದೆವು. ನಾವು ಮಾಡಿದ ಪುಣ್ಯಫಲದಿಂದ ಈಗ ನೀನು ಈ ವನಕ್ಕೆ ಬಂದೆ. ತಪ್ಪುಗಳಾದ ನಾವು ರಾಕ್ಷಸರಿಗೆ ತಕ್ಕ ಆಜ್ಞೆಯನ್ನು ಮಾಡುವುದಕ್ಕೆ ಸಮರ್ಥರಾದರೂ ನಾವು ಬಹುಕಾಲ ಕಾಯಕ್ಲೇಶದಿಂದ ಉಗ್ರವಾದ ತಪಸ್ಸನ್ನು ಮಾಡಿ ಈಗ ರಾಕ್ಷಸರನ್ನು ಶಪಿಸಿ ಕೊಂದವಾದರೆ ನಮ್ಮ ತಪಸ್ಸು ಕ್ಷಯವಾಗಿ ನಮ್ಮ ಪ್ರಯಾಸವು ವ್ಯರ್ಥವಾಗುವುದು.

ಆದಕಾರಣ ನಾವು ಆ ರಾಕ್ಷಸರಿಗೆ ಶಾಪವನ್ನು ಕೊಡಲಿಚ್ಚಿಸೆವು. ನಮ್ಮನ್ನು ಬಾಧಿಸುವ ರಾಕ್ಷಸರನ್ನು ಸಂಹರಿಸಿ ನಮ್ಮನ್ನು ರಕ್ಷಿಸುವುದಕ್ಕೆ ನೀನೇ ಸಮರ್ಥನಲ್ಲದ ಮತ್ತೊಬ್ಬರಲ್ಲ' ಎಂದು ಮೊರೆಯಿಟ್ಟರು. ನಾನು ಅವರ ಮಾತನ್ನು ಕೇಳಿ ಅವರನ್ನು ಬಾಧಿಸುವ ರಾಕ್ಷಸರನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿ ಆ ಋಷಿಗಳಿಗೆ ' ಅಂಜಬೇಡಿ' ಎಂದು ಅಭಯವನ್ನು ಕೊಟ್ಟನು. ವೈದೇಹಿ, ನಿನ್ನನ್ನಾದರೂ ಲಕ್ಷ್ಮಣನನ್ನಾದರೂ ನಿಮ್ಮಿಬ್ಬರನ್ನಾದರೂ ಒಂದು ವೇಳೆ ಬಿಟ್ಟೇನು. ಆ ಋಷಿಗಳಿಗೆ ಕೊಟ್ಟ ಪ್ರತಿಜ್ಞೆಯನ್ನು ಮಾತ್ರ ಸಜೀವನಾಗಿದ್ದು ಕೊಂಡು ಬಿಡಲಾರೆನು. ಲೋಕದಲ್ಲಿ ಸಾಧಾರಣ ಮನುಷ್ಯರಿಗೆ ಭಾಷೆಯನ್ನು ಕೊಟ್ಟರೂ ತಪ್ಪಬಾರದು. ಹಾಗಿರುವಾಗ ಬ್ರಾಹ್ಮಣರಿಗೂ ಋಷಿಗಳಿಗೂ ಕೊಟ್ಟ ಮಾತಿಗೆ ತಪ್ಪವರೆ ನಾನು ಅವರ ಬಾಧೆಯನ್ನು ಪರಿಹರಿಸಿ ಅವರನ್ನು ರಕ್ಷಿಸಬೇಕಲ್ಲದೆ ನನ್ನ ಪ್ರತಿಜ್ಞೆಯಲ್ಲಿ ಒಂದು ಅಣುಮಾತ್ರವನ್ನಾದರೂ ಮೀರಬಾರದು. ಸೀತೆ, ನೀನು ನನ್ನ ಮೇಲಿನ ಸ್ನೇಹದಿಂದ ಹಾಗೆ ಹೇಳಿದೆಯಲ್ಲದೆ ನನಗೆ ಅಹಿತವಾಗಿ ಹೇಳಿದವಳಲ್ಲ. ಆದ್ದರಿಂದ ನೀನು ಆಡಿದ ಮಾತು ನನಗೆ ಸಂತೋಷವನ್ನುಂಟುಮಾಡಿತು. ನೀನು ನನ್ನ ಮನಸ್ಸಿಗೆ ಅನುಕೂಲವಾದ ಚಾರಿತ್ರವುಳ್ಳವಳು. ಒಳ್ಳೆಯ ಸತ್ಕುಲಪ್ರಸೂತೆ. ಧರ್ಮರಹಸ್ಯವನ್ನು ಬಲ್ಲವಳು. ನನ್ನ ಪ್ರಾಣಗಳಿಗಿಂತಲೂ ಅಧಿಕವಾದವಳು ಎಂದು ನುಡಿದು ಸಂತವಿಟ್ಟು ಬಿಲ್ಲುಬಾಣಗಳನ್ನು ಧರಿಸಿಕೊಂಡು ಸೀತಾಲಕ್ಷ್ಮಣಸಮೇತನಾಗಿ ರಮಣೀಯವಾದ ಆ ಅರಣ್ಯದಲ್ಲಿ ಸಂಚರಿಸುತ್ತಿದ್ದನು.

**ಶ್ರೀರಾಮನು ಆಗಸ್ತ್ರಮುನಿಯ ಆಶ್ರಮಕ್ಕೆ ಹೋದದ್ದು**

ಈ ರೀತಿಯಲ್ಲಿ ಸೀತಾಲಕ್ಷ್ಮಣನಮೇತನಾದ ಶ್ರೀರಾಮನು ಮುಂದುಗಡೆಯಲ್ಲಿ ನಡೆಯುತ್ತ ತನ್ನ ಹಿಂದೆ ಸೀತಾದೇವಿಯೂ ಆಕೆಯ ಹಿಂದುಗಡೆಯಲ್ಲಿ ಲಕ್ಷ್ಮಣನೂ ಬರುತ್ತಿರಲು ಮಾರ್ಗದಲ್ಲಿರುವ

**ಮುಂದುವರಿಯುವುದು...**



ಕಲಾ ಸಾಹಿತ್ಯ
ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು
● ಉದಯವಾಹಿನಿ, ವಿಶೇಷ

# ಬಹುಮುಖ ನೃತ್ಯ ಪ್ರತಿಭೆ ವಿದುಷಿ ಸೌಮ್ಯ ಶ್ರೀ ರಂಗಪ್ರವೇಶ



**ಬಹುಮುಖ ಪ್ರತಿಭೆಯ ವಿದ್ವತ್ ಪ್ರದರ್ಶನ**


ಭರತನಾಟ್ಯ ಕ್ಷೇತ್ರದಲ್ಲಿ ವಿದುಷಿ. ಅಕ್ಷರಾ ಭಾರಧ್ವಾಜ್ ಬಹುಮುಖ ಪ್ರತಿಭೆಯಾಗಿ ಅನೇಕ ಸಾಧನೆಗಳನ್ನು ಮಾಡಿದ್ದು, ಉತ್ತಮ- ಬದ್ಧತೆಯ ನೃತ್ಯಗುರುವಾಗಿ ಖ್ಯಾತರು. ಭರತನಾಟ್ಯ ನೃತ್ಯಕಲಾವಿದೆ, ನಾಟ್ಯಗುರು, ನೃತ್ಯಸಂಯೋಜಕಿ-ಸಂಶೋಧಕಿ, ಸಂಗೀತಗಾರ್ತಿ ಹಾಗೂ ರಂಗಭೂಮಿ-ಚಲನಚಿತ್ರ ರಂಗದ ಚಟುವಟಿಕೆಗಳಲ್ಲಿ ನಿರತರಾದ ಅದ್ಭುತ ಪ್ರತಿಭೆ ಅಕ್ಷರಾ ಅವರ, 'ಸ್ಟ್ರಕ್ಚರಲ್ ಸ್ಕೂಲ್ ಆಫ್ ಫೈನ್ ಆರ್ಟ್ಸ್' ನೃತ್ಯಶಾಲೆಯ ವಿದ್ಯಾರ್ಥಿನಿ ಈ ಬಹುಮುಖ ಪ್ರತಿಭೆಯ ಶ್ರೀಮತಿ. ಸೌಮ್ಯ ಶ್ರೀ ಮುರಳಿ. ಕಳೆದ ಹದಿನೈದು ವರ್ಷಗಳಿಂದ ನಿಷ್ಠೆಯಿಂದ ಭರತನಾಟ್ಯ ನೃತ್ಯ ತರಬೇತಿ ಪಡೆಯುತ್ತಿರುವ ಇವಳು, ಬಿಎಸ್ಸಿ- ಎಲ್ ಎಲ್ ಬಿ ಪದವೀಧರೆ, ಭರತನಾಟ್ಯದಲ್ಲಿ ಎಂ.ಎ. (ಎಂ.ಪಿ.ಎ) ಸ್ನಾತಕೋತ್ತರ ಪದವಿಯನ್ನು ಜೈನ್ ವಿಶ್ವವಿದ್ಯಾಲಯದಿಂದ ಪಡೆದ ಪ್ರತಿಭಾವಂತೆ. ಕರ್ನಾಟಕ ಸರ್ಕಾರದ 'ವಿದ್ವತ್' ನೃತ್ಯಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್ ಪಡೆದು ಅಖಿಲ ಭಾರತಿಯ ಗಂಧರ್ವ ಮಹಾವಿದ್ಯಾಲಯದ ಎಲ್ಲಾ ಅಲಂಕಾರ ಪ್ರಮಾಣಪತ್ರಗಳನ್ನು ಪಡೆದಿರುವ ಸೌಮ್ಯ ಶ್ರೀ ಶ್ರೀಮತಿ ಸುಧಾ ಮತ್ತು ವೆಂಕಟೇಶ್ ಅವರ ಸುಪುತ್ರಿ ಮತ್ತು ಶ್ರೀ ಮುರಳೀ ಅವರ ಪತ್ನಿ. ಕರ್ನಾಟಕ ಶಾಸ್ತ್ರೀಯ ಸಂಗೀತ- ನೃತ್ಯ, ಈಜುವಿಕೆ, ಬ್ಯಾಡ್ಮಿಂಟನ್ ಕ್ರೀಡೆಯ ಹವ್ಯಾಸವುಳ್ಳ ಇವಳು, ಅಡ್ವೋಕೇಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ನಾಡಿನಾದ್ಯಂತ ನೃತ್ಯ ಪ್ರದರ್ಶನಗಳನ್ನು ನೀಡಿದ್ದಾಳೆ. ಯೋಗ ಶಿಕ್ಷಣವನ್ನು ಪಡೆದಿರುವ ಸೌಮ್ಯ ಶ್ರೀ, ಇದೇ ತಿಂಗಳ 7 ಭಾನುವಾರದಂದು ಬೆಳಗ್ಗೆ 10 ಗಂಟೆಗೆ ಜೆ.ಸಿ ರಸ್ತೆಯ ಎ.ಡಿ .ಎ. ರಂಗಮಂದಿರದಲ್ಲಿ ಭರತನಾಟ್ಯದ ಕಲಾಪ್ರಾವೀಣ್ಯದ ನೃತ್ಯ ಪ್ರದರ್ಶನಕ್ಕಾಗಿ ವಿದ್ಯುಕ್ತವಾಗಿ ರಂಗಪ್ರವೇಶ ಮಾಡಲಿದ್ದಾಳೆ. ಈ ಮೋಹಕ ಕಲಾವಿದೆಯ ಕಲಾತ್ಮಕ ನರ್ತನವನ್ನು ವೀಕ್ಷಿಸಲು ಎಲ್ಲಾ ಕಲಾರಸಿಕರಿಗೂ ಆದರದ ಸ್ವಾಗತ. ಬೆಂಗಳೂರಿನಲ್ಲಿ ಅಡ್ವೋಕೇಟ್ ಆಗಿದ್ದ ಶ್ರೀ ವೆಂಕಟೇಶ್ ಮತ್ತು ಸುಧಾ ದಂಪತಿಗಳ ಪುತ್ರಿ ಸೌಮ್ಯ ಶ್ರೀ ತನ್ನ 4 ರ ಎಳವೆಯಲ್ಲೇ ನೃತ್ಯದ ಆಸಕ್ತಿ ತೋರಿ ಕಲಿಯಲಾರಂಭಿಸಿದಳು. ಇವಳ ಮೊದಲ ಗುರು ವಿ. ಪದ್ಮಿನಿ ಅಚ್ಚಿ. ಅವರ ಬಳಿ ಪ್ರಾರಂಭಿಕ ಹಂತದ ಶಿಕ್ಷಣ ಮುಗಿಸಿಕೊಂಡು ನಂತರ ಉನ್ನತ ಕಲಿಕೆಗೆ ಗುರು ಅಕ್ಷರಾ ಭಾರಧ್ವಾಜ್ ಬಳಿ ಕಲಿತು ಕರ್ನಾಟಕ ಸರ್ಕಾರದ ಜ್ಯೂನಿಯರ್ ಮತ್ತು ಸೀನಿಯರ್ ನೃತ್ಯಪರೀಕ್ಷೆಗಳಲ್ಲಿ, ಉತ್ತಮಾಂಕಗಳನ್ನು ಪಡೆದು ನಂತರ 'ವಿದ್ವತ್' ನೃತ್ಯಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್ ಪಡೆದ ಅಗ್ಗಳಿಕೆ ಇವಳದು. ವಿದ್ಯಾಭ್ಯಾಸದಲ್ಲೂ ಜಾಣೆಯಾಗಿರುವ ಸೌಮ್ಯ ಶ್ರೀ, ಎಂ.ಇ.ಎಸ್. ಕಾಲೇಜಿನಿಂದ ಬಿ.ಎಸ್ಸಿ. ಪದವಿ ಮತ್ತು ವಿಶ್ವೇಶ್ವರಪುರಂ ಕಾಲೇಜ್ ಆಫ್ ಲಾ ನಿಂದ ಎಲ್‌ಎಲ್.ಬಿ. ಪದವಿ ಪಡೆದಿದ್ದಾಳೆ.

ಗುರುವಿನ ಮಾರ್ಗದರ್ಶನದಲ್ಲಿ ಅವರ ಸಂಸ್ಥೆಯ ಜೊತೆಗೆ ಅನೇಕ ನೃತ್ಯ ಕಾರ್ಯಕ್ರಮಗಳನ್ನು ನೀಡಿದ್ದಾಳೆ. ಅವುಗಳಲ್ಲಿ ಮುಖ್ಯವಾದವು- ಹೊಸೂರು ನಾಟ್ಯಾಂಜಲಿ, ತಂಜಾವೂರಿನಲ್ಲಿ ವಂದೇ ಭಾರತಂ ನಿತ್ಯ ಉತ್ಸವ ಮೈಸೂರು ದಸರಾ ಉತ್ಸವ, ಇಸ್ಕಾನ್, ತರಂಗರಂಗ, ಭಾರತ ಸರ್ಕಾರದ ಸಂಸ್ಕೃತಿ ಇಲಾಖೆಯ ಕಾರ್ಯಕ್ರಮಗಳು ಮುಂತಾದ ಅನೇಕ ನೃತ್ಯೋತ್ಸವಗಳಲ್ಲಿ ಪಾಲ್ಗೊಂಡ ಹೆಮ್ಮೆ ಅವಳದು. ಆಶಾ ಯೋಗ ಸೆಂಟರ್‌ನಲ್ಲಿ ಯೋಗ ಶಿಕ್ಷಕರ ಕೋರ್ಸ್ ಮಾಡಿಕೊಂಡಿದ್ದಾಳೆ. ತನ್ನ ಲಾಯರ್ ವೃತ್ತಿಯ ಜೊತೆಗೆ ಉತ್ತಮ ನೃತ್ಯ ಕಲಾವಿದೆಯಾಗಿ ಸಾಧನೆ ಮಾಡುವ ಕನಸು ಸೌಮ್ಯ ಶ್ರೀಯದು.

# ಶುಂಠಿ ರಸವನ್ನು ಈ ರೀತಿ ಸೇವಿಸೋದ್ರಿಂದ ರೋಗನಿರೋಧಕ ಶಕ್ತಿ ಹೆಚ್ಚುತ್ತೆ ಎನ್ನುತ್ತಾರೆ

ಶುಂಠಿ ರಸದಲ್ಲಿ ಸಾಕಷ್ಟು ಆರೋಗ್ಯಕಾರಿ ಗುಣಗಳಿವೆ. ಇದನ್ನು ನಾನಾ ರೀತಿಯಲ್ಲಿ ಸೇವನೆ ಮಾಡುವುದರಿಂದ ಆರೋಗ್ಯಕ್ಕೆ ಸಾಕಷ್ಟು ಪ್ರಯೋಜನಗಳು ಸಿಗಲಿದೆ. ರೋಗ ನಿರೋಧಕ ಶಕ್ತಿಯೂ ಹೆಚ್ಚಲಿದೆ. ಶುಂಠಿಯು ಅದ್ಭುತ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಗುಣಹೊಂದಿರುವ ಒಂದು ಔಷಧೀಯ ಗಿಡಮೂಲಿಕೆಯಾಗಿದೆ. ಇದು ಶೀತ ಮತ್ತು ಜ್ವರಕ್ಕೆ ಉತ್ತಮ ಮನೆಮದ್ದಾಗಿದೆ. ಇದು ಮೇಲ್ಭಾಗದ ಶ್ವಾಸೇಂದ್ರಿಯ ಪ್ರದೇಶದ ಸೋಂಕಿನ ಲಕ್ಷಣಗಳನ್ನು ಶಾಂತಗೊಳಿಸಲು ಸಹಾಯ ಮಾಡುವುದರಿಂದ, ಇದು ಕೆಮ್ಮು, ಗಂಟಲು ನೋವು ಮತ್ತು ಬ್ರಾಂಕೈಟಿಸ್‌ನ ಮೇಲೂ ಪರಿಣಾಮ ಬೀರುತ್ತದೆ. ಈ ಅದ್ಭುತ ಆಯುರ್ವೇದಿಕ್ ಗುಣಗಳನ್ನು ಹೊಂದಿರುವ ಶುಂಠಿಯನ್ನು ಯಾವ ರೀತಿ ಬಳಸುವುದು ಉತ್ತಮ ಎನ್ನುವುದನ್ನು ತಿಳಿಯೋಣ.

**ಶುಂಠಿಯ ಪ್ರಯೋಜನಗಳು:** ಇಶಾ ಫೌಂಡೇಶನ್ ವೆಬ್‌ಸೈಟ್‌ನಲ್ಲಿರುವ ಅವರ ಬ್ಲಾಗ್ ಪೋಸ್ಟ್‌ನಲ್ಲಿ, ಶುಂಠಿಯು ಥರ್ಮೋಜೆನಿಕ್ ಗುಣಲಕ್ಷಣಗಳನ್ನು ಹೊಂದಿದೆ. ಇದು ಶೀತದಲ್ಲಿ ದೇಹವನ್ನು ಬೆಚ್ಚಗಾಗಿಸುತ್ತದೆ ಮತ್ತು ಆರೋಗ್ಯಕರ ಬೆವರುವಿಕೆಯನ್ನು ಉತ್ತೇಜಿಸುತ್ತದೆ. ದೇಹವನ್ನು ನಿರ್ವಿಷಗೊಳಿಸಲು ಮತ್ತು ಶೀತದ ಲಕ್ಷಣಗಳನ್ನು ಬಿಡುಗಡೆ ಮಾಡಲು ಸಹಾಯ ಮಾಡುವ ಈ ರೀತಿಯ ಬೆವರು ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರಗಳ ಸೋಂಕಿನ ವಿರುದ್ಧ ಹೋರಾಡುತ್ತದೆ ಎಂದು ತಿಳಿಸಿದ್ದಾರೆ




**ಕಲ್ಲಂಗಡಿ ಶುಂಠಿ ಪುದೀನ ಕೂಲರ್**

ಒಂದು ಕಲ್ಲಂಗಡಿ ಹಣ್ಣಿನ ಕಾಲು ಭಾಗವನ್ನು ಸಿಪ್ಪೆ ತೆಗೆದು, ಬೀಜ ತೆಗೆದು, ಉದ್ದನೆ ಕತ್ತರಿಸಿ. ಕಲ್ಲಂಗಡಿ ತುಂಡುಗಳನ್ನು ಬ್ಲೆಂಡರ್‌ನ ಜಾರ್‌ಗೆ ಹಾಕಿ 1 ಇಂಚಿನ ಶುಂಠಿಯನ್ನು ಸೇರಿಸಿ, 1/4 ಕಪ್ ಪುದೀನ ಎಲೆಗಳು, ಉಪ್ಪು, ಮೆಣಸಿನ ಪುಡಿ ಮತ್ತು 2 ಚಮಚ ಜೇನುತುಪ್ಪವನ್ನು ಸೇರಿಸಿ. ಎಲ್ಲವನ್ನೂ ಒಟ್ಟಿಗೆ ಮಿಕ್ಸ್ ಮಾಡಿ, ನಂತರ ಸ್ಟ್ರೈನರ್ ಮೂಲಕ ಅವುಗಳನ್ನು ಸೋಸಿ ಕುಡಿಯಿರಿ.

**ಆಯುರ್ವೇದ ಏನು ಹೇಳುತ್ತದೆ:** ಸದ್ಗುರುಗಳ ಪೋಸ್ಟ್ ಪ್ರಕಾರ, ಆಯುರ್ವೇದ ಗ್ರಂಥಗಳು ಶುಂಠಿಯನ್ನು ಲಭ್ಯವಿರುವ ಪ್ರಮುಖ ಗಿಡಮೂಲಿಕೆಗಳಲ್ಲಿ ಒಂದೆಂದು ಪರಿಗಣಿಸುತ್ತವೆ. ಆಯುರ್ವೇದ ವೈದ್ಯರು ಶುಂಠಿಯನ್ನು ಪ್ರಬಲ ಜೀರ್ಣಕಾರಿ ಸಹಾಯಕವಾಗಿ ಸೂಚಿಸುತ್ತಾರೆ ಏಕೆಂದರೆ ಇದು ಜೀರ್ಣಕಾರಿ ಬೆಂಕಿಯನ್ನು ಉತ್ತೇಜಿಸುತ್ತದೆ. ಹಸಿವನ್ನು ಹೆಚ್ಚಿಸುತ್ತದೆ ಮತ್ತು ದೇಹದ ಸೂಕ್ಷ್ಮ ರಕ್ತಪರಿಚಲನಾ ಮಾರ್ಗಗಳನ್ನು ತೆರವುಗೊಳಿಸುತ್ತದೆ.

ಇದು ದೇಹದ ಅಂಗಾಂಶಗಳಿಗೆ ಪೋಷಕಾಂಶಗಳ ಸಂಯೋಜನೆ ಮತ್ತು ಸಾಗಣೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಶುಂಠಿಯನ್ನು ಆಯುರ್ವೇದದಲ್ಲಿ ಕೀಲು ನೋವು, ವಾಕರಿಕೆಗೆ ಪರಿಹಾರವಾಗಿಯೂ ಬಳಸಲಾಗುತ್ತದೆ.



**ಶುಂಠಿ ನಿಂಬೆ ಚಹಾ:** ಸದ್ಗುರುಗಳ ಪ್ರಕಾರ, ಈ ಆರೋಗ್ಯಕರ ಚಹಾವು ಕೆಫೀನ್‌ನ ಅಡ್ಡಪರಿಣಾಮಗಳಿಲ್ಲದೆ ನಿಮಗೆ ತಾಜಾ ಮತ್ತು ಚೈತನ್ಯವನ್ನು ನೀಡುತ್ತದೆ. ಒಂದು ಲೋಹದ ಬೋಗುಣಿಗೆ 4.5 ಕಪ್ ನೀರನ್ನು ಕುದಿಸಿ. ನೀರು ಕುದಿಯುತ್ತಿದ್ದಂತೆ, 2 ಇಂಚಿನ ತಾಜಾ ಶುಂಠಿಯ ತುಂಡನ್ನು ಸುಮಾರು 25 ರಿಂದ 30 ತುಳಸಿ ಎಲೆಗಳೊಂದಿಗೆ ಪೇಸ್ಟ್ ಮಾಡಿ. ಕುದಿಯುವ ನೀರಿಗೆ ಈ ಪೇಸ್ಟ್ ಅನ್ನು ಸೇರಿಸಿ, ಜೊತೆಗೆ 2 ಚಮಚ ಒಣ ಕೊತ್ತಂಬರಿ ಬೀಜಗಳನ್ನು ಸೇರಿಸಿ. 2 ರಿಂದ 3 ನಿಮಿಷಗಳ ಕಾಲ ಕುದಿಸುವುದನ್ನು ಮುಂದುವರಿಸಿ. ಚಹಾವನ್ನು ಕಪ್‌ಗಳಲ್ಲಿ ಸೋಸಿ ಮತ್ತು ರುಚಿಗೆ 1 ಚಮಚ ನಿಂಬೆ ರಸ ಮತ್ತು ಬೆಲ್ಲವನ್ನು ಸೇರಿಸಿ. ಬಿಸಿಯಾಗಿರುವಾಗಲೇ ಕುಡಿಯಿರಿ.

**ಶುಂಠಿ ರಸ, ಜೇನುತುಪ್ಪ:** ಶುಂಠಿಯನ್ನು ಜಜ್ಜಿ ಅದರಿಂದ ರಸವನ್ನು ತೆಗೆಯಿರಿ. ರಸವನ್ನು ಗಾಜಿನ ಪಾತ್ರೆಯಲ್ಲಿ 15 ನಿಮಿಷಗಳ ಕಾಲ ಬಿಡಿ. ನಂತರ ಸ್ಪಷ್ಟ ರಸವನ್ನು 5 ರಿಂದ 6 ದಿನಗಳವರೆಗೆ ರೆಫ್ರಿಜರೇಟರ್‌ನಲ್ಲಿ ಸಂಗ್ರಹಿಸಿ. 2 ಚಮಚ ಶುಂಠಿ ರಸವನ್ನು 2 ಚಮಚ ಜೇನುತುಪ್ಪದೊಂದಿಗೆ ಬೆರೆಸಿ, ಪ್ರತಿದಿನ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಸೇವಿಸಿ.



# ಮನೆಯಲ್ಲೇ ಮಾಡಿ ಮದ್ದೂರು ಗೋಲಿ ಪಕೋಡ! ಎಷ್ಟು ಸುಲಭ ಗೊತ್ತಾ

ಮಂಡ್ಯ ಜಿಲ್ಲೆಯ ಮದ್ದೂರಿನ ಹೆಸರು ಕೇಳಿದ ತಕ್ಷಣ ನೆನಪಿಗೆ ಬರುವುದು ಅಲ್ಲಿನ ಪ್ರಸಿದ್ಧ ಮದ್ದೂರು ವಡೆ. ಆದರೆ, ಅದೇ ರುಚಿ ಪರಿಮಳವನ್ನು ಹೊಂದಿರುವ ಇದರ ಮತ್ತೊಂದು ಅವತಾರವೇ ಮದ್ದೂರು ಗೋಲಿ ಪಕೋಡ ಇದು ಮದ್ದೂರು ವಡೆಯಷ್ಟು ಜನಪ್ರಿಯವಾಗಿಲ್ಲ. ಆದರೂ, ಇದರ ರುಚಿ ಮತ್ತು ವಿಶಿಷ್ಟ ಆಕಾರದಿಂದಾಗಿ ತನ್ನದೇ ಆದ ಅಭಿಮಾನಿಗಳನ್ನು ಹೊಂದಿದೆ. ಈ ಗೋಲಿ ಪಕೋಡವು ಸಂಜೆಯ ಚಹಾದೊಂದಿಗೆ ತಿನ್ನಲು ಸೂಕ್ತವಾದ ಕುರುಕುಲು ತಿಂಡಿ.

ಇದು ಮದ್ದೂರು ವಡೆಗಿಂತ ಹೇಗೆ ಭಿನ್ನ, ಇದನ್ನು ಮನೆಯಲ್ಲಿಯೇ ಹೇಗೆ ಸುಲಭವಾಗಿ ತಯಾರಿಸಬಹುದು ಎಂಬ ಬಗ್ಗೆ ಇಲ್ಲಿದೆ ಮಾಹಿತಿ. ಮದ್ದೂರು ಗೋಲಿ ಪಕೋಡವು ಮದ್ದೂರು ವಡೆಯಂತೆ ಬಾದಾಮಿ ಆಕಾರದಲ್ಲಿ ಇರುವುದಿಲ್ಲ.

ಬದಲಾಗಿ, ಇದು ಸಣ್ಣ-ಸಣ್ಣ, ಉರುಟಾದ ಗೋಲಿಗಳ ರೂಪದಲ್ಲಿ ಇರುತ್ತದೆ. ಇದರ ಹಿಟ್ಟಿನ ಮಿಶ್ರಣವು ಮದ್ದೂರು ವಡೆಗಿಂತ ಸ್ವಲ್ಪ ವಿಭಿನ್ನವಾಗಿದ್ದು, ಇದು ಹೊರಗಿನಿಂದ ಗರಿಗರಿಯಾಗಿ ಮತ್ತು ಒಳಗಿನಿಂದ ಮೃದುವಾಗಿರುವ ವಿಶಿಷ್ಟ ವಿನ್ಯಾಸವನ್ನು ನೀಡುತ್ತದೆ. ಇದರಲ್ಲಿ ಬಳಸುವ ಮುಖ್ಯ ಪದಾರ್ಥಗಳಾದ ಅಕ್ಕಿ ಹಿಟ್ಟು, ಮೈದಾ, ರವೆ ಮತ್ತು ಮಸಾಲಾ ಪದಾರ್ಥಗಳು ಇದರ ರುಚಿಯನ್ನು ಇನ್ನಷ್ಟು ಹೆಚ್ಚಿಸುತ್ತವೆ. ಇದನ್ನು ತಯಾರಿಸಲು ಕಡಿಮೆ ಸಮಯ ಸಾಕು. ಇದು ಸಂಜೆಯ ಲಘು ಆಹಾರಕ್ಕಾಗಿ ಒಂದು ಪರಿಪೂರ್ಣ ಆಯ್ಕೆ.

**ಗೋಲಿ ಪಕೋಡ ತಯಾರಿಸಲು ಬೇಕಾಗುವ ಸಾಮಗ್ರಿಗಳು**

- ಅಕ್ಕಿ ಹಿಟ್ಟು
- ಮೈದಾ ಹಿಟ್ಟು
- ರವೆ ಅಥವಾ ಸೂಜಿ
- ಈರುಳ್ಳಿ
- ಹಸಿ ಮೆಣಸಿನಕಾಯಿ
- ಶುಂಠಿ
- ಕರಿಬೇವು
- ಕೊತ್ತಂಬರಿ ಸೊಪ್ಪು
- ಜೀರಿಗೆ
- ಇಂಗು
- ರುಚಿಗೆ ತಕ್ಕಷ್ಟು ಉಪ್ಪು
- ನೀರು
- ಎಣ್ಣೆ

**ತಯಾರಿಸುವ ವಿಧಾನ**

ಮೊದಲಿಗೆ ಹಿಟ್ಟು ತಯಾರಿಸಿ. ಒಂದು ದೊಡ್ಡ ಪಾತ್ರೆಯಲ್ಲಿ ಅಕ್ಕಿ ಹಿಟ್ಟು, ಮೈದಾ ಮತ್ತು ರವೆ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ. ನಂತರ ಹೆಚ್ಚಿದ ಈರುಳ್ಳಿ, ಹಸಿ ಮೆಣಸಿನಕಾಯಿ, ಶುಂಠಿ, ಕರಿಬೇವಿನ ಎಲೆಗಳು, ಕೊತ್ತಂಬರಿ ಸೊಪ್ಪು, ಜೀರಿಗೆ, ಇಂಗು ಮತ್ತು ಉಪ್ಪನ್ನು ಹಾಕಿ. ಎಲ್ಲಾ ಸಾಮಗ್ರಿಗಳನ್ನು ಚೆನ್ನಾಗಿ ಬೆರೆಸಿ. ಈಗ, ಸ್ವಲ್ಪ ಸ್ವಲ್ಪ ನೀರು ಸೇರಿಸುತ್ತಾ ಗಟ್ಟಿಯಾದ, ಅಂಟಿಕೊಳ್ಳದ ಹಿಟ್ಟನ್ನು ಕಲಸಿ. ಹಿಟ್ಟು ಗೋಲಿಗಳನ್ನು ಮಾಡಲು ಸುಲಭವಾಗುವಷ್ಟು ಗಟ್ಟಿಯಾಗಿರಬೇಕು. ಈಗ ಹಿಟ್ಟಿನ ಮಿಶ್ರಣದಿಂದ ಸಣ್ಣ ಸಣ್ಣ ಗೋಲಿಗಳನ್ನು ಮಾಡಿ. ಅವು ಒಂದೇ ಗಾತ್ರದಲ್ಲಿ ಇರುವಂತೆ ನೋಡಿಕೊಳ್ಳಿ. ಇದರಿಂದ ಎಲ್ಲವೂ ಸಮನಾಗಿ ಬೇಯುತ್ತವೆ. ಈ ಹಂತದಲ್ಲಿ ನೀವು ಬೇಕಿದ್ದರೆ ಗೋಲಿಗಳನ್ನು ತಟ್ಟೆಯಲ್ಲಿ ಸ್ವಲ್ಪ ಎಣ್ಣೆ ಸವರಿ ಇಡಬಹುದು. ಈಗ ಬಾಣಲೆಯಲ್ಲಿ ಎಣ್ಣೆ ಹಾಕಿ ಬಿಸಿ ಮಾಡಿ. ಎಣ್ಣೆ ಸರಿಯಾಗಿ ಕಾದ ನಂತರ, ಸಿದ್ಧಪಡಿಸಿದ ಗೋಲಿಗಳನ್ನು ನಿಧಾನವಾಗಿ ಬಿಸಿ ಎಣ್ಣೆಗೆ ಹಾಕಿ. ಅವು ಗೋಲ್ಡನ್ ಬ್ರೌನ್ ಬಣ್ಣ ಬರುವವರೆಗೆ ಚೆನ್ನಾಗಿ ಕರಿಯಿರಿ. ಒಳಗಿನಿಂದಲೂ ಚೆನ್ನಾಗಿ ಬೇಯಲು ಮಧ್ಯಮ ಉರಿ ಸಾಕು. ಗೋಲಿಗಳು ಗರಿಗರಿಯಾದ ನಂತರ, ಅವುಗಳನ್ನು ಎಣ್ಣೆಯಿಂದ ಹೊರಗೆ ತೆಗೆಯಿರಿ. ಹೆಚ್ಚುವರಿ ಎಣ್ಣೆ ತೆಗೆಯಲು ಒಂದು ಟಿಶ್ಯೂ ಪೇಪರ್ ಮೇಲೆ ಹಾಕಿ.

ಇಷ್ಟು ಮಾಡಿದರೆ ಸಾಕು, ಬಿಸಿ ಬಿಸಿಯಾಗಿರುವ ಮದ್ದೂರು ಗೋಲಿ ಪಕೋಡ ಸಿದ್ಧ. ಇವುಗಳನ್ನು ತೆಂಗಿನಕಾಯಿ ಚಟ್ನಿ ಅಥವಾ ಟೊಮ್ಯಾಟೊ ಸಾಸ್‌ನೊಂದಿಗೆ ಸವಿಯಬಹುದು.

ಇದು ಸಂಜೆಯ ಚಹಾದೊಂದಿಗೆ ಪರಿಪೂರ್ಣ ಜೋಡಿಯಾಗುತ್ತದೆ. ಇದು ಮದ್ದೂರು ವಡೆಯಂತೆಯೇ ವಿಶಿಷ್ಟ ರುಚಿ ನೀಡುತ್ತದೆ. ಆದರೆ, ಇದರ ಗೋಲಿ ಆಕಾರ ಮತ್ತು ಗರಿಗರಿಯಾದ ವಿನ್ಯಾಸದಿಂದಾಗಿ ಇದು ಎಲ್ಲರಿಗೂ ಹೊಸ ಫೀಲ್ ನೀಡುತ್ತದೆ.

ವಿಶ್ವಾಸ್.ಡಿ.ಗೌಡ
■ ಉದಯವಾಹಿನಿ, ವಿಶೇಷ

# ಜನ್ಮದಾತರನ್ನು ನಿರ್ಲಕ್ಷಿಸಿದರೆ ದೋಷ ಖಂಡಿತ



**ನೆನಪಿರಲಿ:** ಭಗವಂತನ ಕೃಪಾಶೀರ್ವಾದಗಳು ತಾಯಿ ತಂದೆಯರ ಮೂಲಕವೇ ನಮಗೆ ದೊರೆಯುತ್ತವೆ...

ಮೊದಲಿಗೇ ಸ್ಪಷ್ಟಪಡಿಸುತ್ತಿದ್ದೇನೆ. ಇದು ಯಾರನ್ನೂ ಹೆದರಿಸುವ ಬೆದರಿಸುವ ಪ್ರಯತ್ನವಲ್ಲ. ಬದಲಿಗೆ ಹಲವು ಜ್ಯೋತಿಷ್ಯಕಾರರ 45 ವರ್ಷಗಳಿಗೂ ಹೆಚ್ಚು ಕಾಲ ಕ್ರಮಬದ್ಧವಾಗಿ, ವೈಜ್ಞಾನಿಕವಾಗಿ ಒಂದು ಲಕ್ಷಕ್ಕೂ ಮೀರಿದ ಜಾತಕಗಳ ಪರಿಶೀಲನೆ, ವಿಶ್ಲೇಷಣೆ, 10000 ಕ್ಕೂ ಹೆಚ್ಚು ದೋಷ ನಿವಾರಣಾ ಹೋಮಗಳನ್ನು ಮಾಡಿಸಿದ ಜ್ಯೋತಿಷ್ಯಶಾಸ್ತ್ರದ ಅಭ್ಯಾಸ ಅನುಭವ, ಜ್ಞಾನಾಧಾರಿತ ಬರಹವಿದು.

ಕರ್ಮ ಸಿದ್ಧಾಂತ, ಪುನರ್ಜನ್ಮ ಸಿದ್ಧಾಂತಗಳ ಪ್ರತ್ಯಕ್ಷಾನುಭವದ ಹಿನ್ನೆಲೆ ಈ ಬರಹಗಳಿಗಿದೆ. ಗೊತ್ತಿದ್ದೋ ಗೊತ್ತಿಲ್ಲದೆಯೋ ಬಹಳಷ್ಟು ಜನರು ಮಾಡುತ್ತಿರುವ ತಪ್ಪು ಕರ್ಮಗಳನ್ನೂ ಮುಂದೆ ಈ ಜನ್ಮದಲ್ಲೋ ಅಥವಾ ಮುಂದಿನ ಜನ್ಮಗಳಲ್ಲೋ ತಪ್ಪದೇ ಅನುಭವಿಸಲೇಬೇಕಾಗುವ ಕರ್ಮಫಲಗಳನ್ನು ಪ್ರಜ್ಞಾಪೂರ್ವಕವಾಗಿ ನಿವಾರಿಸಿಕೊಳ್ಳಲೆಂಬ ಸದುದ್ದೇಶವಷ್ಟೇ.

**ಬದುಕಿದ್ದಾಗ ಕಾಡಿಸಿ, ಪೀಡಿಸಿ, ಹಿಂಸಿಸಿ ನೆಮ್ಮದಿ ಶಾಂತಿ ಕಿತ್ತುಕೊಂಡು, ಸತ್ತ ನಂತರ ಶಾಪ ಕೊಟ್ಟಾರೆಂಬ ಭಯದಿಂದ ತಿಥಿ , ಶ್ರಾದ್ಧ, ತರ್ಪಣ, ಎಡೆ ಇಡುವುದು, ಮಹಾಲಯ ಅಮಾವಾಸ್ಯೆ ಇತ್ಯಾದಿ ಆಚರಣೆ, ಪರಿಹಾರ, ಪ್ರಾಯಶ್ಚಿತ್ತಗಳಿಂದ ಶುಭ ಫಲಗಳು ಖಂಡಿತವಾಗಿ ಪ್ರಾಪ್ತಿಯಾಗುವುದಿಲ್ಲ.**

ಜ್ಯೋತಿಷ್ಯಶಾಸ್ತ್ರದ ಪ್ರಕಾರ ಜಾತಕದ ನಾಲ್ಕನೇ ಮನೆ ವ್ಯಕ್ತಿಯ ಸುಖ, ವಿದ್ಯೆ, ಮಾತೃಸೌಖ್ಯ, ವಾಹನ ಸೌಖ್ಯ, ನೆಮ್ಮದಿ , ಶಾಂತಿ, ಸ್ವಗೃಹವಾಸ ಇತ್ಯಾದಿಗಳ ಸೂಚಕ.

ತಾಯಿ ಅಥವಾ ತತ್ಸಮಾನ ಹಿರಿಯ ಮಹಿಳೆಯರಿಗೆ ಯಾವಾಗಲೂ , ವಿಶೇಷವಾಗಿ ವೃದ್ಧಾಪ್ಯದಲ್ಲಿ ನಿಂದೆ, ದೈಹಿಕ, ಮಾನಸಿಕ ಹಿಂಸೆ, ಅವಮಾನ, ನಿರ್ಲಕ್ಷ್ಯ, ವೈದ್ಯಕೀಯ ಚಿಕಿತ್ಸೆ ನಿರಾಕರಣೆ, ಆಸ್ತಿ, ಹಣಕಾಸಿನ ವಂಚನೆ, ವೃದ್ಧಾಶ್ರಮ ಅಥವಾ ಅನಾಥಾಶ್ರಮಗಳಿಗೆ ಸೇರಿಸುವುದು, ಬೀದಿಪಾಲು ಮಾಡುವುದು, ದುರುಪಯೋಗ, ಮೋಸ, ತಾತ್ಸಾರ ಇತ್ಯಾದಿ ಪಾಪಕರ್ಮಗಳನ್ನು ತಪ್ಪೆಂದು ತಿಳಿದೂ ಮಾಡಿದರೆ ಅದರ ಪರಿಣಾಮ ಘೋರ, ಭೀಕರ.

ಜಾತಕದಲ್ಲಿ 4 ನೇ ಮನೆ ದುರ್ಬಲವಾಗಿ ಅದರ ಸೂಚಕಗಳು ಅಥವಾ ಕಾರಕತ್ವಗಳು , ಶುಭಫಲಗಳು ವ್ಯಕ್ತಿಗೆ ಸಿಗುವುದಿಲ್ಲ ಅಥವಾ ಕಾಲಕ್ರಮೇಣ ಕಡಿಮೆಯಾಗುತ್ತವೆ. ಪಾಪಕರ್ಮ ಫಲಗಳು ಜನ್ಮ ಜನ್ಮಾಂತರಕ್ಕೂ ವ್ಯಾಪಿಸುತ್ತವೆ.

ವೃಶ್ಚಿಕ ರಾಶಿಯ ಚಂದ್ರ, ಚಂದ್ರ+ ರಾಹು, ಚಂದ್ರ+ ಶನಿ, ಚಂದ್ರ+ ಕೇತು, ಚಂದ್ರ+ಶನಿ+ ರಾಹು , ಬಾಧಕ ಸ್ಥಾನದ ಚಂದ್ರ ಇತ್ಯಾದಿ ಅನೇಕ ದುರ್ಯೋಗಗಳಿಗೆ ಮೇಲ್ಕಂಡ ಮಾತೃಸಂಬಂಧೀ ದುಷ್ಕರ್ಮಗಳೇ ನೇರ ಕಾರಣ !

ಇದೇ ರೀತಿ ಜಾತಕದ 9 ನೇ ಮನೆ ಪಿತೃ (ತಂದೆ ಅಥವಾ ತತ್ಸಮಾನ ಹಿರಿಯರು) ಭಾಗ್ಯ, ಅದೃಷ್ಟ, ಧರ್ಮ ಕಾರ್ಯ, ವಿದೇಶ ಪ್ರಯಾಣ, ತೀರ್ಥ ಯಾತ್ರೆ , ಉನ್ನತ ವ್ಯಾಸಂಗ ಇತ್ಯಾದಿಗಳ ಸೂಚಕ ಸ್ಥಾನ.

ಜನ್ಮ ಕೊಟ್ಟ ತಂದೆ ಮತ್ತು ತಂದೆ ಸಮಾನರಾದ ವ್ಯಕ್ತಿಗಳಿಗೆ ಮೇಲೆ ವಿವರಿಸಿದ ಪಾಪಕರ್ಮಗಳನ್ನು ಮಾಡಿದರೆ ಜಾತಕದ 9 ನೇ ಮನೆಯ ಕಾರಕತ್ವಗಳು ದುರ್ಬಲವಾಗಿ ನಮ್ಮ ಅದೃಷ್ಟ ಕ್ಷೀಣವಾಗಿ ಕಾಲಕ್ರಮೇಣ ನಾಶವಾಗುತ್ತದೆ ಬದುಕಿರುವಾಗ ತಾಯಿ ತಂದೆಯರ ಸೇವೆಯನ್ನು ಕೊನೇ ಕ್ಷಣದವರೆಗೂ ಎಷ್ಟೇ ಕಷ್ಟ ನಷ್ಟವಾದರೂ ಬಿಡದೇ, ಪ್ರತ್ಯಕ್ಷ ದೇವತೆಗಳೆಂದು ತಿಳಿದು ಮಾಡಬೇಕು. ಆಗ ಮಾತ್ರ ಮಾತಾಪಿತೃ ಋಣ ಸ್ವಲ್ಪವಾದರೂ ತೀರಿದಂತೆ. ಅಂಥವರಿಗೆ ಮಾತಾಪಿತರ ಆಶೀರ್ವಾದ, ಅನುಗ್ರಹ ಚೆನ್ನಾಗಿರುತ್ತದೆ.

ವಂಶಾಭಿವೃದ್ಧಿ, ಉತ್ತರೋತ್ತರ ಅಭಿವೃದ್ಧಿಯಾಗುತ್ತದೆ. ತಾಯಿ ತಂದೆ ಸಮಾನರೇ ಆದ ಅತ್ತೆ ಮಾವಂದಿರನ್ನು ರಾಹು –ಕೇತು ಗಳೆಂದು ಮೂದಲಿಸಿ ಅಪಮಾನಿಸಿ ಹಿಂಸಿಸುವ, ಕಷ್ಟ ಕೋಟಲೆ ಯಾತನೆಗಳನ್ನು ನೀಡುವ ದುಷ್ಟ ಸೊಸೆಯರಿಗೂ ಇದು ಅನ್ವಯ.

ತಾಯಿ ತಂದೆಯರು ಒಂದು ವೇಳೆ ದುಷ್ಟರು, ದುರ್ಮಾರ್ಗರು, ಬೇಜವಾಬ್ದಾರಿಗಳಾಗಿದ್ದರೂ ಸರಿ ನಮ್ಮ ಕರ್ತವ್ಯವನ್ನು ನಾವು ಮಾಡಲೇಬೇಕು. ಅವರವರ ಕರ್ಮಫಲ ಅವರವರಿಗೆ!!

ನೆನಪಿರಲಿ: ಭಗವಂತನ ಕೃಪಾಶೀರ್ವಾದಗಳು ತಾಯಿ ತಂದೆಯರ ಮೂಲಕವೇ ನಮಗೆ ದೊರೆಯುತ್ತವೆ.



# ಪ್ರಕೃತಿ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯವಾಗಲಿ

## ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನಕ್ಕೆ 2 ಕೋಟಿ ರೂ: ಅರಣ್ಯ ಪರಿಸರ ಸಚಿವ ಈಶ್ವರ ಖಂಡ್ರೆ

• ಉದಯವಾಹಿನಿ, ಮುದ್ದೇಬಿಹಾಳ

ಮುದ್ದೇಬಿಹಾಳ ತಾಲ್ಲೂಕಿನ ಬಿದರಕುಂದಿ ವ್ಯಾಪ್ತಿಯಲ್ಲಿ ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನ ಶಂಕುಸ್ಥಾಪನೆ ಸೋಮವಾರ ನೆರವೇರಿತು. 37 ಎಕರೆ ಕಂದಾಯ ಜಮೀನಿನಲ್ಲಿ ಈ ಉದ್ಯಾನವನವನ್ನು ಅರಣ್ಯ ಇಲಾಖೆ ರೂಪಿಸುತ್ತಿದ್ದು, ಒಟ್ಟು 3,750 ಸಸಿಗಳನ್ನು ನೆಡಲಾಗುತ್ತಿದೆ. ಅನೇಕ ಪ್ರಬೇದದ ಮರಗಳು ಹಾಗೂ ಔಷಧಿ ಸಸ್ಯಗಳಿಂದ ವಿದ್ಯಾರ್ಥಿಗಳಿಗೆ ತಿಳಿವಳಿಕೆಯ ಜೊತೆಗೆ ಆರೋಗ್ಯಕರ ವಾತಾವರಣ ಸೃಷ್ಟಿಯಾಗಲಿದೆ.

> ಅಪ್ಪಾಜಿ ನಾಡಗೌಡರು ಸರಳ ಸಜ್ಜನಿಕೆಯ ರಾಜಕಾರಣಿ. ಅವರ ಸಹಕಾರದಿಂದಲೇ ವೃಕ್ಷೋದ್ಯಾನಕ್ಕೆ 2 ಕೋಟಿ ರೂ ಮಂಜೂರಾಗಿದೆ, ರೆಡ್ಡಿ ಬ್ಯಾಂಕ್ ನೂತನ ಕಟ್ಟಡ ನಿರ್ಮಾಣ ಸಾಧ್ಯವಾಗಿದೆ.
> – ಹೆಚ್.ಕೆ. ಪಾಟೀಲ್

ಆರು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಅರಣ್ಯ, ಪರಿಸರ ಸಚಿವ ಈಶ್ವರ ಖಂಡ್ರೆ, ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿ ಮತಕ್ಷೇತ್ರದ ಶಾಸಕರಾದ ಅಪ್ಪಾಜಿ ನಾಡಗೌಡರು 37 ಎಕರೆ ಜಮೀನು ನೀಡಿದ ಕಾರಣ, ವೃಕ್ಷೋದ್ಯಾನ ಕಾರ್ಯ ಸಾಧ್ಯವಾಗಿದೆ. ಈ ಯೋಜನೆಗೆ ನಾನು 2 ಕೋಟಿ ರೂ. ಅನುದಾನ ನೀಡಿದ್ದೇನೆ. ಪರಿಸರ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯ ಎಂದರು. ಕಾನೂನು ಸಂಸದೀಯ ಸಚಿವ ಹೆಚ್.ಕೆ. ಪಾಟೀಲ್ ಮಾತನಾಡಿ ಅರಣ್ಯ ಸಚಿವರಾದ ಈಶ್ವರ ಖಂಡ್ರೆ ಅರಣ್ಯನಾಶಕರಲ್ಲಿ ಭಯ ಹುಟ್ಟಿಸಿದ್ದಾರೆ. ಅಕಾಲಿಕ ಮಳೆ, ಹವಾಮಾನ ಬದಲಾವಣೆಗಳಿಂದ ಬೆಳೆ ಹಾನಿ ಆಗುತ್ತಿರುವ ಈ ಸಮಯದಲ್ಲಿ ಮರಗಳನ್ನು ಬೆಳೆಸುವುದು ಅತಿ ಅವಶ್ಯಕ ಎಂದರು. ಶಾಸಕ ಅಪ್ಪಾಜಿ ನಾಡಗೌಡರು


ಉದಯವಾಹಿನಿ ಚಿತ್ರ

**ಮರಗಳನ್ನು ಬೆಳೆಸುವುದು ಅವಶ್ಯಕ**

ಮಾತನಾಡಿ ವೃಕ್ಷೋದ್ಯಾನಕ್ಕೆ 2 ಕೋಟಿ ರೂ ನೀಡಿರುವ ಸಚಿವರಿಗೆ ಕೃತಜ್ಞತೆ ಸಲ್ಲಿಸಿ. ನಾನು ವೈಯಕ್ತಿಕ ನಿಧಿಯಿಂದ 50 ಲಕ್ಷ ರೂ ಸೇತುವೆ ನಿರ್ಮಾಣಕ್ಕೆ ಮೀಸಲಿಟ್ಟಿದ್ದೇನೆ ಮತ್ತು ಇನ್ನೂ 25 ಲಕ್ಷ ರೂ. ನೀಡುವ ಭರವಸೆ ನೀಡುತ್ತಿದ್ದೇನೆ

> ಹವಾಮಾನ ಬದಲಾವಣೆಯಿಂದ ಪ್ರಕೃತಿ ವಿಕೋಪಗಳು ಹೆಚ್ಚುತ್ತಿವೆ. ಮಾಲಿನ್ಯ ಎಲ್ಲೆಡೆ ತುಂಬಿದೆ. ಜಾಗತಿಕ ತಾಪಮಾನ ಏರಿಕೆಯಾಗಿದೆ. ಅರಣ್ಯ ಕ್ಷೀಣಿಸುತ್ತಿದೆ. ಪ್ರಕೃತಿ ಸಂರಕ್ಷಣೆ ಎಲ್ಲರ ಜವಾಬ್ದಾರಿ.
> – ಈಶ್ವರ ಖಂಡ್ರೆ, ಅರಣ್ಯ ಪರಿಸರ ಸಚಿವ

ಎಂದರು. ಕಾರ್ಯಕ್ರಮದಲ್ಲಿ ಬೃಹತ್ ಹಾಗೂ ಉದ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಸಂಸದ ರಮೇಶ ಜಿಗಜಿಣಗಿ, ಮಹಾಯೋಗಿ ವೇಮನ ಸಂಸ್ಥಾನಮಠದ ಶ್ರೀ ವೇಮಾನಂದ ಮಹಾಸ್ವಾಮಿಗಳು, ಇಳಕಲ್ ಚಿತ್ತರಗಿಮಠದ ಶ್ರೀ ಗುರಮಹಾಂತ ಮಹಾಸ್ವಾಮಿಗಳು ಸೇರಿದಂತೆ ಹಲವು ಗಣ್ಯರು ಭಾಗವಹಿಸಿದರು. ಸ್ಥಳೀಯ ಜನಪ್ರತಿನಿಧಿಗಳು, ಅರಣ್ಯ ಇಲಾಖೆ ಅಧಿಕಾರಿಗಳು, ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

# ಸೊಳ್ಳೆಯಿಂದ ಡೆಂಗ್ಯೂ ಜ್ವರ, ಚಿಕನ್ ಗುನ್ಯಾ ಬರುವ ಸಾಧ್ಯತೆ

• ಉದಯವಾಹಿನಿ, ಚಿತ್ರದುರ್ಗ

ನೀರಿನಲ್ಲಿ ಹುಳಗಳು ಸೊಳ್ಳೆಯ ಮರಿಗಳು ಮನೆಯ ಒಳಗಡೆ ನೀರು ಶೇಖರಣ ತಾಣಗಳು, ಮಳೆಗಾಲದಲ್ಲಿ ಮನೆಯ ಹೊರಗಡೆ ಘನ ತ್ಯಾಜ್ಯ ವಸ್ತುಗಳಲ್ಲಿ ಮಳೆ ನೀರು ಶೇಖರಣೆಯಾಗಿ ನೀರಿನಲ್ಲಿ ಹುಳಗಳಾಗುತ್ತವೆ ನೀರಿನಲ್ಲಿನ ಹುಳಗಳು ಸೊಳ್ಳೆಯ ಮರಿಗಳು ಶುದ್ಧವಾದ ನೀರಲ್ಲಿ ಬೆಳೆದ ಸೊಳ್ಳೆ ಹಗಲು ಹೊತ್ತು ಕಚ್ಚುವುದರಿಂದ ಡೆಂಗ್ಯೂ ಜ್ವರ ಮತ್ತು ಚಿಕನ್ ಗುನ್ಯಾ ಬರುವ ಸಾಧ್ಯತೆ ಇದೆ ಎಂದು ಹೇಳಿದರು. ಚಿತ್ರದುರ್ಗ ಬುದ್ದನಗರ ಆರೋಗ್ಯ ಕೇಂದ್ರದಲ್ಲಿ ಡೆಂಗ್ಯೂ ಜ್ವರ ನಿಯಂತ್ರಣ ಮತ್ತು ಮುಂಜಾಗ್ರತಾ ಕ್ರಮಗಳ ಕುರಿತು ಚಿತ್ರದುರ್ಗ ತಾಲ್ಲೂಕಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಹಾಸ್ಟೆಲ್ ವಾರ್ಡನ್‌ಗಳಿಗೆ ಆಯೋಜಿಸಿದ ಅಡ್ವೋಕೆಸಿ ಕಾರ್ಯಗಾರದಲ್ಲಿ ಅವರು ಮಾತನಾಡಿದರು.

ಜಿಲ್ಲಾ ಕೀಟಶಾಸ್ತ್ರಜ್ಞೆ ನಂದಕಡಿ ಮಾಹಿತಿ ನೀಡುತ್ತಾ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಹಾಸ್ಟೆಲ್ ವಾರ್ಡನ್‌ಗಳ ಪಾತ್ರ ತುಂಬಾ ಮಹತ್ವದ್ದು, ಆರೋಗ್ಯ ಇಲಾಖೆ ಅಧಿಕಾರಿಗಳು ಲಾರ್ವ ಸರ್ವೆ ಕೈಗೊಂಡು ಸಾರ್ವಜನಿಕರಿಗೆ ಸೊಳ್ಳೆಯಿಂದ ಹರಡುವ ರೋಗಗಳ ಕುರಿತು ಜಾಗೃತಿ ಮೂಡಿಸುತ್ತಿದ್ದು ಕಳೆದ ವರ್ಷಕ್ಕೆ ಹೋಲಿಸಿದರೆ ಡೆಂಗ್ಯೂ ಪ್ರಕರಣಗಳು ಕಡಿಮೆಯಾಗುತ್ತಿವೆ


ಉದಯವಾಹಿನಿ ಚಿತ್ರ

ಆದರೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಸ್ವಚ್ಛತೆಗೆ ಆದ್ಯತೆ ನೀಡಿ, ನೀರು ನಿಲ್ಲದಂತೆ ನಿಗಾವಹಿಸಿ, ಕಟ್ಟಡ ನಿರ್ಮಾಣ ಪ್ರದೇಶ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಶುದ್ಧ ನೀರಿನ ಸಂಗ್ರಹಣ ತಾಣಗಳಲ್ಲಿ ಸೊಳ್ಳೆ ಉತ್ಪತ್ತಿಯಾಗದಂತೆ ಜಾಗೃತೆ ವಹಿಸುವುದು, ಮುಂಜಾಗ್ರತಾ ಕ್ರಮಗಳಾದ ಸೊಳ್ಳೆ ನಿಯಂತ್ರಣ ಕ್ರಮ ಕೈಗೊಂಡು ರೋಗ ಹರಡದಂತೆ ಜಾಗೃತ ವಹಿಸಬೇಕೆಂದು, ಜೈವಿಕ ನಿಯಂತ್ರಣ ಕ್ರಮಗಳಾದ ಲಾರ್ವಹಾರಿ ಮೀನುಗಳಾದ ಗಪ್ಪಿ ಗಂಭೂಜಿಯ ಬಗ್ಗೆ ಮಾಹಿತಿ ನೀಡಿದರು.

ತಾಲ್ಲೂಕ ಆರೋಗ್ಯ ಶಿಕ್ಷಣಾಧಿಕಾರಿ ಬಿ.ಮೂಗಪ್ಪ. ಸೊಳ್ಳೆಯ ಜೀವನಚಕ್ರ, ಸ್ವಯಂ ರಕ್ಷಣಾ ವಿಧಾನಗಳು, ಮುಂಜಾಗ್ರತಾ ಕ್ರಮಗಳ ಬಗ್ಗೆ ಜಾನಪದ ಶೈಲಿಯಲ್ಲಿ ಹಾಡಿನ ಮುಖಾಂತರ ಗಮನ ಸೆಳೆದರು. ಪೋಸ್ಟರ್ಸ್ ಪ್ರದರ್ಶನ ಕರಪತ್ರ, ಹಂಚಿಕೆ ಮಾಡಲಾಯಿತು.

ಕಾರ್ಯಗಾರದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಕೃಷ್ಣ ನಾಯಕ, ವೈದ್ಯಾಧಿಕಾರಿ ಡಾ. ಸುರೇಂದ್ರ, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಪ್ರವೀಣ್ ಕುಮಾರ್, ಪಾರ್ವತಿ, ಕೇಶವ, ಮಾನ್ಯ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಹಾಸ್ಟೆಲ್ ವಾರ್ಡನ್‌ಗಳು, ಆರೋಗ್ಯ ಸಿಬ್ಬಂದಿಗಳಾದ ಅಕ್ಷಯ್, ನಿಂಗೇಶ್, ಮತ್ತಿತರರು ಹಾಜರಿದ್ದರು.

### ಮುಂಜಾಗ್ರತಾ ಕ್ರಮ ಪಾಲಿಸಿ

**ಮಳೆಗಾಲವಾದ್ದರಿಂದ ಮನೆಯ ಹೊರಗಡೆ ಘನತ್ಯಾಜ್ಯ ವಸ್ತುಗಳಲ್ಲಿ ಶುದ್ಧ ನೀರು ಶೇಖರಣೆಯಾಗುತ್ತಿದ್ದು ಶುದ್ಧ ನೀರಿನಲ್ಲಿ ಬೆಳೆಯುವ ಸೊಳ್ಳೆಯಿಂದ ಡೆಂಗ್ಯೂ ಜ್ವರ ಮತ್ತು ಚಿಕನ್ ಗುನ್ಯಾ ಬರುವ ಸಾಧ್ಯತೆ ಇದ್ದು ಡೆಂಗ್ಯೂ ಜ್ವರಕ್ಕೆ ನಿಗದಿತವಾದ ಚಿಕಿತ್ಸೆ ಇಲ್ಲ ಮುಂಜಾಗ್ರತೆ ಬಹು ಮುಖ್ಯ. ಘನತ್ಯಾಜ್ಯ ವಿಲೇವಾರಿ ಮನೆಯಲ್ಲಿನ ನೀರಿನ ತಾಣಗಳ ಸ್ವಚ್ಛತೆ ಕಾಪಾಡಿಕೊಂಡು ಮುಂಜಾಗ್ರತಾ ಕ್ರಮಗಳನ್ನು ಪಾಲಿಸಿ ರೋಗ ಬಾರದಂತೆ ನಿಗ ವಹಿಸಬೇಕೆಂದರು.**

# ಕಲ್ಯಾಣ ಕರ್ನಾಟಕದ ಮಲತಾಯಿ ಧೋರಣೆ ಸರಿಯಲ್ಲ

• ಉದಯವಾಹಿನಿ, ಬಳ್ಳಾರಿ

ಕರ್ನಾಟಕದ ಏಕೀರಕರಣಗೊಂಡು 69 ವರ್ಷ ಆದರೂ ಕಲ್ಯಾಣ ಕರ್ನಾಟಕಕ್ಕೆ ಮಲತಾಯಿ ಧೋರಣೆ ನಿಂತಿಲ್ಲ. ಶಿಕ್ಷಣ ಕ್ಷೇತ್ರ, ನೀರಾವರಿ, ವಿದ್ಯುತ್, ಕೃಷಿ, ಸಾರಿಗೆ, ರಸ್ತೆ ಅಭಿವೃದ್ಧಿ, ಉದ್ಯೋಗ, ಆರೋಗ್ಯ ಕ್ಷೇತ್ರದ ಅಭಿವೃದ್ಧಿ ನಿರ್ಲಕ್ಷ ಧೋರಣೆ ಬಿಡಬೇಕು ಎಂದು ಕನ್ನಡ ನಾಡು ರೈತ ಸಂಘ ಸಿಎಂ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದೆ.

ಈ ಭಾಗದ ಕಾಲುವೆಗಳಿಗೆ ನೀರಿಗಿಂತ ಹಣವೆ ಹೆಚ್ಚು ಹರಿದಿದೆ. ಇಂದಿಗೂ ನಮ್ಮ ಕಾಲುವೆಗಳಿಗೆ ಸಮರ್ಪಕವಾಗಿ ನೀರು ಹರಿಯುವುದಿಲ್ಲ ಇಂದಿಗೂ ಹಲವು ಹಳ್ಳಿಗಳಲ್ಲಿ ನೀರಿನ ಬರ ಇದೆ. ನಮ್ಮ ಕಲ್ಯಾಣ ಕರ್ನಾಟಕದ ಬೀದರ್‌ನಲ್ಲಿ ಬೆಂಗಳೂರಿನ ಹವಾಗುಣ ಇದ್ದರು ಬಿದರ್‌ನಿಂದ ಹೈದ್ರಾಬಾದ್‌ಗೆ 145 ಕಿಲೋ ಮೀಟರ್ ರಾಜೀವ್ ಗಾಂಧಿ ಇಂಟರ್ ನ್ಯಾಷನಲ್ ಏರ್ಪೋರ್ಟ್ ಇದ್ದರು ಐಟಿ. ಬಿಟಿ ಕಂಪನಿಗಳನ್ನು ಸ್ಥಾಪಿಸಲು ಮುಂದಾಗಿಲ್ಲ.

ರೈತರಿಂದ ಭೂಮಿ ವಶಪಡಿಸಿಕೊಂಡಿದ್ದರು ಏರ್ಪೋರ್ಟ್ ಸ್ಥಾಪನೆ ಮಾತ್ರ ಆಗುತ್ತಿಲ್ಲ. ನಮ್ಮ ಕಲ್ಯಾಣ ಕರ್ನಾಟಕದ ಎಂ.ಎಲ್.ಎ, ಎಂ.ಎಲ್.ಸಿ, ಮಂತ್ರಿಗಳು ಪಕ್ಷಬೇದ ಮರೆತು ಈ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರದಲ್ಲಿ ಹೋರಾಟ ಮಾಡಬೇಕು ಎಂದು ಮನವಿ ಮಾಡಿದ್ದಾರೆ.


ಉದಯವಾಹಿನಿ ಚಿತ್ರ

### ಪ್ರಾಧ್ಯಾಪಕರ ಕೊರತೆ

**ಸಂಘದ ಅಧ್ಯಕ್ಷ ಮೆಣಸಿನ ಈಶ್ವರಪ್ಪ ಮತ್ತವರ ಕಾರ್ಯಕರ್ತರು. ಕಲ್ಯಾಣ ಕರ್ನಾಟಕದ ರಾಜ್ಯದಲ್ಲಿನ ಬಳ್ಳಾರಿ ಸೇರಿದಂತೆ ಏಳು ಜಿಲ್ಲೆಗಳು ಶಿಕ್ಷಣ ಕ್ಷೇತ್ರದಲ್ಲಿ ತುಂಬಾ ಹಿಂದೆ ಉಳಿದಿದೆ 63.71% ಸಾಕ್ಷಾರತ ಹೊಂದಿವೆ. ನಮ್ಮ ಶಾಲಾ ಕಾಲೇಜ್ ಗಳು, ಕಟ್ಟಡಗಳು, ಶೀತಲ ವ್ಯವಸ್ಥೆ ತಲುಪಿವೆ. ಕೆಲವು ಹಳ್ಳಿಗಳಲ್ಲಿ ಕಟ್ಟಡಗಳು ಇಲ್ಲ. ಶಾಲೆಗಳಲ್ಲಿ ಶಿಕ್ಷಕರ ಕೊರತೆ, ಕಾಲೇಜ್‌ಗಳಲ್ಲಿ ಪ್ರಾಧ್ಯಾಪಕರ ಕೊರತೆ ಇದೆ.**

# ಡೈಮಂಡ್ ಪಾರ್ಕ ನಿರ್ಮಾಣ ಕಾನೂನು ಬಾಹಿರ

• ಉದಯವಾಹಿನಿ, ಚಡಚಣ

ಇತ್ತೀಚಿಗೆ ಪಟ್ಟಣದ ಹೊರವಲಯದಲ್ಲಿ ನಿರ್ಮಾಣ ಆಗಿರುವ ಡೈಮಂಡ್ ಪಾರ್ಕ ಸಂಪೂರ್ಣ ಕಾನೂನ ಬಾಹಿರವಾಗಿ ನಿರ್ಮಿಸಲಾಗಿದೆ ಎಂದು ಸೋಮಶೇಖರ ಚನ್ನಪ್ಪ ಪಟ್ಟಣಶೆಟ್ಟಿ ಆರೋಪಿಸಿದ್ದಾರೆ. ಪಟ್ಟಣವು ಗ್ರಾ.ಪಂ.ನಿಂದ ಪ.ಪಂ.ಗೆ ಮೇಲ್ದರ್ಜೆಗೇರಿ 9 ವರ್ಷ ಗತಿಸಿವೆ. ಆದರೆ, ಗ್ರಾ.ಪಂ.ನಿಂದ ಪ.ಪಂ.ಗೆ ಮೇಲ್ದರ್ಜೆಗೇರುವ ಸಮಯದಲ್ಲಿ ಹೊರಡಿಸಿದ ರಾಜ್ಯಪತ್ರದಲ್ಲಿ ನಮೂದಿಸಿದ ಸರ್ವೇ ನಂಬರಗಳ ಪೈಕಿ ಸಧ್ಯ ನಿರ್ಮಿಸಲಾಗಿರುವ ಡೈಮಂಡ್ ಪಾರ್ಕನ ಸ.ನಂ. 244/2, 245/1, 245/2, 246/ಗಳು ಈ ಜಮೀನವು ಸಿಟಿ ಸರ್ವೇ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಆದರೂ ಈ ಸ.ನಂ.ಗಳನ್ನು ಭೂಪರಿವರ್ತನೆ ಮಾಡಿ, ಸುಮಾರು 40 ಎಕರೆ 38 ಗುಂಟೆ ಜಾಗೆಯಲ್ಲಿ ವಿವಿಧ ಅಳತೆಯ 759 ಪ್ಲಾಟುಗಳನ್ನು ಪೈಕಿ ಶೇ.40 ಪ್ಲಾಟುಗಳ ಉತಾರೆಯನ್ನು ಪ.ಪಂ.ಯಿಂದ ಪೂರೈಸಲಾಗಿದೆ ಎಂದು ಆರೋಪಿಸಿದ ಅವರು, ಈ ಪಾರ್ಕ ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿ ಪಾರ್ಕನ್ನು ನಿರ್ಮಾಣ ಮಾಡಿದ್ದರೂ ಕೂಡ ಪ.ಪಂ.ನವರು ಇದನ್ನೆಲ್ಲ ಗಮನಿಸದೆ ಹೇಗೆ ಉತಾರೆಗಳನ್ನು ಪೂರೈಸಿದ್ದಾರೆ ಎಂದು ಪ್ರಶ್ನಿಸಿದ


ಉದಯವಾಹಿನಿ ಚಿತ್ರ

**ಪ.ಪಂ.ನಿಂದ ಶೇ.40 ಉತಾರೆ ಹಂಚಿಕೆ**

ಅವರು, ಭೂಪರಿವರ್ತನೆ ಸಮಯದಲ್ಲಿ ಪಾಲಿಸಬೇಕಾದ ಕಾನೂನುಗಳೆಲ್ಲವೂ ಎಲ್ಲಿಗೆ ಹೋದವು? ಅಧಿಕಾರಿಗಳಾದರೂ ಇದನ್ನೆಲ್ಲ ಗಮನಿಸದೇ ಈ ಜಮೀನುಗಳನ್ನು ಹೇಗೆ ಭೂಪರಿವರ್ತನೆ ಮಾಡಿ, ಪ.ಪಂ. ವ್ಯಾಪ್ತಿಯಲ್ಲಿ ಸೇರಿಸಿದ್ದಾರೆ 759 ಪ್ಲಾಟುಗಳ ಪೈಕಿ ಶೇ.40 ಉತಾರೆಗಳನ್ನು ಪೂರೈಸಿದ್ದಾರೆ ಎಂಬುದನ್ನು ಅಧಿಕಾರಿಗಳೇ ಹೇಳಬೇಕು. ಡೈಮಂಡ ಪಾರ್ಕನಲ್ಲಿ ಸಾರ್ವಜನಿಕರು ತಮ್ಮ ಉಳಿತಾಯ ಹಣವನ್ನು ನೀಡಿ ಅಥವಾ ಸಾಲ, ಸೂಲ ಮಾಡಿ ಪ್ಲಾಟುಗಳನ್ನು ಖರೀದಿ ಮಾಡುತ್ತಾರೆ ಅಂತಹ ಸಾರ್ವಜನಿಕರಿಗೆ ಆಗುವ ಅನ್ಯಾಯವನ್ನು ತಪ್ಪಿಸುವ ಉದ್ದೇಶದಿಂದ ಇನ್ನಾದರೂ ಜಿಲ್ಲಾಧಿಕಾರಿಗಳು ಮಧ್ಯಸ್ತಿಕೆ ವಹಿಸಿ, ಇದನ್ನೆಲ್ಲ ಕೂಲಂಕುಶವಾಗಿ ಪರಿಶೀಲಿಸಿ ಸಾರ್ವಜನಿಕರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

# ಅಕ್ರಮಸಕ್ರಮದಲ್ಲಿ ಲಂಚಾವತಾರ ಪ್ರಮಾಣ ಮಾಡಲಿ

• ಉದಯವಾಹಿನಿ, ಪುತ್ತೂರು

ಅಕ್ರಮಸಕ್ರಮದಲ್ಲಿ ಎಕರೆಯೊಂದಕ್ಕೆ ರೂ.2.50 ಲಕ್ಷ ಪಡೆದುಕೊಂಡು ವಂಚಿಸಿದ ಮಾಜಿ ಶಾಸಕರು ಈಗ ಪುತ್ತೂರು ಶಾಸಕರ ಕಚೇರಿ ಭ್ರಷ್ಟಾಚಾರದ ಮೂಲ ಎಂದು ಹೇಳಿಕೆ ನೀಡಿದ್ದಾರೆ. ಅವರಿಗೆ ಮಾರ್ಯದೆ ಎಂಬುವುದು ಇದ್ದರೆ ಪುತ್ತೂರು ಮಹಾಲಿಂಗೇಶ್ವರ ನಡೆಯಲ್ಲಿ ನಿಂತು ಅಕ್ರಮಸಕ್ರಮದಲ್ಲಿ ಒಂದು ಪೈಸೆಯೂ ತೆಗೆದುಕೊಂಡಿಲ್ಲ ಎಂದು ಪ್ರಮಾಣ ಮಾಡಲಿ ಎಂದು ಪ್ರತಿ ಸವಾಲು ಹಾಕಿದ್ದಾರೆ.

ಮಾಧ್ಯಮದೊಂದಿಗೆ ಅವರು ಮಾತನಾಡಿ, ಸುಮಾರು 47 ಮಂದಿ ಅವರಿಗೆ ದುಡ್ಡು ಕೊಟ್ಟು ಏಮಾರಿದ ಜನರು ನನ್ನಲ್ಲಿ ಬಂದು ಹೇಳಿದ್ದಾರೆ. ಓರ್ವ ಮಹಿಳೆಯ ತನ್ನ ಹಸುಗಳನ್ನು ಮಾರಿ 70 ಸಾವಿರ ನೀಡಿದ್ದಾರೆ. ಆಕೆಗೂ ಇವರು ಅಕ್ರಮಸಕ್ರಮ ಮಾಡಿಕೊಟ್ಟಿಲ್ಲ. ಸುಮಾರು 150 ಕಡತಗಳಿಗೆ ಎಕರೆಗೆ ತಲಾ 2.50 ಲಕ್ಷ ತೆಗೆದುಕೊಂಡಿದ್ದಾರೆ. ಅವರು ಹಣ ತೆಗೆದುಕೊಂಡ 100 ಕಡತ ಬಾಕಿ ಇಟ್ಟಿದ್ದಾರೆ. ಈಗ ಅದನ್ನು ಪ್ರತ್ಯೇಕ ಸಾಫ್ಟ್‌ವೇರ್ ಮೂಲಕ ಇತ್ಯರ್ಥ ಮಾಡುವ ಕೆಲಸ ನಾನು ಮಾಡುತ್ತಿದ್ದೇನೆ ಎಂದು ಹೇಳಿದ ಅವರು ನನ್ನನ್ನು ಕೆಣಕುವುದಕ್ಕೆ ಬರುವುದು ಬೇಡ. ಬಂದರೆ ನಿಮ್ಮ ಜಾತಕ ಪೂರ್ಣವಾಗಿ ಜಾಲಾಡುತ್ತೇನೆ. ನಾನು ಒಂದು ಪೈಸೆ ಅಕ್ರಮಸಕ್ರಮದಲ್ಲಿ ಪಡೆದುಕೊಂಡಿದ್ದರೆ, ಪುತ್ತೂರು ಮಹಾಲಿಂಗೇಶ್ವರ ನನಗೆ ಶಿಕ್ಷೆ ಕೊಡುತ್ತಾನೆ ಎಂದರು. ಅಕ್ರಮಸಕ್ರಮಕ್ಕೆ ಸಂಬಂಧಿಸಿ ಜನರು ಅಧಿಕಾರಿಗಳಿಗೆ ಹಣ ಕೊಡಬಹುದು. ಅದನ್ನು ತಡೆಯಲು ಸಾಧ್ಯವಿಲ್ಲ. ನಾನು ಪದೇ ಪದೇ ಹೇಳುತ್ತಿದ್ದೇನೆ ಯಾರಿಗೂ ದುಡ್ಡು ಕೊಡಬೇಡಿ. ಆದರೂ ಜನರು ಹಣ ನೀಡುತ್ತಾರೆ. ನನಗೆ ಯಾರಾದರೂ ದುಡ್ಡು ಕೊಟ್ಟಿದ್ದರೆ ಹೇಳಲಿ. ನಾನು ಭ್ರಷ್ಟಾಚಾರಿಯಾಗುವುದಿಲ್ಲ. ಮಾಜಿ ಶಾಸಕರು ತನ್ನ ಕಚೇರಿಯಲ್ಲಿ ಅಕ್ರಮಸಕ್ರಮ ಬೈಠಕ್ ಮಾಡುತ್ತಿದ್ದರು. ನಾನು ಗ್ರಾಮ ಗ್ರಾಮಗಳಿಗೆ ಹೋಗಿ ಜನರ ಎದುರಿನಲ್ಲಿಯೇ ಮಾಡುತ್ತಿದ್ದೇನೆ. ಯಾರು ಏನೇ ಹೇಳಿದರೂ ಅಕ್ರಮಸಕ್ರಮ ನಿಲ್ಲಿಸುವುದಿಲ್ಲ. ಅದು ಬಡಜನತೆ ಕಷ್ಟಪಟ್ಟು ಕೃಷಿ ಮಾಡಿದ ಜಾಗ. ಅವರಿಗೆ ಬೇಕಾದ ವ್ಯವಸ್ಥೆ ಮಾಡಿಕೊಡಲು ಯಾವತ್ತಿಗೂ ನಾನು ಬದ್ಧ ಎಂದರು.


ಉದಯವಾಹಿನಿ ಚಿತ್ರ

> 32 ಸಾವಿರ ಕಡತಗಳನ್ನು ಪೆಂಡಿಂಗ್ ಇಟ್ಟುಕೊಂಡು ಮುಂದಿನ ಸಲ ಗೆದ್ದು ನಾನು ದುಡ್ಡು ಮಾಡುತ್ತೇನೆ ಎಂದು ಮಾಜಿ ಶಾಸಕರು ಅಂದುಕೊಂಡಿದ್ದರು. ಆದರೆ ಆಗಲಿಲ್ಲ. ಇನ್ನೊಂದು 3 ವರ್ಷ ಸುಮ್ಮನೆ ಮನೆಯಲ್ಲಿ ಕುಳಿತುಕೊಳ್ಳಲಿ. ಪೇಪರಿನಲ್ಲಿ ಫೋಟೋ ಬರುತ್ತದೆ ಎಂದು ಬಾಯಿಗೆ ಬಂದ ಹಾಗೆ ಮಾತನಾಡುವುದು ಬೇಡ. ಅವರು ಮಾಡಿದ ಕರ್ಮವನ್ನು ಈಗಲೂ ಜನರು ನನ್ನಲ್ಲಿ ಹೇಳುತ್ತಾರೆ. ಆದರೆ ನಾನು ಬಾಯಿಬಿಟ್ಟಿಲ್ಲ. ಕಂದಾಯ ಇಲಾಖೆಗೆ ಲೋಕಾಯುಕ್ತ ಬಂದಿದ್ದಾರೆ ಲೋಕಾಯುಕ್ತ ಇರುವುದೇ ಅದಕ್ಕೆ ಭ್ರಷ್ಟಾಚಾರಿಗಳನ್ನು ಹಿಡಿಯುವುದೇ ಅವರ ಕೆಲಸ. ಇನ್ನು ಮುಂದೆಯೂ ಅದನ್ನು ಮಾಡುತ್ತಾರೆ ಎಂದು ಅವರು ಹೇಳಿದರು.

# ಮಕ್ಕಳ ಆತ್ಮಸ್ಥೈರ್ಯ ವೃದ್ಧಿಗೆ ಕ್ರಮವಹಿಸಿ: ಡಿಸಿ

• ಉದಯವಾಹಿನಿ, ಗದಗ

ಜಿಲ್ಲೆಯ ಸರ್ಕಾರಿ, ಖಾಸಗಿ ಶಿಕ್ಷಣ ಸಂಸ್ಥೆಗಳು, ತರಬೇತಿ ಕೇಂದ್ರಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮಾನಸಿಕ, ದೈಹಿಕ ಯೋಗಕ್ಷೇಮ, ಮಕ್ಕಳ ಸುರಕ್ಷತೆ ಖಚಿತಪಡಿಸುವುದು, ವಿದ್ಯಾರ್ಥಿಗಳ ಆರೋಗ್ಯ ವೃದ್ಧಿಗಾಗಿ ನಿರಂತರ ಸಮೀಕ್ಷೆ ನಡೆಸಬೇಕು ಎಂದು ಡಿಸಿ ಸಿ.ಎನ್.ಶ್ರೀಧರ್ ಸೂಚಿಸಿದರು.

ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳ ತಡೆಗಟ್ಟುವಿಕೆ, ಮಾನಸಿಕ ಆರೋಗ್ಯ ಕಾಳಜಿ ಕ್ರಮ ಜಾರಿಗೆ ತರಲು ರಚಿಸಿರುವ ಜಿಲ್ಲಾಮಟ್ಟದ ಮೇಲ್ವಿಚಾರಣಾ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿದ್ಯಾರ್ಥಿಗಳು ಕೆಲವೊಂದು ಸಂದಿಗ್ಧ ಸಂದರ್ಭಗಳಲ್ಲಿ ಪರಿಸ್ಥಿತಿ ಎದುರಿಸಲಾಗದೇ ಖಿನ್ನತೆಗೊಳಗಾಗಿ ಆತ್ಮಹತ್ಯೆ ಮಾಡಿಕೊಂಡು ತಮ್ಮ ಅಮೂಲ್ಯ ಬದುಕನ್ನು ಕಳೆದುಕೊಳ್ಳುತ್ತಿದ್ದಾರೆ.


ಉದಯವಾಹಿನಿ ಚಿತ್ರ

ಅವರಲ್ಲಿ ಆತ್ಮಸ್ಥೈರ್ಯ ತುಂಬಲು ಶಿಕ್ಷಣ ಸಂಸ್ಥೆಗಳಲ್ಲಿ ಸಿಬ್ಬಂದಿಗೆ ಮಾನಸಿಕ ಆರೋಗ್ಯದ ಕುರಿತು ತರಬೇತಿ ಏರ್ಪಡಿಸಬೇಕು. ವಿದ್ಯಾರ್ಥಿಗಳ ಪಾಲಕರು ಸಹಿತ ತಮ್ಮ ಮಕ್ಕಳೊಂದಿಗೆ ಸಮಯ ಕಳೆಯುವುದು ಇಂದಿನ ಅವಶ್ಯಕತೆಯಾಗಿದೆ ಎಂದು ಹೇಳಿದರು.

ಎಲ್ಲಾ ಶಿಕ್ಷಣ ಸಂಸ್ಥೆಗಳು ವಿಶೇಷವಾಗಿ ತರಬೇತಿ ಸಂಸ್ಥೆಗಳು, ಮಾನಸಿಕ ಆರೋಗ್ಯ ಸೇವೆಗಳು, ಸ್ಥಳೀಯ ಆಸ್ಪತ್ರೆಗಳು ಹಾಗೂ ಆತ್ಮಹತ್ಯೆ ತಡೆಗಟ್ಟುವಿಕೆ ಸಹಾಯವಾಣಿಗಳ ತ್ವರಿತ ಸೇವೆ ಪಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ಟೆಲಿಮಾನಸ್ ಮತ್ತು ಇತರೆ ರಾಷ್ಟ್ರೀಯ ಸಹಾಯವಾಣಿ ಸಂಖ್ಯೆಗಳ ಮಾಹಿತಿಯನ್ನು ಹಾಸ್ಟೆಲ್‌ಗಳು, ತರಗತಿ ಕೊಠಡಿಗಳು, ಸಾಮಾನ್ಯ ಸ್ಥಳಗಳು ಮತ್ತು ವೆಬ್‌ಸೈಟ್‌ಗಳಲ್ಲಿ ಸ್ಪಷ್ಟವಾಗಿ ಪ್ರದರ್ಶಿಸಬೇಕು ಎಂದು ಸೂಚಿಸಿದರು.

> ಶಾಲೆಗಳಲ್ಲಿ ಮಕ್ಕಳ ಸಲಹಾ ಪೆಟ್ಟಿಗೆ ಮಾಡಬೇಕು. ಮಕ್ಕಳ ಸುರಕ್ಷತಾ ಸಮಿತಿ ರಚನೆ ಮಾಡಬೇಕು
> –ಆರ್.ಎಸ್.ಬುರುಡಿ ಉಪನಿರ್ದೇಶಕ ಶಾಲಾ ಶಿಕ್ಷಣ, ಸಾಕ್ಷರತಾ ಇಲಾಖೆ

# ದಲಿತರಿಗೆ ಮುಖ್ಯಮಂತ್ರಿ ಸ್ಥಾನ ನೀಡಿ

• ಉದಯವಾಹಿನಿ, ಬಳ್ಳಾರಿ

ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾಗಿ ಶೇ 1 ರಷ್ಟು ಮೀಸಲಾತಿ ನಿಗದಿಗೊಳಿಸಬೇಕು ಎಂದು ಛಲವಾದಿ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಎಚ್.ಕೆ.ಬಸವರಾಜ್ ಆಗ್ರಹಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಮೀಸಲಾತಿ ಘೋಷಣೆ ಮಾಡಿದ್ದು, ರಾಷ್ಟ್ರೀಯ ಜನಗಣತಿ ಹಾಗೂ ಕಾಲಕಾಲಕ್ಕೆ ಮೀಸಲಾತಿ ಆಯೋಗವು ಮಾಡಬಹುದಾದ ಶಿಫಾರಸ್ಸಿನ, ಜನಸಂಖ್ಯೆ ಆಧಾರಿತ ತಿದ್ದುಪಡಿಗೆ ಒಳಪಟ್ಟು ಒಳ ಮೀಸಲಾತಿ ನಿಗದಿ ಪಡಿಸಿದ್ದನ್ನು ಸ್ವಾಗತಿಸುತ್ತೇವೆ ಎಂದರು. ದಲಿತರು ಹಾಗೂ ವಿಶೇಷವಾಗಿ ಬಲಗೈನ ಛಲವಾದಿ ಸಮುದಾಯಗಳು ಕಾಂಗ್ರೆಸ್ ಪಕ್ಷದ ಸಾಂಪ್ರದಾಯಿಕ ಮತಗಳಾಗಿದ್ದು ಪ್ರಾರಂಭದಿಂದಲೂ ಈವರೆಗೆ ನಿರಂತರವಾಗಿ ಕಾಂಗ್ರೆಸ್ ಪಕ್ಷಕ್ಕೆ ಬಹುದೊಡ್ಡ ಆಸ್ತಿಯಾಗಿ ಕೊಡುಗೆ ನೀಡಿದೆ ಎಂದು ಹೇಳಿದರು. ಸೆಪ್ಟೆಂಬರ್, ಅಕ್ಟೋಬರ್ ತಿಂಗಳಲ್ಲಿ ರಾಜ್ಯದಾದ್ಯಂತ ಪ್ರವಾಸ ಮಾಡಿ


ಉದಯವಾಹಿನಿ ಚಿತ್ರ

ದಲಿತ ಸಮುದಾಯಗಳನ್ನು ಜಾಗೃತಿಗೊಳಿಸಲಾಗುವುದು ಮತ್ತು ನವೆಂಬರ್, ಡಿಸೆಂಬರ್ ತಿಂಗಳಲ್ಲಿ ದಾವಣಗೆರೆ ಅಥವಾ ಚಿತ್ರದುರ್ಗದಲ್ಲಿ ಐದು ಲಕ್ಷಕ್ಕಿಂತ ಹೆಚ್ಚು ದಲಿತ ಸಮುದಾಯವನ್ನು ಸೇರಿಸಿ ಬೃಹತ್ ಸಮಾವೇಶ ನಡೆಸಿ, ದಲಿತ ನಾಯರಿಗೆ ಮುಖ್ಯಮಂತ್ರಿ ಸ್ಥಾನವನ್ನು ಕೊಡುವಂತೆ ಹೈಕಮಾಂಡ್‌ಗೆ ಆಗ್ರಹಿಸಲಾಗುವುದು ಎಂದರು.

ಒಂದು ವೇಳೆ ದಲಿತರಿಗೆ ಸಿಎಂ ಸ್ಥಾನ ಕೊಡದಿದ್ದಲ್ಲಿ, ದಲಿತ ಸಮುದಾಯವೂ ಕಾಂಗ್ರೆಸ್ ಪಕ್ಷಕ್ಕೆ ಸರಿಯಾದ ಬುದ್ಧಿ ಕಲಿಸಬೇಕಾಗುವುದು ಎಂದು ಎಚ್ಚರಿಕೆಯನ್ನು ನೀಡಿದರು.

## ಗೃಹಲಕ್ಷ್ಮಿ ಯೋಜನೆಯು 53203 ಶೇಕಡಾ 92ಪ್ರತಿಶತಃ ಜನರ ಸದುಪಯೋಗ: ಅಧ್ಯಕ್ಷ ಮಾಲಿ

# ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನಲ್ಲಿ ರಾಜ್ಯ ಸರ್ಕಾರ ಘೋಷಣೆ ಮಾಡಿರುವ ಐದು ಗ್ಯಾರಂಟಿಗಳಲ್ಲಿ ಗೃಹಲಕ್ಷ್ಮಿ ಯೋಜನೆಯು 53203 ಪಡಿತರ ಚೀಟಿಗಳ ಜನರು ಶೇಕಡಾ 92ಪ್ರತಿಶತಃ ಜನರು ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ ಎಂದು ತಾಲ್ಲೂಕಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಬಸವರಾಜ ಮಾಲಿ ತಿಳಿಸಿದ್ದಾರೆ. ಪಟ್ಟಣದ ತಾಲ್ಲೂಕಾ ಪಂಚಾಯತ್ ಸಭಾಂಗಣದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗೃಹಲಕ್ಷ್ಮಿ ಯೋಜನೆಯಡಿಯಲ್ಲಿ ನೋಂದಣಿ ಮಾಡಿಕೊಂಡಿರುವ ಒಬಿಸಿ 14175, ಇತರೆ 9132, ಅಲ್ಪಸಂಖ್ಯಾತರು 6500, ಎಸ್‌ಸಿ 18134, ಎಸ್‌ಟಿ 772 ಪಡಿತರ ಚೀಟಿಗಳಯ ಫಲಾನುಭವಿಗಳು ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ,70 ಪಡಿತರ ಚೀಟಿಗಳನ್ನು ತಾಂತ್ರಿಕ ಸಮಸ್ಯೆ ಹಾಗೂ 60ಜನರ ಐಟಿ ಜಿಎಸ್‌ಟಿ ಕಾರಣ ಸದುಪಯೋಗ ಪಡೆದುಕೊಳ್ಳುತ್ತಿಲ್ಲಾ ಸಮಸ್ಯೆ ಶೀಘ್ರದಲ್ಲೇ ಪರಿಹಾರ ಮಾಡಲಾಗುವುದು.

ಪ್ರತಿಯೊಬ್ಬರಿಗೆ ರಾಜ್ಯ ಕಾಂಗ್ರೆಸ್ ಸರ್ಕಾರವು 10ಕೆಜಿ ಅಕ್ಕಿ ಎರಡನೇ ಗ್ಯಾರಂಟಿ ನೀಡುತ್ತೀದ್ದೇವೆ ಎಂದು ಗ್ಯಾರಂಟಿ


ಉದಯವಾಹಿನಿ ಚಿತ್ರ

**ಅಗತ್ಯ ವಸ್ತುಗಳ ಕಾಯ್ದೆ**

ಅನುಷ್ಠಾನ ಸಮಿತಿ ಸದಸ್ಯ ಲಕ್ಷ್ಮಣ ಆವುಂಟಿ ತಿಳಿಸಿದ್ದಾರೆ. ಮೂರನೇ ಗೃಹಜ್ಯೋತಿ ಗ್ಯಾರಂಟಿ ಯೋಜನೆಯಡಿಯಲ್ಲಿ ಉಚಿತ ವಿದ್ಯುತ್ 34,10, 9,335 ಯುನೀಟ್ ಬಳಕೆ ರಾಜ್ಯ ಸರ್ಕಾರ ಜೇಸ್ಕಾಂ ಇಲಾಖೆಗೆ ಪಾವತಿ ಮಾಡಿದ್ದು 313,17,5,984 ರೂ.ಹಣ ಪಾವತಿ ಮಾಡಲಾಗಿದೆ ಎಂದು ಜೇಸ್ಕಾಂ ಇಲಾಖೆ ಎಇಇ ಕಾಮಣ್ಣ ವರದಿ ಓದಿದರು.

ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಸದುಪಯೋಗ ಪಡೆದುಕೊಳ್ಳಲಾಗದೆ ಇರುವ ಜನರು ತಾಲ್ಲೂಕಾ ಪಂಚಾಯತ್ ವ್ಯವಸ್ಥಾಪಕರಿಗೆ ಭೇಟಿಯಾಗಿ ಚರ್ಚೆ ಮಾಡಿ ಅಥವಾ ಆಯಾ ಇಲಾಖೆ ಅಧಿಕಾರಿಗಳಿಗೆ ಭೇಟಿಯಾಗಿ ಸಮಸ್ಯೆ ಪರಿಹರಿಸಿಕೊಳ್ಳಿ ಅಥವಾ ತಾಲ್ಲೂಕಾ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರ ಗಮನಕ್ಕೆ ತನ್ನಿ ಸಮಸ್ಯೆ ಪರಿಹರಿಸಿಕೊಳ್ಳಬಹುದು ಎಂದು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಬಸವರಾಜ ಮಾಲಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ತಾಪಂ.ಇಓ ಸಂತೋಷ ಚವ್ಹಾಣ, ಸಿಡಿಪಿಓ ಸವಿತಾ ಮಡಿವಾಳ, ಜೇಸ್ಕಾಂ ಎಇಇ ಕಾಮಣ್ಣ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರು ಲಕ್ಷ್ಮಣ ಆವುಂಟಿ, ಶಾಂತಕುಮಾರ, ಗೋವಿಂದಪ್ಪ, ಶಿವಶಂಕರರೆಡ್ಡಿ, ಅರವೀಂದರೆಡ್ಡಿ, ಮಲ್ಲಿಕಾರ್ಜುನ, ವಿಜಯಕುಮಾರ, ರವೀಂದ್ರ, ಜನಾರ್ಧನ ಪಾಟೀಲ, ಗಂಗಾಧರ, ಈರಮ್ಮ ಸಂಗಯ್ಯಸ್ವಾಮಿ ಅನೇಕರಿದ್ದರು.

> ತಾಲ್ಲೂಕಿನಲ್ಲಿ ಒಟ್ಟಾರೆ 77 ನ್ಯಾಯಬೆಲೆ ಅಂಗಡಿ ಇದ್ದು ಅಂತ್ಯೋದಯ 6750 ಪಡಿತರ ಚೀಟಿ,46490 ಬಿಪಿಎಲ್ ಪಡಿತರ ಚೀಟಿಗಳು,4269 ಎಪಿಎಲ್ ಪಡಿತರ ಚೀಟಿಗಳಿವೆ, ಅಗತ್ಯ ವಸ್ತುಗಳ ಕಾಯ್ದೆಯಡಿ ಒಟ್ಟು 09 ಪ್ರಕರಣಗಳು ದಾಖಲಿಸಿ 630.20ಕ್ವಿಂಟಲ್ ಅಕ್ಕಿಯನ್ನು ಜಪ್ತಿ ಮಾಡಲಾಗಿದೆ ಎಂದು ಆಹಾರ ಇಲಾಖೆ ಶೀರಾಸ್ತೇದಾರ ತಿಳಿಸಿದ್ದಾರೆ

### ಸಾರ್ವಜನಿಕರಿಗೆ ಆರ್ಥಿಕ ನೆರವು

**ನಾಲ್ಕನೇ ಗ್ಯಾರಂಟಿ ಮಹಿಳೆಯರು ಬಸ್ ಉಚಿತ ಪ್ರಯಾಣ ಲಕ್ಷಿ ಯೋಜನೆ ಯಡಿಯಲ್ಲಿ ಎಪ್ರಿಲ್ ಯಿಂದ ಜುಲೈವರೆಗೆ 1532094 ಜನ ಮಹಿಳಾ ಪ್ರಯಾಣಿಕರು ಪ್ರಯಾಣ ಮಾಡಿ ಸರ್ಕಾರದ ಸೌಲಭ್ಯ ಪಡೆದುಕೊಂಡಿದ್ದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 57,38,5001ರೂ.ಹಣ ಆದಾಯವಾಗಿದ್ದು ರಾಜ್ಯ ಸರ್ಕಾರವು ನಿಗಮಕ್ಕೆ ಹಣ ಪಾವತಿ ಮಾಡಿದೆ ಎಂದು ಇಲಾಖಾ ಅಧಿಕಾರಿ ವರದಿ ಮಾಡಿದರು. ಐದನೇ ಗ್ಯಾರಂಟಿ ಡಿಸೆಂಬರ್‌ಯಿಂದ ಜೂನ್ ವರೆಗೆ ಜಿಲ್ಲೆಯಲ್ಲಿ 2,43,250 ಜನರು ಯುವನಿಧಿ ಯೋಜನೆಗೆ ನೊಂದಣಿ ಮಾಡಿದ್ದು ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ ಎಂದು ಇಲಾಖೆಯ ಅಧಿಕಾರಿ ವರದಿ ಓದಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ಘೋಷಣೆ ಮಾಡಿರುವ ಐದು ಗ್ಯಾರಂಟಿಗಳಿಂದ ಸಾರ್ವಜನಿಕರಿಗೆ ಆರ್ಥಿಕ ನೆರವು ಸಿಗುತ್ತಿದೆ ಬಡ ಜನರು ಸಬಲರಾಗಿ ಬದುಕು ಕಟ್ಟಿಕೊಳ್ಳುತ್ತಿದ್ದಾರೆ.**

## ಮಿನಿ ನ್ಯೂಸ್

### ಲೋಕ ಕಲ್ಯಾಣಕ್ಕಾಗಿ ಮುನೀಂದ್ರ ಶ್ರೀಗಳಿಂದ ಪಾದಯಾತ್ರೆ

• ಉದಯವಾಹಿನಿ, ವಾಡಿ

ಲೋಕದ ಹಿತಕ್ಕಾಗಿ ಸುಕ್ಷೇತ್ರ ಹಲಕರ್ಟಿಯಿಂದ ಕಾಳಗಿ ತಾಲ್ಲೂಕಿನ ಕೋರವಾರ ಶ್ರೀಅಣಿವೀರಭದ್ರೇಶ್ವರ ದೇವಸ್ಥಾನದ ವರೆಗೆ ಪಾದಯಾತ್ರೆ ಕೈಗೊಳ್ಳಲಾಗಿದೆ ಎಂದು ಹಲಕರ್ಟಿಯ ಕಟ್ಟಿಮನಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಶ್ರೀಮುನೀಂದ್ರ ಶಿವಾಚಾರ್ಯ ತಿಳಿಸಿದರು.

ಶ್ರೀಮಠದಿಂದ ಪ್ರತಿವರ್ಷವು ಶ್ರಾವಣ ಮಾಸದ ಕೊನೆಯಲ್ಲಿ ಲೋಕಕಲ್ಯಾಣಕ್ಕಾಗಿ ನಾಡಿನ ಸರ್ವಜನರು ಸುಖ ಶಾಂತಿ, ಸಮೃದ್ಧಿ, ಸೌಹಾರ್ದತೆಯಿಂದ ಬದುಕುವಂತಾಗಬೇಕು ಎಂದು ಭಗವಂತಲ್ಲಿ ಪ್ರಾರ್ಥನೆ ಮಾಡಲಾಗುತ್ತದೆ ಅದರ ಅಂಗವಾಗಿ ಕೋರವಾರದ ಶ್ರೀಅಣಿ ವೀರಭದ್ರೇಶ್ವರ ದೇವಸ್ಥನಕ್ಕೆ ತೆರಳಿ ವಿಶೇಷ ಪೂಜೆ ಮಾಡಲಾಗುವುದು ಎಂದು ತಿಳಿಸಿದರು.

ಶ್ರೀ ಮಠದಲ್ಲಿ ಕೃತ್ತು ಗದ್ದುಗೆಗೆ ವಿಶೇಷ ಪೂಜೆ ನೇರವೇರಿಸಲಾಯಿತು ನಂತರ ಡೊಳ್ಳು,ಹಲಗಿ ವಿವಿಧ ವಾದ್ಯಗಳ ನಡುವೆ ಹಲಕರಟಿ ಮುಖ್ಯ ದ್ವಾರದ ವರೆಗೂ ಬಂದು ಬಿಳ್ಕೊಟ್ಟರು. ಪಟ್ಟಣದ ಬಲರಾಂ ಚೌಕ್ ತಲುಪಿದ ಪಾದಯಾತ್ರೆಯನ್ನು ಬರಮಾಡಿಕೊಂಡ ಪಟ್ಟಣದ ಪ್ರಮುಖರು ಶ್ರೀಗಳನ್ನು ಸ್ವಾಗತಿಸಿ ಸತ್ಕರಿಸಿದರು.

### ಸಾಮಾಜಿಕ ಸಾಮರಸ್ಯಕ್ಕೆ ಧಾರ್ಮಿಕ ನಂಬಿಕೆ ಅಗತ್ಯ

• ಉದಯವಾಹಿನಿ, ಕಮಲಾಪುರ

ಗ್ರಾಮದಲ್ಲಿ ಪರಸ್ಪರ ಸೌಹಾರ್ದತೆ ಜೊತೆಗೆ ಸಾಮಾಜಿಕ ಸಾಮರಸ್ಯ ಮೂಡಲು ಜನರಲ್ಲಿ ಧಾರ್ಮಿಕ ನಂಬಿಕೆ ಅಗತ್ಯ ಎಂದು ಅವರಾದ (ಬಿ) ಚರಂತಿ ಮಠದ ಮರುಳಸಿದ್ದ ಶಿವಾಚಾರ್ಯ ತಿಳಿಸಿದರು. ತಾಲ್ಲೂಕಿನ ಯಳವಂತಗಿ (ಬಿ) ಗ್ರಾಮದಲ್ಲಿ ಆಯೋಜಿಸಿದ್ದ ವೀರ ಹನುಮಾನ ದೇವಸ್ಥಾನದ ಶ್ರಾವಣ ಮಾಸದ ಒಂದು ತಿಂಗಳ ಭಜನಾ ಮುಕ್ತಾಯ ಕಾರ್ಯಕ್ರಮ ಹಾಗೂ ಧಾರ್ಮಿಕ ಸಭೆಯಲ್ಲಿ ಅವರು ಮಾತನಾಡಿದರು. ಶ್ರಾವಣ ಹಿಂದುಗಳಿಗೆ ಪವಿತ್ರ ಮಾಸ. ತಿಂಗಳ ಪರ್ಯಂತ ಭಜನೆ, ಕೀರ್ತನೆ ಮಾಡುತ್ತ ದೇವರ ನಾಮ ಸ್ಮರಣೆಯಲ್ಲೆ ಕಳೆಯುತ್ತೆವೆ. ಗ್ರಾಮಸ್ಥರೆಲ್ಲ ಸೇರಿ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ಐಕ್ಯತೆ ಬೆಳೆಯುತ್ತದೆ. ಧರ್ಮ, ದೈವದ ನಂಬಿಕೆ ವ್ಯಕ್ತಿಯನ್ನು ಸರಿದಾರಿಗೆ ನಡೆಸುತ್ತದೆ ಎಂದರು. ನರೋಣ ಭಜನಾ ಮಂಡಳಿ ಹಾಗೂ ಬಂಗಾರಗಿ ಭಜನಾ ಮಂಡಳಿಯವರಿಂದ ಭಜನೆ, ಸಂಗೀತ ಕಾರ್ಯಕ್ರಮ ನಡೆಯಿತು.

### ಈದ್ ಮಿಲಾದ್ ಗಾಲಿ ಸೆ.4ಕ್ಕೆ: ಎಲ್.ಎಲ್. ಉಸ್ತಾದ್

• ಉದಯವಾಹಿನಿ, ವಿಜಯಪುರ

ಅಂಜುಮನ್ ಇಸ್ಲಾಂ ಬಿಜಾಪುರ ಮತ್ತು ಮೈನಾರಿಟಿ ಮುಸ್ಲಿಂ ಡೆವಲಪ್‌ಮೆಂಟ್ ಕಮಿಟಿ ಸಹಯೋಗದಲ್ಲಿ ಈದ್ ಮಿಲಾದ್ ಅಂಗವಾಗಿ ಸೆ.4ರಂದು ಸಂಜೆ 4ಕ್ಕೆ ನಗರದಲ್ಲಿ ಬೃಹತ್ ರ‍್ಯಾಲಿ ಆಯೋಜಿಸಲಾಗಿದೆ ಎಂದು ಎಂಎಂಡಿಸಿ ಪ್ರಮುಖರಾದ ಎಲ್.ಎಲ್. ಉಸ್ತಾದ್ ತಿಳಿಸಿದರು. ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಮ್ಮದ್ ಪೈಗಂಬರ್ ಜನ್ಮ ದಿನ ಪ್ರಯುಕ್ತ ಆಯೋಜಿಸಲಾಗಿರುವ ಮೆರವಣಿಗೆಯು ನಗರದ ಹಕೀಂ ಚೌಕದಿಂದ ಆರಂಭಗೊಂಡು ಜುಮ್ಮಾ ಮಸೀದಿ, ಬಡಿಕಮಾನ್, ಅತಾವುಲ್ಲಾ ಸರ್ಕಲ್, ಬಾಗಲಕೋಟೆ ಸರ್ಕಲ್, ಬಸವೇಶ್ವರ ಸರ್ಕಲ್, ಅಂಬೇಡ್ಕರ್ ಸರ್ಕಲ್, ಕನಕದಾಸ ಸರ್ಕಲ್ ಮೂಲಕ ಸಾಗಿ ಆಸರ್ ಮಹಲ್‌ಗೆ ತೆರಳಲಿದೆ ಎಂದರು.

ಮೆರವಣಿಗೆಯಲ್ಲಿ ಭಾಗವಹಿಸುವವರು ಶುಭ್ರ ಬಿಳಿ ವಸ್ತ್ರ ಉಟ್ಟು ಬರಬೇಕು, ಕುಡಿದು ಬರುವಂತಿಲ್ಲ, ಸ್ವಚ್ಛ ಮನಸ್ಸಿನಿಂದ ಬರಬೇಕು, ಶಾಂತಿಯುತವಾಗಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು. ನಾಥ್ ಹಾಗೂ ದರೂದ್ ಪಠಣದೊಂದಿಗೆ ಮೆರವಣಿಗೆ ನಡೆಯಲಿದೆ. ಯಾವುದೇ ಡಿಜೆ,ವಾದ್ಯ ಮೇಳಗಳಿಗೆ ಮೆರವಣಿಗೆಯಲ್ಲಿ ಅವಕಾಶವಿಲ್ಲ. ಮೆರವಣಿಗೆ ಬಳಿಕ ಆಸರ್ ಮಹಲ್‌ನಲ್ಲಿ ಇರುವ ಪೈಗಂಬರ್ ಅವರ ಕೇಶ ದರ್ಶನ ಕಾರ್ಯಕ್ರಮ ಇರಲಿದೆ ಎಂದರು.

ಈ ಮೆರವಣಿಗೆಯು ಯಾವುದೇ ರಾಜಕೀಯ ಪಕ್ಷದ ಅಥವಾ ವ್ಯಕ್ತಿಯ ಪರವೂ ಅಲ್ಲ, ವಿರೋಧವೂ ಅಲ್ಲ. ಇದು ಕೇವಲ ಪ್ರವಾದಿ ಮಹಮ್ಮದ್ ಅವರ ಮೇಲಿನ ಪ್ರೀತಿ, ಗೌರವದಿಂದ ಆಯೋಜಿಸಲಾಗಿದೆ ಎಂದರು.

### ಹಲ್ಲೆ ಆರೋಪ; 23 ಜನರ ವಿರುದ್ಧ ದೂರು

• ಉದಯವಾಹಿನಿ, ಕಾರಟಗಿ

ತಾಲ್ಲೂಕಿನ ಮೈಲಾಪುರದಲ್ಲಿ ಹಳೆಯ ವೈಷಮ್ಯದ ಹಿನ್ನೆಲೆಯಲ್ಲಿ ಗುಂಪು ಕಟ್ಟಿಕೊಂಡು ಜಾತಿ ನಿಂದನೆ ಮಾಡಿ, ಹಲ್ಲೆ ನಡೆಸಿ, ಕೊಲೆಗೆ ಯತ್ನ ಮಾಡಿದ ಆರೋಪದ ಮೇಲೆ 23 ಜನರ ವಿರುದ್ಧ ಪ್ರಕರಣ ದಾಖಲಾಗಿದೆ. ಮೈಲಾಪುರ ಗ್ರಾಮದ ನಿವಾಸಿ ಮಲ್ಲಮ್ಮ ಯಮನೂರ ಗೋಡಿನಾಳ ಎಂಬುವವರು ದೂರು ಸಲ್ಲಿಸಿದ್ದಾರೆ.

ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಳಿ ತನ್ನ ಪತಿ ಯಮನೂರ ಗೋಡಿನಾಳ ಸ್ನೇಹಿತರೊಂದಿಗೆ ನಿಂತಿದ್ದಾಗ ಶಿವಶಂಕರರೆಡ್ಡಿ ಗೋನಾಳ, ಮೇಘರಾಜ, ಉಮೇಶ, ಶರಣಬಸವ, ದೊಡ್ಡಬಸವ ಸೇರಿದಂತೆ 23 ಜನರನ್ನೊಳಗೊಂಡ ಗುಂಪು ಅವಾಚ್ಯ ಶಬ್ದಗಳಿಂದ ನಿಂದಿಸಿ, ಏಕಾಏಕಿಯಾಗಿ ಹಲ್ಲೆ ಮಾಡಿದರು. ಕೊರಳಲ್ಲಿದ್ದ ಚಿನ್ನದ ಸರವನ್ನು ಕಿತ್ತುಕೊಂಡರು. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ತಿಳಿಸಿದ್ದಾರೆ. ಕಾರಟಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಜೆಡಿಎಸ್ ನೂತನ ಪದಾಧಿಕಾರಿಗಳ ನೇಮಕ

• ಉದಯವಾಹಿನಿ, ಮಾನ್ವಿ

ಜೆಡಿಎಸ್ ಪಕ್ಷದ ಸಂಘಟನೆ, ಬಲವರ್ಧನೆಗೆ ನೂತನ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಶ್ರಮಿಸಬೇಕು' ಎಂದು ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಹೇಳಿದರು. ಪಟ್ಟಣದ ಜೆಡಿಎಸ್ ಪಕ್ಷದ ಕಾರ್ಯಾಲಯದಲ್ಲಿ ಈಚೆಗೆ ಪಕ್ಷದ ವಿವಿಧ ಘಟಕಗಳ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಿ ಅವರು ಮಾತನಾಡಿದರು.



ತಾಲ್ಲೂಕು ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷರನ್ನಾಗಿ ಎಂ.ಡಿ. ಬಾಷಾ ಸಾಬ್, ತಾಲ್ಲೂಕು ರೈತ ಘಟಕದ ಅಧ್ಯಕ್ಷರನ್ನಾಗಿ ಶರಣಪ್ಪ ಗೌಡ ಮದ್ಲಾಪುರ, ನಗರ ಘಟಕದ ಅಧ್ಯಕ್ಷರನ್ನಾಗಿ ಎಚ್.ಮೌನೇಶ್ ಗೌಡ ಹಾಗೂ ನಗರ ಯುವ ಘಟಕದ ಅಧ್ಯಕ್ಷರನ್ನಾಗಿ ಎಂ.ಡಿ.ಉಸ್ಮಾನ್, ತಾಲ್ಲೂಕು ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷರನ್ನಾಗಿ ಲಕ್ಷ್ಮಣ ಯಾದವ, ತಾಲ್ಲೂಕು ಪರಿಶಿಷ್ಟ ಪಂಗಡ ಘಟಕದ ಅಧ್ಯಕ್ಷರನ್ನಾಗಿ ವಿಜಯ್ ನಾಯಕ ಅವರನ್ನು ನೇಮಕ ಮಾಡಿ ಆದೇಶ ಪತ್ರ ವಿತರಿಸಲಾಯಿತು.

ಉದಯ ವಾಹಿನಿ
ಪ್ರಾದೇಶಿಕ
ಮಂಗಳವಾರ
02 ಸೆಪ್ಟೆಂಬರ್ 2025


# ಮಾತುಕತೆಯಲ್ಲಿ ಮೋದಿ ಪ್ರಸ್ತಾಪಿಸಿದ 5 ಸಂಗತಿಗಳೇನು?

## ಚೀನಾದ ಜೆಯಾಂಟಿನ್‌ನಲ್ಲಿ ಪರಸ್ಪರ ಭೇಟಿಯಾಗಿ ಮಾತುಕತೆ ನಡೆಸಿದ ಉಭಯ ನಾಯಕರು

**ಬೀಜಿಂಗ್:** ಚೀನಾದ ರಾಜಧಾನಿ ಬೀಜಿಂಗ್‌ನಲ್ಲಿ ನಡೆದ ಶಾಂಘೈ ಸಹಕಾರ ಸಂಘದ ಸಭೆಯ ನಂತರ, ಭಾರತ, ರಷ್ಯಾ ನಡುವೆ ದ್ವಿಪಕ್ಷೀಯ ಮಾತುಕತೆಗಳು ಬೀಜಿಂಗ್ ನಿಂದ 120 ಕಿ.ಮೀ. ದೂರವಿರುವ ಟಿಯಾಂಜಿನ್‌ನಲ್ಲಿ ಸೋಮವಾರ ನಡೆಯಿತು.

ಈ ಮಾತುಕತೆಗೆ ಬೀಜಿಂಗ್ ನಿಂದ ಪುಟಿನ್, ಮೋದಿ - ಇಬ್ಬರೂ ಒಂದೇ ಕಾರಿನಲ್ಲಿ ಸಾಗಿದ್ದು ವಿಶೇಷವಾಗಿತ್ತು. ಮಾತುಕತೆಯ ಸಂದರ್ಭದಲ್ಲಿ, ಭಾರತವು ಉಗ್ರವಾದದ ವಿರುದ್ಧ ತಾನು ನಡೆಸುತ್ತಿರುವ ಹೋರಾಟಕ್ಕೆ ರಷ್ಯಾ ಸೇರಿದಂತೆ ಶಾಂಘೈ ಸಹಕಾರ ಸಂಸ್ಥೆಯ ಎಲ್ಲಾ ಸದಸ್ಯ ರಾಷ್ಟ್ರಗಳ ಸಹಕಾರವನ್ನು ಕೋರಿದ್ದಾರೆ. ಜೊತೆಗೆ, ಶಾಂಘೈ ಸಂಘದ ಸದಸ್ಯ ರಾಷ್ಟ್ರಗಳ ನಡುವೆ ಉತ್ತಮ ಸಂಪರ್ಕ, ಸಂವಹನ ಮಾರ್ಗಗಳು ಸೃಷ್ಟಿಯಾಗಬೇಕು ಎಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ, ಉಕ್ರೇನ್ ನಲ್ಲಿ ಶಾಂತಿ ನೆಲೆಸುವಂತೆ ಮಾಡಬೇಕು ಎಂದರು.

**1. ಭಯೋತ್ಪಾದನೆ ವಿರುದ್ಧ ಸಮರ:** ಯಾವುದೇ ಒಂದು ರಾಷ್ಟ್ರದ ಶಾಂತಿಗೆ ಭಂಗ ತರುವ ಕೆಲಸವೇ ಉಗ್ರವಾದ. ನಮ್ಮ ದೇಶದ ಜನರಲ್ಲಿ ಶಾಂತಿ, ನೆಮ್ಮದಿ ನೆಲೆಸಬೇಕೆಂದರೆ ನಾವು ಉಗ್ರವಾದವನ್ನು ಮಟ್ಟ ಹಾಕಬೇಕು. ಭಾರತವು, ಕಳೆದ 70 ದಶಗಳಲ್ಲಿ ಈ ಉಗ್ರವಾದದ ವಿರುದ್ಧ ಹೋರಾಡುತ್ತಲೇ ಇದೆ. ಜಗತ್ತಿನ ಹಲವಾರು ರಾಷ್ಟ್ರಗಳು ಉಗ್ರವಾದವನ್ನು ಖಂಡಿಸುತ್ತವೆ. ಆದರೆ, ಕೆಲವು ರಾಷ್ಟ್ರಗಳು ಖಂಡಿಸುವುದರ ಜೊತೆಗೆ ಉಗ್ರವಾದ ನಡೆಸುವ ರಾಷ್ಟ್ರಗಳಿಗೆ ಸಹಾಯ ಮಾಡುತ್ತೇವೆ. ಬದಲಾದ ಕಾಲಘಟ್ಟದಲ್ಲಿ ಏಷ್ಯಾ ಖಂಡದ ಶಕ್ತಿಗಳಾಗಿರುವ ನಾವೆಲ್ಲರೂ ಒಂದೇ ಮನಸ್ಸಿನಿಂದ ಉಗ್ರವಾದವನ್ನು ಖಂಡಿಸಬೇಕು ಎಂದು ಆಗ್ರಹಿಸಿದ್ದಾರೆ.

**2. ಸಂಪರ್ಕ, ಸಾರ್ವಭೌಮತ್ವ:** ಶಾಂಘೈ ಸಹಕಾರ ಸಂಘದ ಉದ್ದೇಶಗಳಲ್ಲಿ, ಏಷ್ಯಾದ ಸದಸ್ಯ ರಾಷ್ಟ್ರಗಳ ನಡುವೆ ಗಡಿ ರೇಖೆಗಳು ಮುಕ್ತವಾಗಿರಬೇಕು,



ಆ ಮೂಲಕ, ದೇಶ ದೇಶಗಳ ನಡುವೆ ಸುಲಭ ಸಂಪರ್ಕಕ್ಕೆ ಅನುಕೂಲವಾಗಬೇಕು ಎಂಬ ವಿಚಾರವಿದೆ.

ಇದನ್ನು ಅರ್ಥ ಮಾಡಿಕೊಂಡು ಗಡಿಗಳನ್ನು ಮುಕ್ತಗೊಳಿಸುವಿಕೆ, ಏಷ್ಯಾದ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸುಲಭವಾಗಿ ಸಾರಿಗೆ ಮತ್ತಿತರ ಸಂಪರ್ಕ ಮಾರ್ಗಗಳು ಸೃಷ್ಟಿಯಾಗಬೇಕು.

ಅದರಿಂದ ಸರಕು ಸಾಗಣೆ, ಇನ್ನಿತರ ವಾಣಿಜ್ಯ ಚಟುವಟಿಕೆಗಳಿಗೆ ಸಹಕಾರಿಯಾಗುತ್ತದೆ ಎಂದಿದ್ದಾರೆ. ಅದೇ ಕಾರಣಕ್ಕಾಗಿಯೇ, ಭಾರತವು ಇರಾನ್‌ನಲ್ಲಿ ಚಬಾಹರ್ ಬಂದರನ್ನು ಅಭಿವೃದ್ಧಿಪಡಿಸಿ, ಭಾರತದಿಂದ ಅಫ್ಘಾನಿಸ್ತಾನದವರೆಗೆ ನೇರವಾಗಿ ಸಂಪರ್ಕ ಸಾಧಿಸಲು ದಾರಿ ಮಾಡಿಕೊಂಡಿದೆ ಎಂದು ಹೇಳಿದರು. ಆದರೆ, ಸಂಪರ್ಕದ ಹೆಸರಿನಲ್ಲಿ ಯಾವುದೇ ಪ್ರದೇಶವನ್ನು ಕಬಳಿಸುವ ಹುನ್ನಾರ ಇರಬಾರದು. ಹಾಗೆ ಜಾಗಗಳನ್ನು ಕಬಳಿಸುವುದಾಗಲೀ, ಮತ್ತೊಂದು ದೇಶದ ಸಾರ್ವಭೌಮತ್ವಕ್ಕೆ ಧಕ್ಕೆ ತರುವಂಥದ್ದಾಗಲೀ ಇರಬಾರದು ಎಂದು ಹೇಳಿದ್ದಾರೆ.

**3. ಭಾರತ, ಎಸ್.ಇ.ಒ ಅಧ್ಯಕ್ಷಗಿರಿ:** 2023ರಲ್ಲಿ ಶಾಂಘೈ ಸಹಕಾರ ಸಂಘದ ಅಧ್ಯಕ್ಷನಾಗಿದ್ದಾಗ ಭಾರತ, ನವ ಶಕ್ತಿಯ ಸಾಧ್ಯತೆಗಳ ಬಗ್ಗೆ ಪ್ರಸ್ತಾಪಿಸಿದ್ದೆವು. ಯುವಜನರ ಸಬಲೀಕರಣ, ಡಿಜಿಟಲ್ ಕ್ರಾಂತಿಯಲ್ಲಿ ಯುವಕರನ್ನು, ದೇಶವಾಸಿಗಳನ್ನು ಒಗ್ಗೂಡಿಸಿಕೊಳ್ಳುವುದು, ಭಾರತ, ಏಷ್ಯಾದ ಇತರ ರಾಷ್ಟ್ರಗಳಲ್ಲಿರುವ ಬುದ್ಧನ ಶಾಂತಿ ನೆಲೆಗಳನ್ನು ಅಭಿವೃದ್ಧಿಗೊಳಿಸುವುದು ಇತ್ಯಾದಿ ಯೋಜನೆಗಳನ್ನು ಪ್ರಸ್ತಾಪಿಸಲಾಗಿತ್ತು. ಅವುಗಳಲ್ಲಿ ನೆನೆಗುದಿಗೆ ಬಿದ್ದಿರುವ ಕಾರ್ಯಗಳು ಚುರುಕಾಗಿ ನಡೆಯಬೇಕಿದೆ ಎಂದು ಮೋದಿಯವರು ಪುಟಿನ್ ಅವರಲ್ಲಿ ಮನವಿ ಮಾಡಿದ್ದಾರೆ.

**4. ನಾಗರಿಕ ಸಂವಾದ ವೇದಿಕೆ:** ಶಾಂಘೈ ಸಂಘದ ಸದಸ್ಯ ರಾಷ್ಟ್ರಗಳ ನಡುವೆ ನಾಗರಿಕ ಸಂವಹನ ವೇದಿಕೆಯೊಂದು ಸೃಷ್ಟಿಯಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿಯವರು ಪುಟಿನ್ ಅವರಲ್ಲಿ ಬೇಡಿಕೆ ಇಟ್ಟಿದ್ದಾರೆ. ಎಸ್‌ಇಒ ಸದಸ್ಯ ರಾಷ್ಟ್ರಗಳ ನಡುವೆ ಇಂಥದ್ದೊಂದು ಸಂವಹನ ವೇದಿಕೆಯಿದ್ದರೆ ಅದು ಸಾಂಸ್ಕೃತಿಕ, ಸಾಂಪ್ರದಾಯಿಕ, ಸಾಹಿತ್ಯಕ ಆಲೋಚನೆಗಳು, ವಿಚಾರಗಳ ವಿನಿಯಮಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ.

**5. ಉಕ್ರೇನ್‌ನಲ್ಲಿ ಶಾಂತಿ:** ಮೂರ್ನಾಲ್ಕು ವರ್ಷಗಳಿಂದ ಉಕ್ರೇನ್ ನಲ್ಲಿ ಅಶಾಂತಿ ಏರ್ಪಟ್ಟಿದೆ. ಹಾಗಾಗಿ, ಉಕ್ರೇನ್‌ನಲ್ಲಿ ಸಮರ ನಿಲ್ಲಬೇಕು. ರಷ್ಯಾ ದೇಶವು ಅಲ್ಲಿ ನಡೆಯುತ್ತಿರುವ ಯುದ್ಧವನ್ನು ಕೊನೆಗಾಣಿಸಬೇಕು. ಉಕ್ರೇನ್‌ನಲ್ಲಿ ಶಾಂತಿ ನೆಲೆಸುವಂತೆ ಮಾಡಲು ಮೊದಲ ಆದ್ಯತೆ ನೀಡಬೇಕು ಎಂದು ಅವರು ಪುಟಿನ್ ಅವರನ್ನು ಕೋರಿದ್ದಾರೆ. ಶಾಂಘೈ ಸಂಘದ ಯಾವುದೇ ಸದಸ್ಯ ರಾಷ್ಟ್ರವು ಯುದ್ಧದಲ್ಲಿ ಭಾಗಿಯಾಗಿದ್ದರೆ ಅದು ಇತರ ಸದಸ್ಯ ರಾಷ್ಟ್ರಗಳೊಂದಿಗೆ ತ್ವರಿತವಾಗಿ ಅಭಿವೃದ್ಧಿಯತ್ತ ಸಾಗಲು ಸಾಧ್ಯವಾಗುವುದಿಲ್ಲ. ಹಾಗಾಗಿ, ಉಕ್ರೇನ್ ಯುದ್ಧವನ್ನು ಕೊನೆಗಾಣಿಸಬೇಕು ಎಂದು ಪ್ರಧಾನಿ ಮೋದಿಯವರು ಪುಟಿನ್ ಅವರನ್ನು ಕೋರಿದ್ದಾರೆ.

**ಒಂದಾದ ಚೀನಾ, ಭಾರತ**


**ಭಾರತವನ್ನು ಕಟ್ಟಿಹಾಕಲು ಅಮೆರಿಕ ಹೂಡಿದ್ದ ತಂತ್ರಗಾರಿಕೆಗೆ ಪ್ರತಿಯಾಗಿ ಭಾರತ ಈಗ ಚೀನಾ, ರಷ್ಯಾದ ಕಡೆಗೆ ಮುಖ ಮಾಡಿದೆ. ಇದಕ್ಕಾಗಿ, ಆ. 31 - ಸೆ. 1ರಂದು ನಡೆದ ಶಾಂಘೈ ಸಹಕಾರ ಸಂಸ್ಥೆಯ (ಎಸ್ ಸಿಒ) ಸದಸ್ಯ ರಾಷ್ಟ್ರಗಳ ಶೃಂಗಸಭೆಯನ್ನು ಪ್ರಧಾನಿ ನರೇಂದ್ರ ಮೋದಿ ಸಮರ್ಪಕವಾಗಿ ಬಳಸಿಕೊಂಡಿದ್ದಾರೆ. ಅಲ್ಲಿ ಚೀನಾ ಹಾಗೂ ರಷ್ಯಾ ಅಧ್ಯಕ್ಷರ ಜೊತೆಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿದ್ದಾರೆ.**

**ಒಂದೇ ಕಾರಿನಲ್ಲಿ ಸಾಗಿದ ಮೋದಿ, ಪುಟಿನ್**

**ಟಿಯಾಂಜಿನ್‌ನಲ್ಲಿ ನಡೆದ ಮಾತುಕತೆಗಾಗಿ ಭಾರತದ ಪ್ರಧಾನಿ ಮೋದಿ, ರಷ್ಯಾದ ಅಧ್ಯಕ್ಷರಾದ ಪುಟಿನ್ ಅವರು ಒಂದೇ ಕಾರಿನಲ್ಲಿ ಪ್ರಯಾಣ ಬೆಳೆಸಿದ್ದು ಗಮನಾರ್ಹ. ಬೀಜಿಂಗ್ ನಿಂದ ಟಿಯಾಂಜಿನ್ ನ ನಡುವೆ 120 ಕಿ.ಮೀ. ದೂರವಿದೆ. ಆ ದೂರವನ್ನು ಇಬ್ಬರೂ ನಾಯಕರು ರಸ್ತೆ ಮಾರ್ಗವಾಗಿಯೇ ಕ್ರಮಿಸಿದರು. ಒಂದೇ ಕಾರಿನಲ್ಲಿ ಪ್ರಯಾಣಿಸಿದ್ದು ಜಗತ್ತಿಗೆ, ವಿಶೇಷವಾಗಿ ಅಮೆರಿಕಕ್ಕೆ ಒಂದು ಸಂದೇಶವನ್ನು ಸಾರಿದೆ.**

# ಅರ್ಥವಿಲ್ಲದ ಆರೋಪ ಮಾಡಿದ ಅಮೆರಿಕ

**ನ್ಯೂಯಾರ್ಕ್:** ರಷ್ಯಾದ ತೈಲ ಖರೀದಿಗಾಗಿ ಭಾರತದ ವಿರುದ್ಧ ಹೊಸ ವಾಗ್ದಾಳಿ ನಡೆಸಿರುವ ಶ್ವೇತಭವನದ ವ್ಯಾಪಾರ ಸಲಹೆಗಾರ ಪೀಟರ್ ನವರೊ ಅವರು, ಬ್ರಾಹಣರು ಭಾರತೀಯ ಜನರ ವೆಚ್ಚದಲ್ಲಿ ಲಾಭ ಗಳಿಸುತ್ತಿದ್ದಾರೆ, ಅದು ನಿಲ್ಲಿಸಬೇಕಾಗಿದೆ ಎಂದು ಹೇಳಿದ್ದಾರೆ.



ನೋಡಿ ಮೋದಿ ಒಬ್ಬ ಮಹಾನ್ ನಾಯಕ ಎಂದು ಟ್ರಂಪ್ ಆಡಳಿತದ ವ್ಯಾಪಾರ ಮತ್ತು ಉತ್ಪಾದನೆಯ ಹಿರಿಯ ಸಲಹೆಗಾರ ನವರೊ, ಫಾಕ್ಸ್ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಹೇಳಿದರು. ಭಾರತೀಯ ನಾಯಕ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ಆಗಿರುವಾಗ ಅವರೊಂದಿಗೆ ಹೇಗೆ ಸಹಕರಿಸುತ್ತಿದ್ದಾರೆಂದು ತನಗೆ ಅರ್ಥವಾಗುತ್ತಿಲ್ಲ ಎಂದು ವ್ಯಾಪಾರ ಸಲಹೆಗಾರ ಹೇಳಿದರು. ಆದ್ದರಿಂದ ನಾನು ಸರಳವಾಗಿ ಹೇಳುತ್ತೇನೆ, ಭಾರತೀಯ ಜನರೇ, ದಯವಿಟ್ಟು ಇಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಿ. ನೀವು ಭಾರತೀಯ ಜನರ ವೆಚ್ಚದಲ್ಲಿ ಬ್ರಾಹಣರು ಲಾಭ ಗಳಿಸುವಂತೆ ಮಾಡುತ್ತಿದ್ದೀರಿ. ನಮಗೆ ಅದು ನಿಲ್ಲಬೇಕು, ಎಂದು ನವರೊ ಹೇಳಿದರು.

ಅಧ್ಯಕ್ಷ ಟ್ರಂಪ್ ಅವರ ವ್ಯಾಪಾರ, ಸುಂಕಗಳ ನೀತಿಗಳಿಂದಾಗಿ ವಾಷಿಂಗ್ಟನ್, ನವದೆಹಲಿ ನಡುವಿನ ಸಂಬಂಧಗಳಲ್ಲಿ ಪ್ರಮುಖ ಕುಸಿತದ ನಂತರ ನವರೊ ಕಳೆದ ಕೆಲವು ದಿನಗಳಿಂದ ಭಾರತವನ್ನು ನಿರಂತರವಾಗಿ ಗುರಿ ಆಗಿಸಿಕೊಂಡಿದ್ದಾರೆ. ಟ್ರಂಪ್ ಭಾರತದ ಮೇಲೆ ಶೇ. 25 ರಷ್ಟು ಪರಸ್ಪರ ಸುಂಕಗಳನ್ನು ಮತ್ತು ದೆಹಲಿಯ ರಷ್ಯಾದ ತೈಲ ಖರೀದಿಗೆ ಶೇ. 25 ರಷ್ಟು ಹೆಚ್ಚುವರಿ ಸುಂಕಗಳನ್ನು ವಿಧಿಸಿದ್ದಾರೆ. ಭಾರತವು ತನ್ನ ಮೇಲೆ ವಿಧಿಸಲಾದ ಸುಂಕಗಳನ್ನು ಅಸಮರ್ಥನೀಯ, ಅಸಮಂಜಸ ಎಂದು ಕರೆದಿದೆ. ಚೀನಾ ರಷ್ಯಾದ ತೈಲ ಖರೀದಿಯ ಬಗ್ಗೆ, ಭಾರತದ ಮೇಲೆ ಹೆಚ್ಚುವರಿ ಸುಂಕಗಳನ್ನು ಜಾರಿಗೆತರುವುದು ಪುಟಿನ್ ಅವರನ್ನು ಉಸಿರುಗಟ್ಟಿಸಲು ಸಾಕಾಗಿದೆಯೇ ಎಂದು ನವರೊ ಅವರನ್ನು ಕೇಳಲಾಯಿತು. ಸರಿ, ಸ್ಪಷ್ಟವಾಗಿ ಹೇಳೋಣ, ನಾವು ಈಗ ಭಾರತದ ಮೇಲೆ ಶೇ. 50 ರಷ್ಟು ಸುಂಕಗಳನ್ನು ಹೊಂದಿದ್ದೇವೆ, ಆದರೆ ಚೀನಾದ ಮೇಲೆ ಶೇ. 50 ಕ್ಕಿಂತ ಸ್ವಲ್ಪ ಹೆಚ್ಚಿನ ಸುಂಕಗಳನ್ನು ವಿಧಿಸಿದ್ದೇವೆ. ಆದ್ದರಿಂದ ಒಂದು ಪ್ರಶ್ನೆ ಇದೆ, ನಮಗೆ ನಿಜವಾಗಿಯೂ ಹಾನಿಯಾಗದಂತೆ ನೀವು ಎಷ್ಟು ಹೆಚ್ಚಿನದನ್ನು ಮಾಡಲು ಬಯಸುತ್ತೀರಿ ಎಂದು ಹೇಳಿದರು.

**ಫೆಬ್ರವರಿ 2022ರಲ್ಲಿ ಪುಟಿನ್ ಉಕ್ರೇನ್ ಮೇಲೆ ಆಕ್ರಮಣ ಮಾಡುವ ಮೊದಲು, ಭಾರತ ರಷ್ಯಾದ ತೈಲವನ್ನು ಖರೀದಿಸಲಿಲ್ಲ, ಅದರ ಖರೀದಿಗಳು ಬಹಳ ಕಡಿಮೆ ಪ್ರಮಾಣದಲ್ಲಿದ್ದವು ಎಂದು ನವರೊ ಹೇಳಿದರು.**

# ಪತ್ನಿಯ ಬಣ್ಣ ನಿಂದಿಸಿ ಕೊಲೆ ಮಾಡಿದ್ದ ವ್ಯಕ್ತಿಗೆ ಮರಣದಂಡನೆ

**ಉದಯಪುರ:** ತನ್ನ ಹೆಂಡತಿಯ ಚರ್ಮದಬಣ್ಣಕ್ಕಾಗಿ ಪದೇ ಪದೇ ನಿಂದಿಸಿ ಬೆಂಕಿ ಹಚ್ಚಿ ಕೊಂದಿದ್ದ ಪತಿಗೆ ರಾಜಸ್ಥಾನದ ಉದಯಪುರದ ನ್ಯಾಯಾಲಯವು ಮರಣದಂಡನೆ ವಿಧಿಸಿದೆ. ನೀನು ಸುಂದರವಾಗಿರುತ್ತೀಯ ಎಂದು ಪತ್ನಿಯ ಮೈಮೇಲೆ ರಾಸಾಯನಿಕವನ್ನು ಲೇಪಿಸಿ ನಂತರ ಬೆಂಕಿ ಹಚ್ಚಿ ಹತ್ಯೆ ಮಾಡಿದ್ದ ಈ ಪ್ರಕರಣ ವಿಚಾರಣೆ ನಡೆಸಿದ ನ್ಯಾಯಾಧೀಶರು ಇದನ್ನು ಮಾನವೀಯತೆಯ ವಿರುದ್ಧ ಘೋರ ಅಪರಾಧ ಎಂದು ಹೇಳಿದ್ದಾರೆ. ಆರೋಗ್ಯಕರ ಮತ್ತು ನಾಗರಿಕ ಸಮಾಜದಲ್ಲಿ ಇಂತಹ ಅಪರಾಧವನ್ನು ತಡೆಯಲು ಸಾಧ್ಯವಿಲ್ಲ ಎಂದು ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಎಂಟು ವರ್ಷಗಳಷ್ಟು ಹಳೆಯದಾದ ಪ್ರಕರಣದ ತೀರ್ಪು ನೀಡುತ್ತಾ ಹೇಳಿದೆ. ಜೂನ್ 24, 2017 ರಂದು ನವನಿಯಾ ಗ್ರಾಮದಲ್ಲಿ ಈ ಘಟನೆ ಸಂಭವಿಸಿದೆ, ಕಿಶನ್ ಲಾಲ್ ತನ್ನ ಹೆಂಡತಿ ಲಕ್ಷ್ಮಿಯ ನೋಟದ ವಿರುದ್ಧ ತೀವ್ರ ಅಸಮಾಧಾನ ಹೊಂದಿದ್ದನು. ಲಕ್ಷ್ಮಿಯನ್ನು ಅವಳ ಚರ್ಮವನ್ನು ಸುಂದರವಾಗಿಸುತ್ತದೆ ಎಂದು ಹೇಳಿಕೊಂಡ ರಾಸಾಯನಿಕವನ್ನು ಅನ್ವಯಿಸುವಂತೆ ಹೇಳಿದ್ದ. ಅದನ್ನು ನಂಬಿ ಲಕ್ಷ್ಮಿ ತನ್ನ ದೇಹದಾದ್ಯಂತ ಲೇಪಿಸಿಕೊಂಡಳು ನಂತರ ಕಿಶನ್‌ಲಾಲ್ ಧೂಪದ್ರವ್ಯವನ್ನು ಹೊತ್ತಿಸಿ, ಅವಳ ಹೊಟ್ಟೆಯ ಬಳಿ ಇಟ್ಟು ಬೆಂಕಿ ಹಚ್ಚಿದನು. ಬೆಂಕಿಯಿಂದ ತೀವ್ರವಾಗಿ ಸುಟ್ಟುಹೋದ ಲಕ್ಷ್ಮಿ ಸಹಾಯಕ್ಕಾಗಿ ಕಿರುಚುತ್ತಾ ಹೊರಗೆ ಓಡಿದಳು ಆದರೆ ದುಷ್ಟ



ಪತಿ ಪಿತೂರಿಯ ಭಾಗವಾಗಿ ಕೋಣೆಯನ್ನು ಒಳಗಿನಿಂದ ಮುಚ್ಚಿದ್ದರು, ಅವಳು ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ, ನಂತರ ಆಕೆಯ ಅತ್ತೆ ಮಾವಂದಿರು ಆಕೆಯನ್ನು ಆಸ್ಪತ್ರೆಗೆ ಕರೆದೊಯ್ದರು, ಆದರೆ ಲಕ್ಷ್ಮಿ ಕೆಲವು ದಿನಗಳ ನಂತರ ಗಾಯಗಳಿಂದ ಸಾವನ್ನಪ್ಪಿದಳು. ಕಿಶನ್ ಲಾಲ್‌ನ ಕೃತ್ಯಗಳನ್ನು ನ್ಯಾಯಾಲಯವು ಅತ್ಯಂತ ಅಪರೂಪದ ಮತ್ತು ಅಪಾಯಕಾರಿ ಎಂದು ಖಂಡಿಸಿತು. ಅವನ ಕ್ರೂರ ನಡವಳಿಕೆಯು ಕೇವಲ ಕೌಟುಂಬಿಕ ಅಪರಾಧವನ್ನು ಮೀರಿ, ಸಮಾಜದ ಆತ್ಮಸಾಕ್ಷಿಯನ್ನು ಅಲುಗಾಡಿಸಿತು ಎಂದು ಹೇಳಿದೆ.

14 ಸಾಕ್ಷಿಗಳು, 36 ದಾಖಲೆಗಳನ್ನು ಹಾಜರುಪಡಿಸಿ ಪಬ್ಲಿಕ್ ಪ್ರಾಸಿಕ್ಯೂಟರ್ ದಿನೇಶ್ ಪಲಿವಾಲ್ ಹೇಳಿದ್ದಾರೆ. ಕಿಶನ್‌ಲಾಲ್ ತನ್ನ ಹೆಂಡತಿಯೊಂದಿಗಿನ ನಡವಳಿಕೆಯಲ್ಲಿ ಚಿತ್ರಿಸಲಾದ ನಡವಳಿಕೆಯು ಚರ್ಮದ ಬಣ್ಣ, ಲಿಂಗ ಆಧಾರಿತ ಹಿಂಸೆಗೆ ಸಂಬಂಧಿಸಿದೆ ಆಳವಾದ ಬೇರೂರಿರುವ ಸಾಮಾಜಿಕ ಪೂರ್ವಾಗ್ರಹಗಳನ್ನು ಪ್ರತಿಬಿಂಬಿಸುತ್ತದೆ ಎಂದು ನ್ಯಾಯಾಲಯ ಹೇಳಿದೆ. ಲಕ್ಷ್ಮಿಯ ಮರಣ ಪೂರ್ವ ಹೇಳಿಕೆಯು ನಿರ್ಣಾಯಕ ಪುರಾವೆಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ತೀರ್ಪು ಮತ್ತಷ್ಟು ಎತ್ತಿ ತೋರಿಸಿದೆ, ಕಿಶನ್ ಲಾಲ್ ಕ್ರೌರ್ಯವು ತನ್ನ ಹೆಂಡತಿಯನ್ನು ಗುರಿಯಾಗಿರಿಸಿಕೊಳ್ಳದೆ, ಮಾನವೀಯತೆಯ ಮೇಲಿನ ನೇರ ದಾಳಿಯಾಗಿದೆ ಎಂಬ ಅಂಶವನ್ನು ನ್ಯಾಯಾಲಯ ಹೇಳಿದೆ.

# ಚೀನಾ ಓಲೈಕೆಯನ್ನು ಖಂಡಿಸಿದ ಕಾಂಗ್ರೆಸ್

**ನವದೆಹಲಿ:** ಪ್ರಧಾನಿ ಮೋದಿ ಅವರು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ಮಾತುಕತೆ ನಡೆಸಿದ ನಂತರ ಕಾಂಗ್ರೆಸ್ ಕೇಂದ್ರ ಸರ್ಕಾರದ ಮೇಲೆ ದಾಳಿ ನಡೆಸಿದ್ದು, ಸರ್ಕಾರವು ಹೇಡಿತನದಿಂದ ವಂಚಿತವಾಗಿದೆ, ಡ್ರ್ಯಾಗನ್ ಎದುರು ಶರಣಾಗಿದೆ ಎಂದು ಆರೋಪಿಸಿದೆ. ಆಪರೇಷನ್ ಸಿಂಧೂರ್ ಸಮಯದಲ್ಲಿ ಪಾಕಿಸ್ತಾನ-ಚೀನಾ ಜುಗಲ್ಬಂದಿ ಬಗ್ಗೆ ಮೋದಿ ಅವರ ಮೌನವನ್ನು ಪಕ್ಷವು ರಾಷ್ಟ್ರ ವಿರೋಧಿ ಎಂದು ಕರೆದಿದೆ.

ಕಾಂಗ್ರೆಸ್ ಸಂವಹನದ ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, ಭಾರತವು ದೀರ್ಘಕಾಲದವರೆಗೆ ಚೀನಾವನ್ನು ತನ್ನ ದ್ವಿಮುಖ ನೀತಿ, ಭಯೋತ್ಪಾದನೆಯ ಬಗ್ಗೆ ದ್ವಿಮುಖ ಮಾತು ಎಂದು ಆರೋಪಿಸುತ್ತಿದೆ ಎಂದು ಹೇಳಿದರು. ಈಗ, ಪ್ರಧಾನಿ ಮೋದಿ ಅಧ್ಯಕ್ಷ ಕ್ಸಿಗೆ ಭಾರತ, ಚೀನಾ ಎರಡೂ ಭಯೋತ್ಪಾದನೆಯ ಬಲಿಪಶುಗಳಾಗಿವೆ ಎಂದು ಹೇಳುತ್ತಾರೆ. ಇದು ಡ್ರ್ಯಾಗನ್ ಎಂದು ಕರೆಯಲ್ಪಡುವ ಆನೆಯ ಮುಂದೆ ಶರಣಾಗದಿದ್ದರೆ, ಅದು ಏನು? ಎಂದು ಅವರು ಎಕ್ಸ್ ಮಾಡಿದ್ದಾರೆ. ಆಪರೇಷನ್ ಸಿಂಧೂರ್ ಸಮಯದಲ್ಲಿ ಪಾಕಿಸ್ತಾನದೊಂದಿಗೆ ಚೀನಾದ



ಜುಗಲ್ಬಂದಿಯ ಬಗ್ಗೆ ಅಧ್ಯಕ್ಷ ಕ್ಸಿ ಅವರೊಂದಿಗಿನ ಸಂಭಾಷಣೆಯಲ್ಲಿ ಪ್ರಧಾನಿ ಮೋದಿ ಸಂಪೂರ್ಣವಾಗಿ ಮೌನವಾಗಿದ್ದರು ಎಂಬುದು ಇನ್ನೂ ಹೆಚ್ಚಿನ ರಾಷ್ಟ್ರವಿರೋಧಿಯಾಗಿದೆ, ಇದನ್ನು ಭಾರತೀಯ ಸೇನಾ ಉನ್ನತ ಅಧಿಕಾರಿಗಳೇ ಬಹಿರಂಗಪಡಿಸಿದ್ದಾರೆ ಎಂದು ರಮೇಶ್ ಹೇಳಿದರು. 56 ಇಂಚಿನ ಎದೆಯ ನಾಯಕ ಎಂದು ಹೇಳಿಕೊಳ್ಳುವ ಸ್ವಯಂ ಘೋಷಿತ ನಾಯಕ ಈಗ ಸಂಪೂರ್ಣವಾಗಿ ಬಹಿರಂಗಗೊಂಡಿದ್ದಾನೆ. ಜೂನ್ 19, 2020 ರಂದು ಚೀನಾಕ್ಕೆ ಕ್ಲೀನ್ ಚಿಟ್ ನೀಡುವ ಮೂಲಕ ಅವರು ರಾಷ್ಟ್ರೀಯ ಹಿತಾಸಕ್ತಿಗೆ ದ್ರೋಹ ಬಗೆದರು. ಈಗ, ಆ. 31, 2025, ಟಿಯಾಂಜಿನ್‌ನಲ್ಲಿ ಅವರ ಹೇಡಿತನದ ದಂಗೆಗೆ ಅಪಖ್ಯಾತಿಯ ದಿನವಾಗಿ ಉಳಿಯುತ್ತದೆ ಎಂದು ಕಾಂಗ್ರೆಸ್ ನಾಯಕ ಹೇಳಿದರು.

# 6.3 ತೀವ್ರತೆಯ ಭೂಕಂಪಕ್ಕೆ 500 ಮಂದಿ ಬಲಿ

**ಕಾಬೂಲ್:** ಅಫ್ಘಾನಿಸ್ತಾನದಲ್ಲಿ ಸೋಮವಾರ ಸಂಭವಿಸಿದ 6.3 ತೀವ್ರತೆಯ ಭೂಕಂಪದಲ್ಲಿ ಕನಿಷ್ಠ 500 ಮಂದಿ ಸಾವನ್ನಪ್ಪಿದ್ದಾರೆ ಮತ್ತು 400 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಬಲವಾದ ಕಂಪನದಿಂದ ಉಂಟಾದ ನಾಶ ಮತ್ತು ಅವಶೇಷಗಳ ಅಡಿಯಲ್ಲಿ ಕಾಣೆಯಾದ ಜನರನ್ನು ಹುಡುಕಲು ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ. ಭೂಕಂಪದ ನಂತರ ಒಂದೇ ಹಳ್ಳಿಯಲ್ಲಿ ಕನಿಷ್ಠ 30 ಜನರು ಸಾವನ್ನಪ್ಪಿದ್ದಾರೆ ಎಂದು ಆರಂಭಿಕ ವರದಿಗಳು ತಿಳಿಸಿವೆ. ಆದಾಗ್ಯೂ, ಆರೋಗ್ಯ ಅಧಿಕಾರಿಗಳು ನಂತರ ಸಂಖ್ಯೆಯನ್ನು ನವೀಕರಿಸಿದರು ಮತ್ತು ನೂರಾರು ಜನರು ಸಾವನ್ನಪ್ಪಿದ್ದಾರೆ ಎಂದು ಶಂಕಿಸಲಾಗಿದೆ. ಕನಿಷ್ಠ 250 ಸಾವುನೋವುಗಳು ದೃಢಪಡಿಸಲಾಗಿದೆ.

ಆದಾಗ್ಯೂ, ರಕ್ಷಣಾ ಕಾರ್ಯಾಚರಣೆಗಳು ಮುಂದುವರಿದಂತೆ, ಸಾವಿನ ಸಂಖ್ಯೆ ಹೆಚ್ಚಾಗುವ



ನಿರೀಕ್ಷೆಯಿದೆ. ಸಾವುನೋವುಗಳು, ಗಾಯಗಳ ಸಂಖ್ಯೆ ಹೆಚ್ಚಾಗಿದೆ, ಆದರೆ ಪ್ರದೇಶವು ಪ್ರವೇಶಿಸಲು ಕಷ್ಟಕರವಾಗಿರುವುದರಿಂದ, ನಮ್ಮ ತಂಡಗಳು ಇನ್ನೂ ಸ್ಥಳದಲ್ಲಿವೆ ಎಂದು ಆರೋಗ್ಯ ಸಚಿವಾಲಯದ ವಕ್ತಾರ ಶರಫತ್ ಜಮಾನ್ ಹೇಳಿಕೆಯಲ್ಲಿ ತಿಳಿಸಿದ್ದಾರೆ. ನಂಗಹಾರರ್ ಪ್ರಾಂತ್ಯದ ಜಲಾಲಾಬಾದ್ ಬಳಿ 6.3 ತೀವ್ರತೆಯ ಭೂಕಂಪ ಸಂಭವಿಸಿದೆ. 6.3 ತೀವ್ರತೆಯ ಭೂಕಂಪದ ನಂತರ, ಆರಂಭಿಕ ಕಂಪನದ ಕೇಂದ್ರ ಬಿಂದುದಿಂದ ಸ್ವಲ್ಪ ದೂರದಲ್ಲಿ ಸುಮಾರು 140 ಕಿ.ಮೀ ಆಳದಲ್ಲಿ 4.7 ತೀವ್ರತೆಯ ಭೂಕಂಪ ಸಂಭವಿಸಿದೆ. ಈ ಭೂಕಂಪದ ಕಂಪನಗಳು ಪಾಕಿಸ್ತಾನದಲ್ಲಿಯೂ ಅನುಭವಿಸಿವೆ ಎಂದು ವರದಿಗಳು ತಿಳಿಸಿವೆ. ಇಂದಿನ ಭೂಕಂಪವು 2023ರಿಂದ ಈ ಪ್ರದೇಶದಲ್ಲಿ ಸಂಭವಿಸಿದ ಅತ್ಯಂತ ಮಾರಕವಾಗಿದೆ.

ಎರಡು ವರ್ಷಗಳ ಹಿಂದೆ, ಈ ಪ್ರದೇಶದಲ್ಲಿ 6.3 ತೀವ್ರತೆಯ ಭೂಕಂಪ ಸಂಭವಿಸಿತು, ನಂತರ ಬಲವಾದ ನಂತರದ ಆಘಾತಗಳು ಸಂಭವಿಸಿದವು. ತಾಲಿಬಾನ್ ಪ್ರಕಾರ, ಭೂಕಂಪದಿಂದಾಗಿ ಸುಮಾರು 4,000 ಜನರು ಸಾವನ್ನಪ್ಪಿದ್ದಾರೆ.

ವಿಶ್ವಸಂಸ್ಥೆಯ ಮಾಹಿತಿಯ ಪ್ರಕಾರ, ಕನಿಷ್ಠ 1,500 ಜನರು ಸಾವನ್ನಪ್ಪಿದ್ದಾರೆ. ಅಫ್ಘಾನಿಸ್ತಾನವು ಮಾರಕ ಭೂಕಂಪಗಳಿಗೆ ಗುರಿಯಾಗುತ್ತದೆ, ವಿಶೇಷವಾಗಿ ಹಿಂದೂ ಕುಶ್ ಪರ್ವತ ಶ್ರೇಣಿಯಲ್ಲಿ, ಅಲ್ಲಿ ಭಾರತೀಯ, ಯುರೇಷಿಯನ್ ಟೆಕ್ಟೋನಿಕ್ ಪ್ಲೇಟ್‌ಗಳು ಸಂಧಿಸುತ್ತವೆ.

# ಫೇಸ್‌ಬುಕ್ ಗೆಳೆಯನ ಕಿರುಕುಳಕ್ಕೆ ನೊಂದು ಯುವತಿ ಆತ್ಮಹತ್ಯೆ

**ಥಾಣೆ:** ಫೇಸ್‌ಬುಕ್‌ನಲ್ಲಿ ಪರಿಚವಾಗಿದ್ದ ಗೆಳೆಯನಿಗೆ ವಿಡಿಯೋ ಕರೆಯಲ್ಲಿ ಮಾತನಾಡುತ್ತಲೇ ಯುವತಿಯೊಬ್ಬಳು ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಹಾರಾಷ್ಟ್ರದಲ್ಲಿ ಟಿಟ್ವಾಲಾ ಪ್ರದೇಶದಲ್ಲಿ ನಡೆದಿದೆ. ಮೃತ ಯುವತಿ, ವ್ಯಕ್ತಿ ಇನ್‌ಸ್ಟಾಗ್ರಾಮ್‌ನಲ್ಲಿ ಪರಿಚವಾಗಿ ಸ್ನೇಹಿತರಾಗಿ ಸಂಬಂಧ ಬೆಳೆಸಿಕೊಂಡಿದ್ದರು. ಆತ ಯುವತಿಯನ್ನು ನಂಬಿಸಿ ಆಭರಣಗಳನ್ನು ತೆಗೆದುಕೊಂಡಿದ್ದನು. ಹಿಂತಿರುಗಿಸುವಂತೆ ಕೇಳಿದಾಗ, ಆಕೆಯ ಖಾಸಗಿ ವಿಡಿಯೋಗಳನ್ನು ಸಾರ್ವಜನಿಕಗೊಳಿಸುವುದಾಗಿ ಬೆದರಿಕೆ ಹಾಕಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ. ವಂಚಕನ ಕಿರುಕುಳವನ್ನು ಸಹಿಸಲಾಗದೆ ಯುವತಿ ತನ್ನ ಮನೆಯಲ್ಲಿಯೇ ನೇಣು ಬಿಗಿದುಕೊಂಡು ಆತಹತ್ಯೆ ಮಾಡಿಕೊಂಡಿದ್ದಾಳೆ.

ಮೃತ ಯುವತಿಯ ಕುಟುಂಬವು ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದು, ಆಕೆಯ ಕುಟುಂಬವು ಇದೇ ರೀತಿ ಹಲವು ಹುಡುಗಿಯರನ್ನು ವಂಚಿಸಲಾಗಿದೆ. ತಮ್ಮ ಮಗಳ ಹೆಸರನ್ನು ಬಹಿರಂಗಗೊಳಿಸದಂತೆ ಕೋರಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಕಿರುಕುಳ ಮತ್ತು ಬ್ಲ್ಯಾಕ್‌ಮೇಲ್ ಆರೋಪದ ಮೇಲೆ ಯುವಕನನ್ನು ಬಂಧಿಸಲಾಗಿದೆ. ಆದರೆ ಶವಪರೀಕ್ಷೆ ನಡೆಸದೆ ಮಹಿಳೆಯ ಅಂತ್ಯಕ್ರಿಯೆ ನಡೆಸಲಾಗಿದೆ. ಘಟನೆ ಸಂಬಂಧ ಇಲ್ಲಿಯವರೆಗೆ ಯಾವುದೇ ಎಫ್‌ಐಆರ್ ದಾಖಲಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಕಾಳೇಶ್ವರಂ ಯೋಜನೆ ಅಕ್ರಮವನ್ನು ಸಿಬಿಐ ತನಿಖೆಗೆ ವಹಿಸಿದ ರೇವಂತ್ ರೆಡ್ಡಿ

**ಹೈದರಾಬಾದ್:** ಹಿಂದಿನ ಬಿಆರ್‌ಎಸ್ ಆಡಳಿತಾವಧಿಯಲ್ಲಿ ನಿರ್ಮಿಸಲಾದ ಕಾಳೇಶ್ವರಂ ಯೋಜನೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಸಿಬಿಐ ತನಿಖೆಗೆ ಆದೇಶಿಸಿದ್ದಾರೆ. ಸೋಮವಾರ ಬೆಳಗಿನ ಜಾವ 2 ಗಂಟೆ ಸುಮಾರಿಗೆ ಮುಕ್ತಾಯಗೊಂಡ ಕಾಳೇಶ್ವರಂ ಯೋಜನೆಯ ಕುರಿತಾದ ನ್ಯಾಯಾಂಗ ಆಯೋಗದ ವರದಿಯ ಮೇಲಿನ ಸಣ್ಣ ಚರ್ಚೆಯ ಕೊನೆಯಲ್ಲಿ ವಿಧಾನಸಭೆಯಲ್ಲಿ ಮಾತನಾಡಿದ ರೆಡ್ಡಿ, ಅಂತರರಾಜ್ಯ ಸಮಸ್ಯೆಗಳು, ವಿವಿಧ ಕೇಂದ್ರ ರಾಜ್ಯ ಸರ್ಕಾರಿ ಇಲಾಖೆಗಳು ಸಂಸ್ಥೆಗಳು ಯೋಜನೆಯಲ್ಲಿ ಭಾಗಿಯಾಗಿರುವುದರಿಂದ ತನಿಖೆಯನ್ನು ಸಿಬಿಐಗೆ ಹಸ್ತಾಂತರಿಸುವುದು ಸೂಕ್ತ ಆಗಿದೆ ಎಂದು ಹೇಳಿದರು. ಆದ್ದರಿಂದ, ಕೇಂದ್ರ ಸರ್ಕಾರಿ ಸಂಸ್ಥೆಗಳು ಮತ್ತು ಹಣಕಾಸು ಸಂಸ್ಥೆಗಳು ಯೋಜನೆಯ ವಿನ್ಯಾಸ, ನಿರ್ಮಾಣ ಮತ್ತು ಹಣಕಾಸಿನಲ್ಲಿ ಭಾಗಿಯಾಗಿವೆ ಎಂದು ಅವರು ಹೇಳಿದರು.

**ವರದಿಯ ಪ್ರಕಾರ, ಕಾಳೇಶ್ವರಂ ಯೋಜನೆಯ ಮೇಡಿಗಡ್ಡ ಬ್ಯಾರೇಜ್‌ನ ವೈಫಲ್ಯಕ್ಕೆ ಯೋಜನೆ, ವಿನ್ಯಾಸ, ಗುಣಮಟ್ಟ ನಿಯಂತ್ರಣದಲ್ಲಿನ ದೋಷಗಳು ಕಾರಣವೆಂದು ಕಂಡುಬಂದಿದೆ.**

**-ಎ. ರೇವಂತ್ ರೆಡ್ಡಿ , ಮುಖ್ಯಮಂತ್ರಿ**



ಆದ್ದರಿಂದ, ಈ ಪ್ರಕರಣದ ತನಿಖೆಯನ್ನು ಸ್ಪೀಕರ್ ಅನುಮತಿಯೊಂದಿಗೆ ಸಿಬಿಐಗೆ ಹಸ್ತಾಂತರಿಸಲು ಸದನವು ನಿರ್ಧಾರ ತೆಗೆದುಕೊಳ್ಳುತ್ತಿದೆ.

ಇದರಲ್ಲಿ ಹಲವು ಸಮಸ್ಯೆಗಳು, ತನಿಖೆಗೆ ಸೂಕ್ತವಾದ ವಿಷಯಗಳು ಇರುವುದರಿಂದ, ನಮ ಸರ್ಕಾರ ಸಿಬಿಐ ತನಿಖೆಗೆ ಆದೇಶಗಳನ್ನು ಹೊರಡಿಸುತ್ತಿದೆ ಎಂದು ಅವರು ಹೇಳಿದರು.

ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಪ್ರಾಧಿಕಾರ, ನ್ಯಾಯಾಂಗ ಆಯೋಗದ ವರದಿಗಳು ಯೋಜನೆಗೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಆಳವಾದ ಮತ್ತು ಹೆಚ್ಚು ಸಮಗ್ರ ತನಿಖೆಯ ಅಗತ್ಯವನ್ನು ಒತ್ತಿಹೇಳಿವೆ ಎಂದು ಅವರು ಹೇಳಿದರು. ನ್ಯಾಯಾಂಗ ಆಯೋಗವು ತನ್ನ ವರದಿಯಲ್ಲಿ ಹಲವಾರು ದೋಷಗಳು ಮತ್ತು ಅಕ್ರಮಗಳನ್ನು ಗುರುತಿಸಿದ್ದು, ಅವು ಕ್ರಿಮಿನಲ್ ಕ್ರಮ ಕೈಗೊಳ್ಳಲು ಯೋಗ್ಯವಾಗಿವೆ ಎಂದು ಅವರು ಹೇಳಿದರು.

ಕಾಳೇಶ್ವರಂ ಯೋಜನೆಗೆ ತೆಗೆದುಕೊಂಡ ಸಾಲದ ಅಸಲು, ಬಡ್ಡಿ ಪಾವತಿಗಾಗಿ ಸರ್ಕಾರ ಇದುವರೆಗೆ 49,835 ಕೋಟಿ ರೂ.ಗಳನ್ನು ಪಾವತಿಸಿದೆ ಎಂದು ಅವರು ಹೇಳಿದರು, ಒಟ್ಟು ಬಡ್ಡಿ ರೂ. 29,956 ಕೋಟಿ, ಪಾವತಿಸಿದ ಅಸಲು ಮೊತ್ತ ರೂ. 19,879 ಕೋಟಿ. ಕೇಂದ್ರ ಸರ್ಕಾರದೊಂದಿಗೆ ಮಾತುಕತೆ ನಡೆಸಿ 26,000 ಕೋಟಿಗೂ ಹೆಚ್ಚು ಸಾಲ ಪುನರ್ ರಚನೆಯನ್ನು ಪಡೆದುಕೊಂಡಿದ್ದೇನೆ ಎಂದು ಅವರು ಹೇಳಿದರು. ಈ ಯೋಜನೆಗಾಗಿ ಸಾಲಗಳನ್ನು ಬಿಆರ್‌ಎಸ್ ಸರ್ಕಾರವು ಅತಿಯಾದ ಬಡ್ಡಿದರದಲ್ಲಿ ಪಡೆದುಕೊಂಡಿದೆ ಎಂದು ಅವರು ಹೇಳಿದರು.

# ಆಶಾದಾಯಕ ರಿಪೋರ್ಟ್ ನಡುವೆ, ಹೀಗೊಂದು ಬಿಜೆಪಿಗೆ 'ಧರ್ಮ ಸಂಕಟ'

## ಹೆಚ್ಚು ಸೀಟ್ ಗೆದ್ದರೂ, ಬಿಜೆಪಿಗೆ ಹೆಚ್ಚಿದ ಧರ್ಮಸಂಕಟ, ಏನದು?, ಬಿಜೆಪಿಗೆ ಹೆಚ್ಚಿನ ಸ್ಥಾನ ಸಿಗುವ ಸಾಧ್ಯತೆಯ ಒಪಿನಿಯಲ್ ಪೋಲ್

**ಪಾಟ್ನಾ:** ಚುನಾವಣೆಯ ಹೊಸ್ತಿಲಲ್ಲಿ ಇರುವ ಬಿಹಾರದಲ್ಲಿ ಸಾಕಷ್ಟು ರಾಜಕೀಯ ಬೆಳವಣಿಗೆಗಳು ಕ್ಷಿಪ್ರಗತಿಯಲ್ಲಿ ನಡೆಯುತ್ತಿದೆ. ಮುಂಬರುವ ನವೆಂಬರ್ ತಿಂಗಳೊಳಗೆ ಅಲ್ಲಿ ಚುನಾವಣೆ ನಡೆಯಬೇಕಿದೆ. ಹಾಲೀ ವಿಧಾನಸಭೆಯ ಅವಧಿ ನವೆಂಬರ್ ಹದಿನಾರಕ್ಕೆ ಮುಕ್ತಾಯಗೊಳ್ಳಲಿದೆ. ಬಿಹಾರದಲ್ಲಿ ರಾಹುಲ್ ಗಾಂಧಿ, ತೇಜಸ್ವಿ ಯಾದವ್ ನೇತೃತ್ವದ ವೋಟರ್ ಅಧಿಕಾರ್ ಯಾತ್ರೆ ನಡೆಯುತ್ತಿದೆ. ಇದಕ್ಕೆ, ಜನಸ್ಪಂದನೆಯೂ ಉತ್ತಮವಾಗಿ ವ್ಯಕ್ತವಾಗುತ್ತಿದೆ. ಆದರೆ, ಈಗ ಹೊರಬಿದ್ದಿರುವ ಸಮೀಕ್ಷೆಯೊಂದರ ಪ್ರಕಾರ, ವೋಟ್ ಚೋರಿ ಆರೋಪಕ್ಕೆ ಮತದಾರ ಅಷ್ಟು ಸೊಪ್ಪು ಹಾಕಿದಂತಿಲ್ಲ. ಒಂದು ಕಡೆ, ಎನ್‌ಡಿಎ ಮೈತ್ರಿಕೂಟ ಅಧಿಕಾರವನ್ನು ಉಳಿಸಿಕೊಳ್ಳಲು ಪ್ರಯತ್ನವನ್ನು ಮಾಡುತ್ತಿದೆ.

ಅದಕ್ಕಾಗಿ, ಈಗಿಂದಲೇ ಬಿಜೆಪಿ- ಜೆಡಿಯು - ಲೋಕಜನಶಕ್ತಿ ಪಾರ್ಟಿ ಸೀಟು ಹೊಂದಾಣಿಕೆಯ ಮಾತುಕತೆಯಲ್ಲಿ ತೊಡಗಿಸಿಕೊಂಡಿದೆ. ಇನ್ನೊಂದು ಕಡೆ, ಮಹಾ ಘಟಬಂಧನ್ ಕೂಡಾ, ಮತ್ತೆ ಬಿಹಾರದಲ್ಲಿ ಸರ್ಕಾರ ನಡೆಸಬೇಕು ಎನ್ನುವ ಛಲ ಹೊತ್ತು ಹೊರಟಿದೆ. ಟೈಮ್ಸ್‌ನೌ ಜೆವಿಸಿ ಜಂಟಿಯಾಗಿ ಸಮೀಕ್ಷೆಯೊಂದನ್ನು ನಡೆಸಿದೆ. ಸಮೀಕ್ಷೆಯ ಫಲಿತಾಂಶ ಆಶಾದಾಯಕವಿದ್ದರೂ, ಬಿಜೆಪಿಗೆ ಇಲ್ಲಿ ತಲೆನೋವು ಹೆಚ್ಚಾಗಿದೆ. ಅದೇನಂದರೆ, ಬಿಜೆಪಿಯ ಮಿತ್ರ ಪಕ್ಷವಾದ ಜೆಡಿಯು, ನಿರೀಕ್ಷಿತ ಪ್ರಮಾಣದಲ್ಲಿ ಸೀಟ್ ಗೆಲ್ಲಲು ಸಾಧ್ಯವಾಗದೇ



**81 ಸೀಟ್ ಗೆಲ್ಲುವ ಸಾಧ್ಯತೆ**

ಇರುವುದು. ಬಿಹಾರದಲ್ಲಿ ಮತ್ತೆ ಎನ್‌ಡಿಎ ಮೈತ್ರಿಕೂಟ ಅಧಿಕಾರವನ್ನು ಉಳಿಸಿಕೊಳ್ಳಲಿದೆ, ಅಂದರೆ ಮತ್ತೆ ಸಮ್ಮಿಶ್ರ ಸರ್ಕಾರ ರಚಿಸುವ ಸಾಧ್ಯತೆಯಿದೆ.

ಟೈಮ್ಸ್‌ನೌ, ಸಮೀಕ್ಷೆಯ ಪ್ರಕಾರ, ಎನ್‌ಡಿಎ ಮೈತ್ರಿಕೂಟ 243 ಸೀಟುಗಳ ಪೈಕಿ, 136 ಸ್ಥಾನವನ್ನು ಗೆಲ್ಲಲಿದೆ. ಇನ್ನೊಂದು ಕಡೆ, ತೇಜಸ್ವಿ ಯಾದವ್ ನೇತೃತ್ವದ ಮಹಾಘಟ ಬಂಧನ್ 75 ಸ್ಥಾನಗಳಿಗೆ ಸೀಮಿತವಾಗಬಹುದು ಎಂದು ಸಮೀಕ್ಷೆಯಲ್ಲಿ ಹೇಳಲಾಗಿದೆ. ಸರಳ ಬಹುಮತಕ್ಕೆ 122 ಸ್ಥಾನ ಗೆಲ್ಲಲಿದೆ. ಕಳೆದ ಬಾರಿಯ ಅಂದರೆ 2020ರ ಅಸೆಂಬ್ಲಿ ಚುನಾವಣೆಯಲ್ಲಿ ಬಿಜೆಪಿ, 74 ಸ್ಥಾನವನ್ನು ಗೆದ್ದಿತ್ತು. ಸಮೀಕ್ಷೆಯ ಪ್ರಕಾರ, ಈ ಬಾರಿ ಅದು 81 ಸೀಟ್ ಗೆಲ್ಲುವ ಸಾಧ್ಯತೆಯಿದೆ.

ಆದರೆ, ಕಳೆದ ಬಾರಿ 43 ಸ್ಥಾನ ಗೆದ್ದಿದ್ದ ನಿತೀಶ್ ಕುಮಾರ್ ಅವರ ಜೆಡಿಯು ಈ ಬಾರಿ ಕೇವಲ 29 ಸೀಟ್ ಮಾತ್ರ ಗೆಲ್ಲಲಿದೆ ಎಂದು ಸಮೀಕ್ಷೆಯಲ್ಲಿ ಹೇಳಲಾಗಿದೆ. ಈ ಸಮೀಕ್ಷೆ, ನಿಜವಾದಲ್ಲಿ, ಜೆಡಿಯು ದುರ್ಬಲಗೊಳ್ಳುತ್ತಾ ಸಾಗುತ್ತಿದೆ ಎನ್ನುವುದಕ್ಕೆ ಉದಾಹರಣೆಯಾಗಬಲ್ಲದು. ಕಳೆದ ಚುನಾವಣೆಯಲ್ಲಿ 75 ಸ್ಥಾನವನ್ನು ಗೆಲ್ಲುವ ಮೂಲಕ RJD ದೊಡ್ಡ ಪಾರ್ಟಿಯಾಗಿ ಹೊರಹೊಮ್ಮಿತ್ತು.

ಸಮೀಕ್ಷೆಯ ಪ್ರಕಾರ, ತೇಜಸ್ವಿ ಯಾದವ್ ಅವರ ಪಾರ್ಟಿ, 52 ಸ್ಥಾನವನ್ನು ಗೆಲ್ಲಬಹುದು. ಇನ್ನು, ಹತ್ತೊಂಬತ್ತು ಸ್ಥಾನವನ್ನು ಗೆದ್ದಿದ್ದ ಕಾಂಗ್ರೆಸ್ ಹತ್ತು ಸ್ಥಾನವನ್ನು ಗೆಲ್ಲಬಹುದು ಎಂದು ಸಮೀಕ್ಷೆಯಲ್ಲಿ ಹೇಳಲಾಗಿದೆ. ಸಮೀಕ್ಷೆಯಲ್ಲಿ ಒಟ್ಟಾರೆಯಾಗಿ ಗಮನಿಸಬೇಕಾದ ಅಂಶವೇನಂದರೆ, ಜೆಡಿಯು ದುರ್ಬಲಗೊಳ್ಳುತ್ತಿರುವುದು ಒಂದು ಕಡೆ. ಇನ್ನೊಂದು ಕಡೆ, ನಿತೀಶ್ ಕುಮಾರ್ ಅವರು ಜನಪ್ರಿಯ ಮುಖ್ಯಮಂತ್ರಿಯಾಗಿ ಉಳಿದಿಲ್ಲ. ಇದುವೇ, ಬಿಜೆಪಿಗೆ ಆತಂಕಕ್ಕೆ ಕಾರಣವಾಗಿರುವುದು.

ಯಾಕೆಂದರೆ, ಪ್ರಸಕ್ತವೇ, ಹೆಚ್ಚು ಸ್ಥಾನ ಗೆದ್ದಿದ್ದರೂ, ಬಿಜೆಪಿ ಸಿಎಂ ಹುದ್ದೆಯ ತ್ಯಾಗವನ್ನು ಮಾಡಿತ್ತು. ಇನ್ನು, ಈ ಬಾರಿ ಮತ್ತೆ ಸೀಟ್ ಕಮ್ಮಿ ಬಂದರೆ, ಅವರನ್ನು ಸಿಎಂ ಅಭ್ಯರ್ಥಿ ಎಂದು ಗುರುತಿಸುವುದು ಬಿಜೆಪಿಗೆ ಉಭಯ ಸಂಕಟವಾಗಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

**ಬಿಜೆಪಿಯ ಟೆನ್ಸನ್ ಹೆಚ್ಚಾಗಲು ಕಾರಣ**

**ಬಿಹಾರದಲ್ಲಿ ಮುಂಬರುವ ನವೆಂಬರ್ ತಿಂಗಳೊಳಗೆ ಚುನಾವಣೆ ನಡೆಯಬೇಕಿದೆ. ಈ ಹಿನ್ನಲೆಯಲ್ಲಿ ಖ್ಯಾತ ಸಂಸ್ಥೆಯೊಂದು ನಡೆಸಿದ ಸಮೀಕ್ಷೆಯ ಪ್ರಕಾರ, ಬಿಜೆಪಿ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನವನ್ನು ಗಳಿಸಲಿದೆ. ಆದರೆ, ನಿತೀಶ್ ಕುಮಾರ್ ಅವರ ಪಾರ್ಟಿಗೆ ಹೆಚ್ಚಿನ ಸೀಟ್ ಸಿಗುವ ಸಾಧ್ಯತೆ ಕಮ್ಮಿ, ಇದು ಬಿಜೆಪಿಯ ಟೆನ್ಸನ್ ಹೆಚ್ಚಾಗಲು ಕಾರಣವಾಗಿದೆ.**

**ತೇಜಸ್ವಿ ಯಾದವ್ ಪಾರ್ಟಿಗೆ ಅನುಕೂಲ**

**ಇನ್ನು, ಪ್ರಶಾಂತ್ ಕಿಶೋರ್ ಅವರ ಜನ್ ಸೂರಜ್ ಪಾರ್ಟಿ ಎರಡು, ಎಐಎಂಐಎಂ ಮೂರು, ಬಹುಜನ ಸಮಾಜ ಪಾರ್ಟಿ ಒಂದು ಸ್ಥಾನವನ್ನು ಗೆಲ್ಲಬಹುದು ಎಂದು ಸಮೀಕ್ಷೆಯಲ್ಲಿ ಉಲ್ಲೇಖವಾಗಿದೆ. ಸೀಮಾಂಚಲ ಪ್ರದೇಶದಲ್ಲಿ ಮುಸ್ಲಿಮರ ಪ್ರಾಬಲ್ಯ ಹೆಚ್ಚಿರುವುದರಿಂದ, ಅದು ಓವೈಸಿ, ತೇಜಸ್ವಿ ಯಾದವ್ ಪಾರ್ಟಿಗೆ ಅನುಕೂಲವಾಗಬಹುದು.**

# ಮಿನಿ ನ್ಯೂಸ್

## ಹಣೆಗೆ ತಿಲಕ ಧರಿಸಿ ತರಗತಿಗೆ ಬರದಂತೆ ಪ್ರಾಶುಂಪಾಲ ಸುತ್ತೋಲೆ

**ಲಖ್ನೋ:** ವಿದ್ಯಾರ್ಥಿಗಳು ಹಣೆಗೆ ತಿಲಕ ಹಾಕಿಕೊಂಡು ತರಗತಿಗೆ ಬರಬಾರದೆಂದು ಸುತ್ತೋಲೆ ಹೊರಡಿಸಿದ ಶಾಲೆಯ ಪ್ರಾಶುಂಪಾಲರ ಕ್ರಮಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿ ಪೋಷಕರು ಮತ್ತು ಬಲಪಂಥೀಯ ಸಂಘಟನೆಗಳ ಸದಸ್ಯರಿಂದ ಪ್ರತಿಭಟನೆ ನಡೆಸಲಾಗಿದೆ. ತರಗತಿ ಕೋಣೆಗಳಿಗೆ ಪ್ರವೇಶಿಸುವ ಮೊದಲು ತಿಲಕ, ಕಲವಾವನ್ನು ತೆಗೆದುಹಾಕುವಂತೆ ಸೂಚಿಸಿರುವುದನ್ನು ಮಕ್ಕಳು ಪೋಷಕರಿಗೆ ತಿಳಿಸಿದಾಗ ವಿಷಯವು ಹಿಂದೂಪರ ಸಂಘಟನೆಗಳಿಗೆ ತಲುಪಿದೆ. ಹಿಂದೂ ಜಾಗರಣ್ ಮಂಚ್‌ನ ಕಾರ್ಯಕರ್ತರೊಂದಿಗೆ ಆಗಮಿಸಿದ ಹಲವಾರು ಪೋಷಕರು ಶಾಲೆಯ ಹೊರಗೆ ಪ್ರತಿಭಟನೆ ನಡೆಸಿದ್ದಾರೆ. ಸಂಘಟನೆಯ ಸ್ಥಳೀಯ ಸಂಯೋಜಕ ರವೀಂದರ್ ಶರ್ಮಾ, ವಿದ್ಯಾರ್ಥಿಗಳನ್ನು ಧಾರ್ಮಿಕ ಚಿಹ್ನೆಗಳನ್ನು ತೆಗೆದುಹಾಕಲು ಒತ್ತಾಯಿಸಲಾಗಿದೆ ಎಂದು ಆರೋಪಿಸಿದ್ದು, ಇದು ಪೋಷಕರನ್ನು ಅಸಮಾಧಾನಗೊಳಿಸಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ತಾರಕಕ್ಕೇರುತ್ತಿರುವಮತೆ ಪ್ರಾಂಶುಪಾಲರು ತಮ್ಮ ತಪ್ಪನ್ನು ಒಪ್ಪಿಕೊಂಡು, ಕ್ಷಮೆಯಾಚಿಸಿದ್ದು, ಇದು ಮತ್ತೆ ಸಂಭವಿಸುವುದಿಲ್ಲ ಎಂದು ನಮಗೆ ಭರವಸೆ ನೀಡಿದ್ದಾರೆ. ಆದಾಗ್ಯೂ ಇಂಥ ಸಂದರ್ಭಗಳಲ್ಲಿ ಶಿಕ್ಷಣ ಇಲಾಖೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು.

## ಇಬ್ಬರು ಧರ್ಮನಿಂದಕರ ಬಂಧನ

**ಜಮ್ಮು:** ಪೂಂಚ್ ಜಿಲ್ಲೆಯ ಕುನಿಯಾನ್ ಪ್ರದೇಶದಲ್ಲಿ ನಡೆದ ಧರ್ಮನಿಂದನೆಯ ಕೃತ್ಯದಲ್ಲಿ ಭಾಗಿಯಾಗಿದ್ದಕ್ಕಾಗಿ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಕೃತ್ಯ ಎಸಗಲು ಬಳಸಿದ ವಾಹನವನ್ನು ಸಹ ಪೊಲೀಸರು ವಶಪಡಿಸಿ ಕೊಂಡಿದ್ದಾರೆ ಎಂದು ಪೊಲೀಸ್ ವಕ್ತಾರರು ತಿಳಿಸಿದ್ದಾರೆ. ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಉದ್ದೇಶದಿಂದ ಉದ್ದೇಶಪೂರ್ವಕ ಮತ್ತು ದುರುದ್ದೇಶಪೂರಿತ ಕೃತ್ಯಗಳನ್ನು ಎಸಗುವ ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ಸೆಕ್ಷನ್ 299 ರ ಅಡಿಯಲ್ಲಿ ಇಬ್ಬರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಇತರ ಆರೋಪಿಗಳನ್ನು ಬಂಧಿಸಲು ಶೋಧ ಕಾರ್ಯ ನಡೆಯುತ್ತಿದೆ ಎಂದು ವಕ್ತಾರರು ತಿಳಿಸಿದ್ದಾರೆ.

## ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ 51.50 ರೂ. ಇಳಿಕೆ

**ನವದೆಹಲಿ:** ದೇಶೀಯ ತೈಲ ಕಂಪನಿಗಳು ವಾಣಿಜ್ಯ ಬಳಕೆ 19 ಕೆಜಿ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯಲ್ಲಿ 51.50 ರೂ. ಇಳಿಕೆ ಮಾಡಿವೆ. ಇಂದಿನಿಂದಲೆ ಇದು ಜಾರಿಯಾಗಿದ್ದು,ಇದರಿಂದ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು ಮತ್ತು ಆಹಾರೋದ್ಯಮಗಳಿಗೆ ಸ್ವಲ್ಪ ಮಟ್ಟಿಗೆ ಪರಿಹಾರ ಸಿಕ್ಕಂತಾಗಿದೆ. ಪರಿಷ್ಕೃತ ಬೆಲೆಯ ಪ್ರಕಾರ, ದೆಹಲಿಯಲ್ಲಿ 19 ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ನ ಚಿಲ್ಲರೆ ಮಾರಾಟ ಬೆಲೆ ಈಗ 1,580 ರೂ. ಆಗಿದ್ದು, ಜಾಗತಿಕ ಇಂಧನ ದರ ಲೆಕ್ಕಾಚಾರ ಮಾಡಿ ನಿಯಮಿತ ಮಾಸಿಕ ಪರಿಷ್ಕರಣೆಗಳ ಭಾಗವಾಗಿ ಈ ದರ ಇಳಿಕೆ ಕಡಿತ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಇನ್ನ ಬೆಂಗಳೂರಿನಲ್ಲೂ 51.50 ರೂ. ಇಳಿಕೆಯೊಂದಿಗೆ ಪ್ರತಿ ಸಿಲೆಂಡರ್ ಬಲೆ 1,653 ರೂ ಇಳಿದಿದೆ ಇದರಿಂದ ನಗರ ಕೇಂದ್ರಗಳಲ್ಲಿ ಕಾರ್ಯಾಚರಣೆಯ ವೆಚ್ಚವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಲಿದೆ ಎಂದು ಉದ್ಯಮಿಗಳು ಅಭಿಪ್ರಾಯಪಟ್ಟಿದ್ದಾರೆ. ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆ ಈಗಿರುವ 855.50 ರೂ. ಮುಂದುವರಿದಿದೆ. ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ 5 ಕೆಜಿಗೆ 318.50 ರೂ.ಸಿಗುತ್ತಿದೆ.

## ಪೊಲೀಸ್ ಠಾಣೆಯ ಶೌಚಾಲಯದಲ್ಲಿ ನೇಣಿಗೆ ಶರಣಾದ ಆರೋಪಿ

**ಹರ್ದೋಯ್:** ಉತ್ತರ ಪ್ರದೇಶದ ಹರ್ದೋಯ್ ಜಿಲ್ಲೆಯ ಶಹಾಬಾದ್ ಪೊಲೀಸ್ ಠಾಣೆಯ ಶೌಚಾಲಯದಲ್ಲಿ ಬಾಲಕಿ ಅಪಹರಣದ ಆರೋಪಿ ನೇಣಿಗೆ ಶರಣಾಗಿದ್ದಾನೆ .ಇತ್ತೀಚೆಗೆ 16 ವರ್ಷದ ಬಾಲಕಿಯೊಂದಿಗೆ ಪಾರಿಯಾಗಿದ್ದ ಆರೋಪದ ಮೇಲೆ ವಶಕ್ಕೆ ಪಡೆಯಲಾಗಿದ್ದ ರವಿ ರಜಪೂತ್ (20)ಮೃತ ಯುವಕ. ಸಾವಿನ ಬಗ್ಗೆ ತನಿಖೆ ಆರಂಭಿಸಲಾಗಿದೆ ಎಂದು ಎಸ್‌ಪಿ ನೀರಜ್ ಜದೌನ್ ಹೇಳಿದ್ದಾರೆ.

ಪೊಲೀಸ್ ಠಾಣೆಯೊಳಗಿನ ಶೌಚಾಲಯದಲ್ಲಿ ರಜಪೂತ್ ನೇಣು ಬಿಗಿದುಕೊಂಡಿದ್ದು , ತಕ್ಷಣ ಆತನನ್ನು ಹಾಬಾದ್ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಲಾಯಿತು, ಅಲ್ಲಿ ವೈದ್ಯರು ಅತ ಮೃತಪಟ್ಟಿದ್ದಾನೆ ಎಂದು ಘೋಷಿಸಿದ್ದಾರೆ ಎಂದು ತಿಳಿಸಿದ್ದಾರೆ. ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ರಜಪೂತ್‌ನ ಕುಟುಂಬ, ಸಂಬಂಧಿಕರು ಪೊಲೀಸ್ ಠಾಣೆಗೆ ಧಾವಿಸಿ ಲಾಕಪ್ ಡೆತ್ ಎಂದು ಆರೋಪಿಸಿದ್ದಾರೆ ಘಟನೆಯ ಕುರಿತ್ತುತನಿಖೆ ಮಾಡಲಾಗುತ್ತಿದೆ, ತನಿಖೆಯ ನಂತರ ನಿಖರವಾದ ಸಂದರ್ಭಗಳು ಸ್ಪಷ್ಟವಾಗುತ್ತವೆ ಎಂದು ಜದೌನ್ ಹೇಳಿದರು.

## ಲವ್ ಜಿಹಾದ್ : ಬಾಲಕಿಯರನ್ನು ಪ್ರತಿ ಬಲೆ ಬೀಳಿಸಿ ದೌರ್ಜನ್ಯ ನಡೆಸುತ್ತಿದ್ದ ಆರೋಪಿಗಳಿಬ್ಬರಿಗೆ ಗುಂಡೇಟು

**ಕುಶಿನಗರ:** ಶಾಲಾ ವಿದ್ಯಾರ್ಥಿನಿಯರಿಗೆ ಕಿರುಕುಳ ನೀಡಿದ್ದ ಇಬ್ಬರು ಪುಂಡಿಗೆ ಪೊಲೀಸರು ಗುಂಡಿನ ರುಚಿ ತೋರಿಸಿ ಬಂಧಿಸಿದ್ದಾರೆ. ಉತ್ತರ ಪ್ರದೇಶದ ಮೊರಾವನ್ ಬರ್ಕಾ ಟೋಲಾ ಗ್ರಾಮದ ಮೂಲದವರಾಗಿದ್ದು, ಅಸ್ಲಂ, ಜುಲ್ಫಿಕರ್ ಬಂಧಿತ ಆರೋಪಿಗಳು, ಲವ್ ಜಿಹಾದ್ ಪ್ರೇರೆಪಿಸಿ ಈ ಆರೋಪಿಗಳನ್ನು ಬಾಲಕಿಯರನ್ನು ಪ್ರತಿ ಬಲೆ ಬೀಳಿಸಿ ದೌರ್ಜನ್ಯ ನಡೆಸುತ್ತಿದ್ದರು ಇದಕ್ಕೆ ಇವರಿಗೆ ತಲಾ 25,000 ರೂ. ನೀಡಲಾಗುತ್ತಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ದೂರು ದಾಖಲಾದ ನಂತರ ರಾಮ್ಕೋಲಾ ಠಾಣೆ ಪೊಲೀಸರು ಆರೋಪಿಗಳ ಬಂಧನಕ್ಕೆ ಕಾರ್ಯಾಚರಣೆ ನಡೆಸಿದಾಗ ನಮ್ಮ ಮೇಲೆ ಗುಂಡು ಹಾರಿಸಲಾಯಿತು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಂತೋಷ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ. ಕುಸುಮಹಾ ಸೇತುವೆಯ ಬಳಿ ಮುಂಜಾನೆ 4 ಗಂಟೆ ಸುಮಾರಿಗೆ ನಾಕಾಬಂಧಿ ವೇಳೆ ವಾಹನ ತಪಾಸಣೆ ನಡೆಸುತ್ತಿದ್ದಾಗ ಆರೋಪಿಗಳು ಪೊಲೀಸರ ಮೇಲೆ ಗುಂಡು ಹಾರಿಸಿದರು. ಪೊಲೀಸರು ಪ್ರತಿಯಾಗಿ ಗುಂಡು ಹಾರಿಸಿದಾಗ ಇಬ್ಬರೂ ಆರೋಪಿಗಳು ಗಾಯಗೊಂಡರು ಎಂದು ಮಾಹಿತಿ ನೀಡಿದ್ದಾರೆ.

ಎರಡು ದೇಶೀಯ ನಿರ್ಮಿತ ಪಿಸ್ತೂಲ್‌ಗಳು, ಮದ್ದುಗುಂಡುಗಳು, ನಂಬರ್ ಪ್ಲೇಟ್ ಇಲ್ಲದ ಮೋಟಾರ್‌ಸೈಕಲ್ ಮತ್ತು 1,100 ರೂ. ನಗದು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳು ಶಾಲೆಗಳ ಬಳಿ ಹುಡುಗಿಯರಿಗೆ ಆಮಿಷವೊಡ್ಡುತ್ತಿದ್ದರು ಅಲ್ಲದೆ ಇವರು ಹಿಂದೂಗಳಂತೆ ನಟಿಸುತ್ತಿದ್ದಾರೆ ಎಂದು ಮಿಶ್ರಾ ಹೇಳಿದರು.ಇಬ್ಬರ ವಿರುದ್ಧ ವಿವಿಧ ಪ್ರಕರಣಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಅವರನ್ನು ಪತ್ತೆಹಚ್ಚಲು ನಾಲ್ಕು ತಂಡಗಳನ್ನು ರಚಿಸಲಾಗಿತ್ತು ಎಂದು ಅಧಿಕಾರಿ ಹೇಳಿದರು.



# ಹೇಗಿದೆ ಕನ್ನಡದ 'ಶೋಧ' ವೆಬ್ ಸರಣಿ ಏನಿದೆ ಟ್ವಿಸ್ಟ್

ಪರಭಾಷೆಯವರು ವೆಬ್ ಸರಣಿ ನಿರ್ಮಾಣದಲ್ಲಿ ತುಂಬಾನೇ ಮುಂದೆ ಹೋಗಿವೆ. ಕನ್ನಡದಲ್ಲಿ ಈ ರೀತಿಯ ಕಂಟೆಂಟ್‌ಗಳು ಕಡಿಮೆ. ಈಗ ಜೀ5ನಲ್ಲಿ ವೆಬ್ ಸರಣಿಗಳು ಬಿಡುಗಡೆ ಆಗುತ್ತಿವೆ. 'ಅಯ್ಯನಮನೆ' ಬಳಿಕ 'ಶೋಧ' ಸರಣಿ ಬಿಡುಗಡೆ ಕಂಡಿದೆ. ಈ ವೆಬ್ ಸೀರಿಸ್‌ನ ಸುನಿಲ್ ಮೈಸೂರು ನಿರ್ದೇಶನ ಮಾಡಿದರೆ ಪವನ್ ಕುಮಾರ್ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇದನ್ನು ಕೆಆರ್‌ಜಿ ಸ್ಟುಡಿಯೋ ನಿರ್ಮಾಣ ಮಾಡಿದೆ. ಆ ಸರಣಿ ಬಗ್ಗೆ ಇಲ್ಲಿದೆ ವಿವರ.

ರೋಹಿತ್ ಓರ್ವ ಅತ್ಯುತ್ತಮ ವಕೀಲ. ಪ್ರಕರಣವನ್ನು ಯಾವ ರೀತಿಯಲ್ಲಿ ತಿರುಚಬೇಕು ಎಂಬುದರ ವಿಚಾರ ಆತನಿಗೆ ಗೊತ್ತಿದೆ. ಈತ ತನ್ನ ಬರ್ತ್‌ಡೇಗಾಗಿ ಮಡಿಕೇರಿಗೆ ಬರುತ್ತಾನೆ. ಅಲ್ಲಿ ಪತ್ನಿ ಕಾಣೆ ಆಗುತ್ತಾಳೆ. ಪೊಲೀಸರ (ಅರುಣ್ ಸಾಗರ್) ಬಳಿ ದೂರು ಕೂಡ ನೀಡುತ್ತಾನೆ. ಹೀಗಿರುವಾಗಲೇ ಅವನಿಗೆ ಅಪಘಾತ ಆಗುತ್ತದೆ. ಆಗ ಪತ್ನಿ (ಸಿರಿ ರವಿಕುಮಾರ್) ಬರುತ್ತಾಳೆ. ಆದರೆ, ಆಕೆ ತನ್ನ ಪತ್ನಿಯೇ ಅಲ್ಲ ಎನ್ನುತ್ತಾನೆ ರೋಹಿತ್.




ನಿಜಕ್ಕೂ ರೋಹಿತ್‌ನ ಪತ್ನಿ ಅವಳಲ್ಲವಾ ಅವಳ ಹಿನ್ನೆಲೆ ಎನು ರೋಹಿತ್ ಯಾರು ಎಂಬಿತ್ಯಾದಿ ವಿಚಾರಗಳು ಹಂತ ಹಂತ ರೀತಿಯಲ್ಲಿ ತೆರೆದುಕೊಳ್ಳುತ್ತಾ ಹೋಗುತ್ತವೆ.

'ಶೋಧ' ಸರಣಿಯಲ್ಲಿ ಹಲವು ಟ್ವಿಸ್ಟ್‌ಗಳಿವೆ. ಕೆಲವು ಟ್ವಿಸ್ಟ್‌ಗಳು ಊಹಿಸಬಹುದಾಗಿದೆ. ಇನ್ನೂ ಕೆಲವು ಟ್ವಿಸ್ಟ್‌ಗಳು ಸರ್‌ಪ್ರೈಸ್ ನೀಡುತ್ತವೆ. ಮೊದಲ ಎರಡು ಎಪಿಸೋಡ್‌ಗಳು ನಾರ್ಮಲ್ ಆಗಿ ಸಾಗಿದರೆ, ಮೂರನೇ ಎಪಿಸೋಡ್‌ನಲ್ಲಿ ದೊಡ್ಡದೊಂದು ಟ್ವಿಸ್ಟ್ ತೆರೆದುಕೊಳ್ಳುತ್ತದೆ. ಅಲ್ಲಿಂದ, ಕಥೆ ಬೇರೆಯದೇ ರೀತಿಯಲ್ಲಿ ಸಾಗುತ್ತದೆ. ಕೊನೆಯ ಎಪಿಸೋಡ್‌ನಲ್ಲಿ ಎಲ್ಲಾ ಕುತೂಹಲಕ್ಕೆ ತೆರೆ ಬೀಳುತ್ತದೆ.



'ಶೋಧ' ಸರಣಿ ನೋಡಿದ ಅನೇಕರು ಸೋಶಿಯಲ್ ಮೀಡಿಯಾ ಮೂಲಕ ಪ್ರತಿಕ್ರಿಯಿಸಿದ್ದಾರೆ. ಈ ಸರಣಿಯಲ್ಲಿ ಪವನ್ ಕುಮಾರ್ ಪಾತ್ರ ತುಂಬಾನೇ ಹೈಲೈಟ್. ಅವರ ಬುದ್ಧಿವಂತಿಕೆಯನ್ನು ಅನೇಕರು 'ಮನಿ ಹೇಸ್ಟ್'ನ ಪ್ರೊಫೆಸರ್‌ಗೆ ಹೋಲಿಕೆ ಮಾಡಿದ್ದಾರೆ. ಇನ್ನೂ ಕೆಲವರು ಸರಣಿ ಇಷ್ಟ ಆಗಿಲ್ಲ ಎಂದಿದ್ದಾರೆ.

'ಶೋಧ' ಸರಣಿ ಎವರೇಜ್ ಆಗಿದೆ ಎಂದಿದ್ದಾರೆ. ಇನ್ನು, ಕೆಲವರು ಡೈಲಾಗ್ ಬಗ್ಗೆ ಅಪಸ್ವರ ತೆಗೆದಿದ್ದಾರೆ. 'ನ, ಣ, ಲ,ಳ' ಉಚ್ಚಾರಣೆ ಬಗ್ಗೆ ನಿರ್ದೇಶಕರು ಹೆಚ್ಚು ಗಮನ ಹರಿಸಿಲ್ಲ ಎಂದು ಕೆಲವರು ಹೇಳಿದ್ದಾರೆ.



# ಐಶ್ವರ್ಯಾ ಮಗಳು ತಪ್ಪು ಕಂಡು ಹಿಡಿಯೋದೇ ಇವರ ಕೆಲಸ

ಸಾಮಾಜಿಕ ಮಾಧ್ಯಮದಲ್ಲಿ ವೈರಲ್

ಐಶ್ವರ್ಯಾ ರೈ ಬಚ್ಚನ್ ಮತ್ತು ಅವರ ಮಗಳು ಆರಾಧ್ಯಾ ಬಚ್ಚನ್ ಗಣಪತಿ ದರ್ಶನಕ್ಕೆ ಭೇಟಿ ನೀಡಿದ್ದು ವೈರಲ್ ಆಗಿದೆ. ಆರಾಧ್ಯಾ ಅವರ ಲುಕ್ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ವಿವಿಧ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. ಅನೇಕರು ಆರಾಧ್ಯಾ ಅವರನ್ನು ಟೀಕೆ ಮಾಡಿದ್ದಾರೆ. ಇದು ಸರಿಯಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಬಾಲಿವುಡ್ ನಟಿ ಐಶ್ವರ್ಯಾ ರೈ ಪ್ರತಿ ವರ್ಷ ಮುಂಬೈನ ಜಿಎಸ್‌ಬಿ ಗಣಪತಿ ದರ್ಶನಕ್ಕೆ ಹೋಗುತ್ತಾರೆ. ಈ ವರ್ಷ ಐಶ್ವರ್ಯಾ ಅವರು ಮಗಳು ಆರಾಧ್ಯಾ ಬಚ್ಚನ್ ಜೊತೆ ತೆರಳಿ ಗಣಪತಿಯ ದರ್ಶನ ಪಡೆದರು. ಐಶ್ವರ್ಯಾ ಮತ್ತು ಆರಾಧ್ಯಾ ಅವರ ಫೋಟೋಗಳು ಮತ್ತು ವಿಡಿಯೋಗಳು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿವೆ. ಈ ಬಾರಿ, ಆರಾಧ್ಯಾ ಅವರನ್ನು ನೋಡಿದ ನಂತರ, ನೆಟ್ಟಿಗರು ಅನೇಕ ಪ್ರಶ್ನೆಗಳನ್ನು ಎತ್ತಿದ್ದಾರೆ. ಆರಾಧ್ಯಾ ಮತ್ತು ಐಶ್ವರ್ಯಾ ಅವರ ವಿಡಿಯೋಗೆ ಅನೇಕ ನೆಟ್ಟಿಗರು ಕಾಮೆಂಟ್ ಮಾಡಿ ಪ್ರತಿಕ್ರಿಯಿಸಿದ್ದಾರೆ. ವಿಡಿಯೋದಲ್ಲಿ, ಐಶ್ವರ್ಯಾ ರೈ ಬಚ್ಚನ್ ಮತ್ತು ಆರಾಧ್ಯಾ ಬಚ್ಚನ್ ಗಣೇಶನ ಆಶೀರ್ವಾದ ಪಡೆಯಲು ಭಕ್ತರ ಗುಂಪಿನ ಮೂಲಕ ನಡೆದುಕೊಂಡು ಹೋಗುತ್ತಿರುವುದು ಕಂಡುಬರುತ್ತದೆ. ಮಂಡಲವನ್ನು ಪ್ರವೇಶಿಸುವ ಮೊದಲು, ಇಬ್ಬರೂ ಅಭಿಮಾನಿಗಳೊಂದಿಗೆ ಸೆಲ್ಫಿ ತೆಗೆದುಕೊಳ್ಳಲು ನಿಂತರು. ಐಶ್ವರ್ಯಾ ಮತ್ತು ಆರಾಧ್ಯ ಅವರನ್ನು ನೋಡಲು ಅಭಿಮಾನಿಗಳ ದೊಡ್ಡ ಗುಂಪು ನೆರೆದಿತ್ತು. 'ಆರಾಧ್ಯಗೆ ಏನಾಗಿದೆ ಅವಳು ಏಕೆ ವಿಚಿತ್ರವಾಗಿ ಕಾಣುತ್ತಾಳೆ' ಎಂದು ಕೆಲವರು ಕೇಳಿದ್ದಾರೆ. 'ತಾಯಿ ಮತ್ತು ಮಗಳು ಇಬ್ಬರೂ ತಮ್ಮ ಹೇರ್ ಸ್ಟೈಲ್ ಬದಲಾಯಿಸಿಕೊಂಡಿದ್ದಾರೆ. ಇದಕ್ಕಾಗಿ ಬೇರೆ ರೀತಿ ಕಾಣುತ್ತಾರೆ' ಎಂದು ಕೆಲವರು ಹೇಳಿದ್ದಾರೆ. 'ಆರಾಧ್ಯಾ ತನ್ನ ತಾಯಿಯಂತೆ ಕಾಣುತ್ತಿಲ್ಲ' ಎಂದು ಕೆಲವರು ಹೇಳಿದ್ದಾರೆ.

# ಯಾವುದೇ ಸಿನಿಮಾ ಇದ್ರೂ ಸರಿ ನಮ್ಮ ಚಿತ್ರ ಕ್ರಿಸ್‌ಮಸ್‌ಗೆ ಬರೋದು ಪಕ್ಕಾ

ಕಿಚ್ಚ ಸುದೀಪ್ ಅವರ 'ಕೆ47' ಚಿತ್ರದ ಚಿತ್ರೀಕರಣ ಭರದಿಂದ ಸಾಗುತ್ತಿದೆ. ಸಿನಿಮಾ ಶೂಟ್ ಅಕ್ಟೋಬರ್‌ನಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ನವೆಂಬರ್‌ನಲ್ಲಿ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಆರಂಭವಾಗಲಿವೆ ಮತ್ತು ಚಿತ್ರವು ಕ್ರಿಸ್‌ಮಸ್‌ಗೆ ಬಿಡುಗಡೆಯಾಗಲಿದೆ. ಈ ಚಿತ್ರದ ಬಿಡುಗಡೆ ದಿನಾಂಕವು 'ಡೆವಿಲ್' ಮತ್ತು '45' ಚಿತ್ರದ ಜೊತೆ ಕ್ಲ್ಯಾಶ್ ಆಗಲಿದೆ. ಕಿಚ್ಚ ಸುದೀಪ್ ನಟನೆಯ 'ಕೆ47' ಸಿನಿಮಾದ ಶೂಟ್ ಜುಲೈನಲ್ಲಿ ಆರಂಭ ಆಗಿದೆ. ಈ ಸಿನಿಮಾದ ಕೆಲಸಗಳು ಭರದಿಂದ ಸಾಗುತ್ತಿವೆ. ಕೇವಲ ಆರು ತಿಂಗಳಲ್ಲಿ ಸಿನಿಮಾ ಕೆಲಸ ಮುಗಿಸಿ ಜನರ ಎದುರು ತಂದಿಡೋ ಪ್ಲ್ಯಾನ್ ಇದೆ ಎಂದು ಸುದೀಪ್ ಅವರು ಸಿನಿಮಾ ಘೋಷಿಸೋ ಸಮಯದಲ್ಲಿ ಹೇಳಿದ್ದರು. ಈಗಲೂ ತಮ್ಮ ಮಾತಿಗೆ ಬದ್ಧರಾಗಿರೋದಾಗಿ ಅವರು ಹೇಳಿದ್ದಾರೆ. ಹಾಗಾದಲ್ಲಿ, 'ಡೆವಿಲ್' ಹಾಗೂ '45' ಚಿತ್ರದ ಜೊತೆ ಈ ಸಿನಿಮಾ ಕ್ಲ್ಯಾಶ್ ಆಗಲಿದೆ. ಸೆಪ್ಟೆಂಬರ್ 2ರಂದು ಸುದೀಪ್ ಬರ್ತ್‌ಡೇ ಇದೆ. ಅದಕ್ಕೂ ಒಂದು ದಿನ ಮೊದಲು (ಸೆಪ್ಟೆಂಬರ್ 1) ಸೆಲೆಬ್ರೇಷನ್ ಮಾಡಲು ಸುದೀಪ್ ನಿರ್ಧರಿಸಿದ್ದಾರೆ. ಬೆಂಗಳೂರಿನ ನಂದಿ ಲಿಂಕ್ ಗ್ರೌಂಡ್ಸ್‌ನಲ್ಲಿ ರಾತ್ರಿ ಸೆಲೆಬ್ರೇಷನ್ ಇರಲಿದೆ. ಮಧ್ಯಾಹ್ನ ಸುದೀಪ್ ಅವರು ಬರ್ತ್‌ಡೇ ಬಗ್ಗೆ ಮಾಹಿತಿ ನೀಡಲು ಸುದ್ದಿಗೋಷ್ಠಿ ನಡೆಸಿದ್ದಾರೆ. ಈ ವೇಳೆ ಅವರು ಹಲವು ವಿಚಾರಗಳನ್ನು ಹಂಚಿಕೊಂಡರು. 'ಕೆ 47' ಬಗ್ಗೆಯೂ ಅಪ್‌ಡೇಟ್ ಕೊಟ್ಟರು. 'ನಾವು ವೇಗವಾಗಿ ಶೂಟಿಂಗ್ ಮಾಡುತ್ತಿದ್ದೇವೆ. ಈಗಾಗಲೇ ಸಿನಿಮಾದ 60ರಷ್ಟು ಶೂಟ್ ಪೂರ್ಣಗೊಂಡಿದೆ. ಅಕ್ಟೋಬರ್ ವೇಳೆಗೆ ಸಿನಿಮಾದ ಶೂಟ್ ಪೂರ್ಣಗೊಳ್ಳಲಿದೆ. ನವೆಂಬರ್‌ನಲ್ಲಿ ಪೋಸ್ಟ್ ಪ್ರೊಡಕ್ಷನ್ ಕೆಲಸ ನಡೆಯಲಿದೆ. ಇದಾದ ಬಳಿಕ ನಾನು ಬಿಲ್ಲ ರಂಗ ಬಾಷ ಸಿನಿಮಾದಲ್ಲಿ ತೊಡಗಿಕೊಳ್ಳಲಿದ್ದೇನೆ. ಕ್ರಿಸ್‌ಮಸ್‌ಗೆ ಕೆ47 ಬಂದೇ ಬರುತ್ತದೆ' ಎಂದಿದ್ದಾರೆ ಸುದೀಪ್.

# ಸಚಿವ ಜಮೀರ್‌ಗೆ 2 ಕೋಟಿ ರೂ. ಕೊಟ್ಟಿದ್ದೆಲ್ಲಿಂದ...

ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರಿಗೆ 2 ಕೋಟಿ ರೂಪಾಯಿ ಹಣಕಾಸು ನೆರವು ನೀಡಿದ ವಿಚಾರವಾಗಿ ನಟಿ ರಾಧಿಕಾ ಕುಮಾರಸ್ವಾಮಿ ಕಳೆದ ವಾರ ಲೋಕಾಯುಕ್ತ ವಿಚಾರಣೆಗೆ ಹಾಜರಾಗಿರುವುದು ತಿಳಿದುಬಂದಿದೆ. ಜಮೀರ್ ಅಹ್ಮದ್ ಖಾನ್‌ಗೆ ಹಣ ಕೊಟ್ಟಿರುವ ಬಗ್ಗೆ ಲೋಕಾಯುಕ್ತ ವಿಚಾರಣೆ ವೇಳೆ ರಾಧಿಕಾ ಕುಮಾರಸ್ವಾಮಿ ಹೇಳಿಕೆ ದಾಖಲಿಸಿದ್ದಾರೆ ಎಂಬುದು ಮೂಲಗಳಿಂದ ತಿಳಿದುಬಂದಿದೆ.

ಅಕ್ರಮ ಆಸ್ತಿ ಗಳಿಕೆ ಆರೋಪ ಸಂಬಂಧ ಜಮೀರ್ ಅಹಮದ್ ಖಾನ್ ಅವರ ನಿವಾಸ ಮತ್ತು ಕಚೇರಿಗಳ ಮೇಲೆ 2019 ರಲ್ಲಿ ಜಾರಿ ನಿರ್ದೇಶನಾಲಯ ದಾಳಿ ನಡೆಸಿತ್ತು.

ಆಗ ಜಮೀರ್‌ಗೆ ಹಣಕಾಸು ನೆರವು ಅಥವಾ ನೀಡಿದ ವಿವರಗಳನ್ನು ಇಡಿ ಸಂಗ್ರಹಿಸಿತ್ತು. ರಾಧಿಕಾ ಕುಮಾರಸ್ವಾಮಿ ಕೂಡ ಹಣ ನೀಡಿದ್ದರು ಎಂಬುದು ತಿಳಿದು ಬಂದಿತ್ತು. ಆಗ ಜೆಡಿಎಸ್ ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಅಸ್ತಿತ್ವದಲ್ಲಿದ್ದು, ಜಮೀರ್ ಸಚಿವರಾಗಿದ್ದರು. ಜಮೀರ್ ವಿರುದ್ಧ ಭ್ರಷ್ಟಾಚಾರ ವಿಗ್ರಹದಳ (ಎಸಿಬಿ) ಪ್ರಕರಣ ದಾಖಲಿಸಿತ್ತು. ಬಳಿಕ ರಾಜ್ಯದಲ್ಲಿ ಎಸಿಬಿ ರದ್ದುಗೊಂಡಿದ್ದರಿಂದ ಆ ಪ್ರಕರಣದ ತನಿಖೆಯನ್ನು ಲೋಕಾಯುಕ್ತ ಮುಂದುವರಿಸಿತ್ತು. ಅದರಂತೆ ತನಿಖೆಗೆ ಹಾಜರಾಗುವಂತೆ ರಾಧಿಕಾ ಕುಮಾರಸ್ವಾಮಿಗೆ ನೋಟಿಸ್ ನೀಡಲಾಗಿತ್ತು. 2012ರಲ್ಲಿ ಶಮಿಕಾ ಎಂಟರ್‌ಪ್ರೈಸಸ್ ಹೆಸರಿನಲ್ಲಿ ಯಶ್ ಮತ್ತು ರಮ್ಯಾ ಅಭಿನಯದ ಚಿತ್ರ ನಿರ್ಮಾಣ ಮಾಡಿದ್ದು ಅದರ ಯಶಸ್ಸು ಮತ್ತು ಸ್ಯಾಟಲೈಟ್ ಹಕ್ಕಿನಿಂದ ದೊರೆತ ಲಾಭಾಂಶದಲ್ಲಿ ಎರಡು ಕೋಟಿ ರೂಪಾಯಿಯನ್ನು ಸಚಿವರಿಗೆ ನೀಡಿದ್ದಾಗಿ ರಾಧಿಕಾ ಕುಮಾರಸ್ವಾಮಿ ಲೋಕಾಯುಕ್ತ ವಿಚಾರಣೆ ವೇಳೆ ತಿಳಿಸಿದ್ದಾರೆ ಎಂದು ವರದಿಯಾಗಿದೆ.

ಸದ್ಯ ರಾಧಿಕಾ ಕುಮಾರಸ್ವಾಮಿ ಹೇಳಿಕೆ ದಾಖಲಿಸಿಕೊಂಡಿರುವ ಲೋಕಾಯುಕ್ತರು, ಪೂರಕ ದಾಖಲೆಗಳನ್ನು ಒದಗಿಸುವಂತೆ ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಮತ್ತೊಂದೆಡೆ, ರಾಧಿಕಾ ಕುಮಾರಸ್ವಾಮಿ ಮಾತ್ರವಲ್ಲದೆ ಇನ್ನೂ ಹಲವರಿಂದ ಜಮೀರ್ ಹಣ ಪಡೆದಿದ್ದರು ಎನ್ನಲಾಗಿತ್ತು.

# ಅನಾಥ ಶವವಾದ ಕನ್ನಡ ನಿರ್ದೇಶಕ

ಹೆಣ ತೆಗೆದುಕೊಳ್ಳಲು ಒಪ್ಪದ ಕುಟುಂಬ

ಸಾಯಿಕುಮಾರ್ ನಟನೆಯ 'ಅಗ್ನಿ ಐಪಿಎಸ್' ಚಿತ್ರ ಒಂದು ಕಾಲದಲ್ಲಿ ಸಂಚಲನ ಸೃಷ್ಟಿ ಮಾಡಿತ್ತು. ಈ ಚಿತ್ರ ಈಗಲೂ ಅನೇಕರ ಫೇವರಿಟ್ ಆಗಿದೆ. ಇದಲ್ಲದೆ, 'ಪೊಲೀಸ್ ಸ್ಟೋರಿ' ಸಿನಿಮಾದಲ್ಲೂ ಪೊಲೀಸ್ ಇಲಾಖೆಯ ಬಗ್ಗೆ ಹೇಳಲಾದ ಸಿನಿಮಾ. ಈ ರೀತಿಯ ಸಿನಿಮಾಗಳಿಗೆ ಬರಹಗಾರರಾಗಿ ಕೆಲಸ ಮಾಡಿದ್ದ ಎಸ್‌ಎಸ್. ಡೇವಿಡ್ ನಿಧನ ಹೊಂದಿದ್ದಾರೆ. ಈಗ ಅವರು ಅನಾಥ ಶವವಾಗಿದ್ದಾರೆ. ಸಾವಿನ ಬಳಿಕ ಅವರನ್ನು ನೋಡಲು ಯಾರೂ ಇಲ್ಲವಾಗಿದ್ದಾರೆ. ಎಸ್‌ಎಸ್ ಡೇವಿಡ್ ಅವರು ಚಿತ್ರಕಥೆ ಬರಹಗಾರನಾಗಿ ಮಾತ್ರವಲ್ಲದೆ ನಿರ್ದೇಶನದಲ್ಲೂ ಛಾಪು ಮೂಡಿಸಿದ್ದರು. 'ಹಾಯ್ ಬೆಂಗಳೂರು' ಹಾಗೂ 'ಧೈರ್ಯ' ಚಿತ್ರವನ್ನ ನಿರ್ದೇಶನ ಮಾಡಿ ಡೇವಿಡ್ ಗಮನ ಸೆಳೆದಿದ್ದರು. ಈಗ ಅವರು ನಿಧನ ಹೊಂದಿದ್ದು, ಚಿತ್ರರಂಗದ ಅನೇಕರು ಸಂತಾಪ ಸೂಚಿಸಿದ್ದಾರೆ. ಆದರೆ, ಕುಟುಂಬದವರು ಅವರ ಶವ ಪಡೆಯಲು ಸಿದ್ಧರಿಲ್ಲ. ಡೇವಿಡ್ ಅವರು ಆಗಸ್ಟ್ 31ರಂದು ಮೆಡಿಕಲ್ ಶಾಪ್‌ಗೆ ತೆರಳಿದ್ದರು. ಈ ವೇಳೆ ಅವರು ಪ್ರಜ್ಞೆ ತಪ್ಪಿ ಬಿದ್ದಿದ್ದಾರೆ. ಅವರನ್ನು ಬೆಂಗಳೂರಿನ ಆರ್‌ಆರ್ ನಗರದ ಎಸ್‌ಎಸ್ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಆದರೆ, ಅವರು ಹೃದಯಘಾತದಿಂದ ಕೊನೆಯುಸಿರು ಎಳೆದಿದ್ದಾರೆ. ಈಗ ಡೇವಿಡ್ ಅನಾಥ ಶವವಾಗಿದ್ದಾರೆ.

ವಿಕ್ಟೋರಿಯಾ ಆಸ್ಪತ್ರೆಗೆ ಡೇವಿಡ್ ಪಾರ್ಥಿವ ಶರೀರ ರವಾನೆ ಆಗಿದೆ. ಸದ್ಯ ಕುಟುಂಬದವರು ಬಾರದೆ ಬಾಡಿ ಕೊಡೋದಿಲ್ಲ ಎಂದು ಆರ್‌ಆರ್ ನಗರ ಪೊಲೀಸರು ಹೇಳಿದ್ದಾರೆ. ಡೇವಿಡ್ ಅಕ್ಕ ಉಡುಪಿಯ ಕಾಪುವಿನಲ್ಲಿದ್ದಾರೆ. ಅವರು ತಮಗೆ ಬರೋಕೆ ಸಾಧ್ಯವಿಲ್ಲ ಎಂದು ಹೇಳಿದ್ದು, ಇಲ್ಲಿಯೇ ಅಂತಿಮ ಸಂಸ್ಕಾರ ನಡೆಸುವಂತೆ ಸೂಚನೆ ಕೊಟ್ಟಿದ್ದಾರೆ ಎನ್ನಲಾಗಿದೆ. ಈಗ ಡೇವಿಡ್ ಅವರು ಅನಾಥ ಶವವಾಗಿದ್ದಾರೆ.



# 122 ಕೋಟಿ ರೂ. ಬಹುಮಾನ; ಸೋತ ತಂಡಕ್ಕೂ ಕೋಟಿ ರೂ.




ಐಸಿಸಿ 4.48 ಮಿಲಿಯನ್ ಡಾಲರ್ ಬಹುಮಾನ

2025ರ ಮಹಿಳಾ ಏಕದಿನ ವಿಶ್ವಕಪ್‌ನಲ್ಲಿ ಭಾರತ ಆತಿಥ್ಯ ವಹಿಸುತ್ತಿದೆ. ಪಾಕಿಸ್ತಾನ ತಂಡದ ಪಂದ್ಯಗಳು ಶ್ರೀಲಂಕಾದಲ್ಲಿ ನಡೆಯಲಿವೆ. ಐಸಿಸಿ ಬಹುಮಾನ ಮೊತ್ತವನ್ನು 297% ಹೆಚ್ಚಿಸಿ, 13.88 ಮಿಲಿಯನ್ ಡಾಲರ್ (ಸುಮಾರು 122 ಕೋಟಿ ರೂಪಾಯಿ)ಗೆ ಏರಿಸಿದೆ. ವಿಜೇತ ತಂಡಕ್ಕೆ 4.48 ಮಿಲಿಯನ್ ಡಾಲರ್, ರನ್ನರ್ ಅಪ್‌ಗೆ 2.24 ಮಿಲಿಯನ್ ಡಾಲರ್ ಬಹುಮಾನ ಲಭ್ಯವಿದೆ. ಪ್ರತಿ ತಂಡಕ್ಕೂ ಕನಿಷ್ಠ 2.5 ಕೋಟಿ ರೂಪಾಯಿ ಬಹುಮಾನ ಖಾತ್ರಿಪಡಿಸಲಾಗಿದೆ.

2025 ರ ಮಹಿಳಾ ಏಕದಿನ ವಿಶ್ವಕಪ್ ಇದೇ ಸೆಪ್ಟೆಂಬರ್ 30 ರಿಂದ ಪ್ರಾರಂಭವಾಗಲಿದ್ದು, ಈ ಐಸಿಸಿ ಟೂರ್ನಿಗೆ ಭಾರತ ಆತಿಥ್ಯ ವಹಿಸುತ್ತಿದೆ. ಆದಾಗ್ಯೂ, ಪಾಕಿಸ್ತಾನ ತಂಡ ಭಾರತಕ್ಕೆ ಬರದಿರುವ ಕಾರಣ ಆ ತಂಡದ ಪಂದ್ಯಗಳನ್ನು ಶ್ರೀಲಂಕಾದಲ್ಲಿ ನಡೆಸಲಾಗುತ್ತಿದೆ. ಈ ನಡುವೆ ಈ ಪಂದ್ಯಾವಳಿಯ ಬಹುಮಾನ ಮೊತ್ತವನ್ನು ಶೇಕಡಾ 297 ರಷ್ಟು ಹೆಚ್ಚಳ ಮಾಡಿರುವುದಾಗಿ ಐಸಿಸಿ ಮಾಹಿತಿ ಹಂಚಿಕೊಂಡಿದೆ.

ಐಸಿಸಿ ಅಧ್ಯಕ್ಷ ಜಯ್ ಶಾ ಮಹಿಳಾ ವಿಶ್ವಕಪ್‌ನ ಬಹುಮಾನದ ಹಣವನ್ನು 13.88 ಮಿಲಿಯನ್ ಅಂದರೆ ಸರಿಸುಮಾರು 122 ಕೋಟಿ ರೂಗಳಿಗೆ ಹೆಚ್ಚಳ ಮಾಡಿರುವುದಾಗಿ ತಿಳಿಸಿದ್ದಾರೆ.

ವಾಸ್ತವವಾಗಿ ಜಯ್ ಶಾ ಅವರು ಐಸಿಸಿ ಅಧ್ಯಕ್ಷರಾದ ಬಳಿಕ ಮಹಿಳಾ ಕ್ರಿಕೆಟ್ ಅನ್ನು ಸಹ ಪುರುಷರ ಕ್ರಿಕೆಟ್‌ನಂತೆ ಬೇರೆ ಹಂತಕ್ಕೆ ಕೊಂಡೊಯ್ಯಲು ಮಹತ್ವದ ಹೆಜ್ಜೆ ಇಟ್ಟಿದ್ದಾರೆ. ಅದರಂತೆ ಮಹಿಳಾ ಏಕದಿನ ವಿಶ್ವಕಪ್ ಗೆದ್ದ ತಂಡದ ಜೊತೆಗೆ ಈ ಬಾರಿ ಈ ಪಂದ್ಯಾವಳಿಯಲ್ಲಿ ಭಾಗವಹಿಸುವ ಪ್ರತಿಯೊಂದು ತಂಡಕ್ಕೂ ಸಾಕಷ್ಟು ಹಣ ಸಿಗಲಿದೆ.

ಮಹಿಳಾ ವಿಶ್ವಕಪ್ ಗೆದ್ದ ತಂಡಕ್ಕೆ ಐಸಿಸಿ 4.48 ಮಿಲಿಯನ್ ಡಾಲರ್ ಬಹುಮಾನವನ್ನು ಘೋಷಿಸಿದೆ. ಅಂದರೆ ಈ ಮೊತ್ತವು ಭಾರತೀಯ ಕರೆನ್ಸಿಯಲ್ಲಿ ಸುಮಾರು 39 ಕೋಟಿ ರೂ. ಆಗಿದೆ. ಹಾಗೆಯೇ ಫೈನಲ್‌ನಲ್ಲಿ ಸೋತ ತಂಡಕ್ಕೆ ಅಂದರೆ ರನ್ನರ್ ಅಪ್ ತಂಡಕ್ಕೆ 2.24 ಮಿಲಿಯನ್ ಡಾಲರ್ ಅಂದರೆ ಸುಮಾರು 19 ಕೋಟಿ ರೂಪಾಯಿ ಬಹುಮಾನ ಸಿಗಲಿದೆ. ಸೆಮಿಫೈನಲ್ ತಲುಪುವ ತಂಡಕ್ಕೆ ಸುಮಾರು 9 ಕೋಟಿ ರೂಪಾಯಿ ಸಿಗಲಿದೆ. ಗುಂಪು ಹಂತದಲ್ಲಿ ಪಂದ್ಯ ಗೆದ್ದ ತಂಡಕ್ಕೆ 34 ಸಾವಿರ ಡಾಲರ್ ಸಿಗಲಿದೆ. ಐದು ಮತ್ತು ಆರನೇ ಸ್ಥಾನ ಪಡೆದ ತಂಡಕ್ಕೆ 6 ಕೋಟಿ ರೂಪಾಯಿ, ಏಳು ಮತ್ತು ಎಂಟನೇ ಸ್ಥಾನ ಪಡೆದ ತಂಡಕ್ಕೆ 2.5 ಕೋಟಿ ರೂಪಾಯಿ ಸಿಗಲಿದೆ. ಯಾವುದೇ ತಂಡ ಪಂದ್ಯ ಗೆದ್ದರೂ ಅಥವಾ ಗೆಲ್ಲದಿದ್ದರೂ, ಪ್ರತಿ ತಂಡಕ್ಕೂ ಕನಿಷ್ಠ 2.5 ಕೋಟಿ ರೂಪಾಯಿ ಬಹುಮಾನ ಸಿಗಲಿದೆ.

# ಸತತ ಸೆಂಚುರಿ ಸಿಡಿಸಿದ ಬೆನ್ನಲ್ಲೇ ಸರ್ಫರಾಝ್‌ಗೆ ಸಂಕಷ್ಟ

ಸೆಪ್ಟೆಂಬರ್ 4 ರಿಂದ ಶುರು

ಸರ್ಫರಾಝ್ ಖಾನ್ ಟೀಮ್ ಇಂಡಿಯಾ ಪರ ಈವರೆಗೆ 6 ಟೆಸ್ಟ್ ಪಂದ್ಯಗಳನ್ನಾಡಿದ್ದಾರೆ. ಈ ವೇಳೆ 11 ಇನಿಂಗ್ಸ್ ಆಡಿರುವ ಅವರು 1 ಶತಕ ಹಾಗೂ 3 ಅರ್ಧಶತಕಗಳೊಂದಿಗೆ ಒಟ್ಟು 371 ರನ್ ಕಲೆಹಾಕಿದ್ದಾರೆ. ಈ ಭರ್ಜರಿ ಪ್ರದರ್ಶನದ ಹೊರತಾಗಿಯೂ ಇಂಗ್ಲೆಂಡ್ ವಿರುದ್ಧದ ಸರಣಿಗೆ ಸರ್ಫರಾಝ್ ಅವರನ್ನು ಆಯ್ಕೆ ಮಾಡಿರಲಿಲ್ಲ. ಇದಾಗ್ಯೂ ಈ ಬಾರಿಯ ಟೀಮ್ ಇಂಡಿಯಾ ಆಟಗಾರ ಸರ್ಫರಾಝ್ ಖಾನ್ ಇತ್ತೀಚೆಗೆ ನಡೆದ ಬುಚ್ಚಿ ಬಾಬು ಟೂರ್ನಿಯಲ್ಲಿ ಮುಂಬೈ ಪರ ಬ್ಯಾಕ್ ಟು ಬ್ಯಾಕ್ ಶತಕ ಸಿಡಿಸಿ ಮಿಂಚಿದ್ದರು. ಈ ಶತಕದಬ್ಬರೊಂದಿಗೆ ದುಲೀಪ್ ಟ್ರೋಫಿಗೆ ಸಜ್ಜಾಗಿದ್ದ ಸರ್ಫರಾಝ್ ಖಾನ್‌ಗೆ ಆಘಾತ ಎದುರಾಗಿದೆ.

ದುಲೀಪ್ ಟ್ರೋಫಿ ಟೂರ್ನಿಯ ಸೆಮಿಫೈನಲ್‌ನಲ್ಲಿ ಪಶ್ಚಿಮ ವಲಯ ಪರ ಕಣಕ್ಕಿಳಿಯಲು ಸಜ್ಜಾಗಿದ್ದ ಸರ್ಫರಾಝ್ ಖಾನ್ ಗಾಯಗೊಂಡಿದ್ದಾರೆ. ಹೀಗಾಗಿ ಸೆಪ್ಟೆಂಬರ್ 4 ರಿಂದ ಶುರುವಾಗಲಿರುವ ಕೇಂದ್ರ ವಲಯ ವಿರುದ್ಧದ ಸೆಮಿಫೈನಲ್ ಪಂದ್ಯದಲ್ಲಿ ಸರ್ಫರಾಝ್ ಖಾನ್ ಕಣಕ್ಕಿಳಿಯುವುದಿಲ್ಲ ಎಂದು ವರದಿಯಾಗಿದೆ. ಇದಕ್ಕೂ ಮುನ್ನ ಸರ್ಫರಾಝ್ ಖಾನ್ ಬುಚ್ಚಿ ಬಾಬು ಟೂರ್ನಿಯಲ್ಲಿ ಸತತ ಶತಕಗಳನ್ನು ಬಾರಿಸಿದ್ದರು. ಆಗಸ್ಟ್ 18 ರಂದು ನಡೆದ ತಮಿಳುನಾಡು ಕ್ರಿಕೆಟ್ ಅಸೋಸಿಯೇಷನ್ ಇಲೆವೆನ್ ವಿರುದ್ಧದ ಪಂದ್ಯದಲ್ಲಿ ಮುಂಬೈ ಪರ ಕಣಕ್ಕಿಳಿದ ಸರ್ಫರಾಝ್ ಕೇವಲ 92 ಎಸೆತಗಳಲ್ಲಿ ಸೆಂಚುರಿ ಸಿಡಿಸಿದ್ದರು. ಅಲ್ಲದೆ ಈ ಪಂದ್ಯದಲ್ಲಿ 114 ಎಸೆತಗಳನ್ನು ಎದುರಿಸಿ 6 ಸಿಕ್ಸ್ ಹಾಗೂ 10 ಫೋರ್‌ಗಳೊಂದಿಗೆ 138 ರನ್ ಬಾರಿಸಿದ್ದರು.

ಇದಾದ ಬಳಿಕ ಹರ್ಯಾಣ ವಿರುದ್ಧದ ಪಂದ್ಯದಲ್ಲೂ ಸರ್ಫರಾಝ್ ಖಾನ್ ಮೂರಂಕಿ ಮೊತ್ತ ಗಳಿಸಿದ್ದರು. ಈ ಪಂದ್ಯದಲ್ಲಿ ಐದನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಸರ್ಫರಾಝ್ ಖಾನ್ 100 ಎಸೆತಗಳಲ್ಲಿ ಶತಕ ಪೂರೈಸಿದರು. ಇನ್ನು ಈ ಪಂದ್ಯದಲ್ಲಿ 112 ಎಸೆತಗಳನ್ನು ಎದುರಿಸಿದ ಬಲಗೈ ದಾಂಡಿಗನ ಬ್ಯಾಟ್‌ನಿಂದ 9 ಫೋರ್ ಹಾಗೂ 5 ಸಿಕ್ಸ್‌ಗಳೊಂದಿಗೆ 111 ರನ್‌ಗಳು ಮೂಡಿಬಂದಿದ್ದವು. ಈ ಎರಡು ಭರ್ಜರಿ ಶತಕಗಳ ಹುಮ್ಮಸ್ಸಿನೊಂದಿಗೆ ಸರ್ಫರಾಝ್ ಖಾನ್ ದುಲೀಪ್ ಟ್ರೋಫಿ ಟೂರ್ನಿಯಲ್ಲಿ ಕಣಕ್ಕಿಳಿಯಲು ಸಜ್ಜಾಗಿದ್ದರು. ಆದರೀಗ ಗಾಯಗೊಂಡಿರುವ ಅವರು ಟೂರ್ನಿಯಿಂದ ಹೊರಗುಳಿಯಲು ನಿರ್ಧರಿಸಿದ್ದಾರೆ ಎಂದು ತಿಳಿದು ಬಂದಿದೆ.



# ಡೆಲ್ಲಿ ಕ್ಯಾಪಿಟಲ್ಸ್‌ಗೆ ಹೊಸ ನಾಯಕ


ಅಕ್ಷರ್ ಪಟೇಲ್‌ಗೆ ಕೊಕ್

ಇಂಡಿಯನ್ ಪ್ರೀಮಿಯರ್ ಲೀಗ್ 2025 ರಲ್ಲಿ ಅಕ್ಷರ್ ಪಟೇಲ್ ಮುಂದಾಳತ್ವದಲ್ಲಿ ಕಣಕ್ಕಿಳಿದ ಡೆಲ್ಲಿ ಕ್ಯಾಪಿಟಲ್ಸ್ ತಂಡವು 14 ಮ್ಯಾಚ್‌ಗಳಲ್ಲಿ ಗೆದ್ದಿದ್ದು ಕೇವಲ 7 ಪಂದ್ಯಗಳನ್ನು ಮಾತ್ರ. ಅಲ್ಲದೆ ಪ್ಲೇಆಫ್ ಪ್ರವೇಶಿಸುವಲ್ಲಿಯೂ ಡೆಲ್ಲಿ ಕ್ಯಾಪಿಟಲ್ಸ್ ವಿಫಲವಾಗಿತ್ತು. ಇದೇ ಕಾರಣದಿಂದಾಗಿ ಮುಂಬರುವ ಸೀಸನ್‌ನಲ್ಲಿ ಹೊಸ ನಾಯಕನನ್ನು ಕಣಕ್ಕಿಳಿಸಲು ಡಿಸಿ ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-19 ರಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಹೊಸ ನಾಯಕ ಮುನ್ನಡೆಸಲಿದ್ದಾರೆ. ಕಳೆದ ಬಾರಿ ತಂಡವನ್ನು ಮುನ್ನಡೆಸಿದ್ದ ಅಕ್ಷರ್ ಪಟೇಲ್ ಅವರನ್ನು ನಾಯಕತ್ವದಿಂದ ವಜಾಗೊಳಿಸಲಿದ್ದಾರೆ ಎಂದು ವರದಿಯಾಗಿದೆ. ಅದರಂತೆ ಐಪಿಎಲ್ 2026 ರಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಹೊಸ ನಾಯಕ ಮುನ್ನಡೆಸಲಿದ್ದಾರೆ. ಈ ಹೊಸ ನಾಯಕ ಯಾರೆಂಬುದು ಇನ್ನೂ ಸಹ ಬಹಿರಂಗವಾಗಿಲ್ಲ. ಇದಾಗ್ಯೂ, ಕ್ಯಾಪ್ಟನ್ ರೇಸ್‌ನಲ್ಲಿ ಮೂವರ ಹೆಸರುಗಳು ಕೇಳಿ ಬರುತ್ತಿವೆ. ಅವರೆಂದರೆ...

**ಕೆಎಲ್ ರಾಹುಲ್:** ಡೆಲ್ಲಿ ಕ್ಯಾಪಿಟಲ್ಸ್ ತಂಡವು ಕಳೆದ ಬಾರಿಯ ಮೆಗಾ ಹರಾಜಿನ ಮೂಲಕ ಕನ್ನಡಿಗ ಕೆಎಲ್ ರಾಹುಲ್ ಅವರನ್ನು ಬರೋಬ್ಬರಿ 14 ಕೋಟಿ ರೂ.ಗೆ ಖರೀದಿಸಿತ್ತು. ಅತ್ತ ವಿಕೆಟ್ ಕೀಪರ್, ಆರಂಭಿಕನಾಗಿ ಅದ್ಭುತ ಪ್ರದರ್ಶನ ನೀಡಿರುವ ರಾಹುಲ್ ಅವರಿಗೆ ಕ್ಯಾಪ್ಟನ್ ಪಟ್ಟ ನೀಡಲು ಡಿಸಿ ಫ್ರಾಂಚೈಸಿ ಆಸಕ್ತಿ ಹೊಂದಿದೆ. ಕೆಎಲ್ ರಾಹುಲ್ ಐಪಿಎಲ್‌ನಲ್ಲಿ 64 ಪಂದ್ಯಗಳಲ್ಲಿ ಕ್ಯಾಪ್ಟನ್ ಆಗಿ ಕಾಣಿಸಿಕೊಂಡಿದ್ದು, ಹೀಗಾಗಿ ಮುಂದಿನ ಸೀಸನ್‌ನಲ್ಲಿ ಡಿಸಿ ತಂಡದ ನಾಯಕರಾಗಿ ಕಾಣಿಸಿಕೊಂಡರೂ ಅಚ್ಚರಿಪಡಬೇಕಿಲ್ಲ.

**ಫಾಫ್ ಡುಪ್ಲೆಸಿಸ್:** ಕಳೆದ ಸೀಸನ್‌ನಲ್ಲಿ 2 ಕೋಟಿ ರೂ.ಗೆ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಸೇರ್ಪಡೆಯಾಗಿರುವ ಫಾಫ್ ನಾಯಕತ್ವದ ಆಕಾಂಕ್ಷಿ. ಏಕೆಂದರೆ ಫಾಫ್ ಐಪಿಎಲ್‌ನಲ್ಲಿ 42 ಪಂದ್ಯಗಳಲ್ಲಿ ಕ್ಯಾಪ್ಟನ್ ಆಗಿ ಕಾಣಿಸಿಕೊಂಡಿದ್ದಾರೆ. ಹಾಗೆಯೇ ಸೌತ್ ಆಫ್ರಿಕಾ ತಂಡವನ್ನು ಮುನ್ನಡೆಸಿದ ಅನುಭವವು ಕೂಡ ಅವರ ಜೊತೆಗಿದೆ.





# ಅಭಿಮಾನಿಗಳಿಗಾಗಿ ವಿಶೇಷ ಪ್ರಣಾಳಿಕೆ ಮುಂದಿಟ್ಟ ಆರ್‌ಸಿಬಿ

ಫ್ರಾಂಚೈಸಿಯ ಕಾಳಜಿಗೆ ಫ್ಯಾನ್ಸ್ ಮೆಚ್ಚುಗೆ

ಇಂಡಿಯನ್ ಪ್ರೀಮಿಯರ್ ಲೀಗ್ 2025 ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪಾಲಿಗೆ ಜೂನ್ 4 'ಕಪ್'ಚುಕ್ಕೆ. ಜೂನ್ 4, 2025 ರಂದು ಬೆಂಗಳೂರಿನಲ್ಲಿ ನಡೆದ ಆರ್‌ಸಿಬಿ ಕಪ್ ಗೆದ್ದ ಸಂಭ್ರಮಾಚರಣೆ ವೇಳೆ ಉಂಟಾದ ಕಾಲ್ತುಳಿತದಿಂದಾಗಿ 11 ಮಂದಿ ಅಭಿಮಾನಿಗಳು ಸಾವಿಗೀಡಾಗಿದ್ದರು. ಈ ದುರ್ಘಟನೆಯಿಂದ ಎಚ್ಚೆತ್ತುಕೊಂಡಿರುವ ಆರ್‌ಸಿಬಿ ಇದೀಗ ಅಭಿಮಾನಿಗಳ ಬಗ್ಗೆ ವಿಶೇಷ ಕಾಳಜಿವಹಿಸಲು ಮುಂದಾಗಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಅಂಟಿಕೊಂಡಿರುವ 'ಕಪ್'ಚುಕ್ಕೆಯನ್ನು ತೊಡೆದು ಹಾಕಲು ಆರ್‌ಸಿಬಿ ಫ್ರಾಂಚೈಸಿ ದಿಟ್ಟ ಹೆಜ್ಜೆಯನ್ನಿಟ್ಟಿದೆ. ಅದು ಕೂಡ ಅಭಿಮಾನಿಗಳಿಗಾಗಿ ಎಂಬುದು ವಿಶೇಷ. ಕೆಲ ದಿನಗಳ ಹಿಂದೆಯಷ್ಟೇ ಆರ್‌ಸಿಬಿ ಕೇರ್ಸ್ ಮೂಲಕ ಅಭಿಮಾನಿಗಳ ಪರ ನಿಲ್ಲುವುದಾಗಿ ಘೋಷಿಸಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ಇದೀಗ ಒಂದಷ್ಟು ಗುರಿಗಳೊಂದಿಗೆ ಪ್ರಣಾಳಿಕೆಯೊಂದನ್ನು ಬಿಡುಗಡೆ ಮಾಡಿದ್ದಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯು ಆರ್‌ಸಿಬಿ ಕೇರ್ಸ್ ಮೂಲಕ ಒಂದಷ್ಟು ಸಾಮಾಜಿಕ ಕಾರ್ಯಕ್ಕೆ ಕೈ ಹಾಕಲಿದೆ. ಇದು ಕೇವಲ ಅಲ್ಪಾವಧಿಯ ಅಭಿಯಾನವಲ್ಲ. ಬದಲಾಗಿ ದೀರ್ಘಾವಧಿಯ ಭರವಸೆ ಎಂದು ಆರ್‌ಸಿಬಿ ಹೇಳಿಕೊಂಡಿದೆ. ಈ ಅಭಿಯಾನಕ್ಕಾಗಿ ಆರ್‌ಸಿಬಿ 6 ಅಂಶಗಳನ್ನು ಒಳಗೊಂಡ ಪ್ರಣಾಳಿಕೆಯನ್ನು ಮುಂದಿಟ್ಟಿದೆ. ಕೇವಲ ಆರ್ಥಿಕವಾಗಿ ಮಾತ್ರವಲ್ಲದೆ, ಬಾಧಿತ ಕುಟುಂಬಗಳಿಗೆ ತ್ವರಿತ, ಪಾರದರ್ಶಕ ಮತ್ತು ಮಾನವೀಯ ರೀತಿಯಲ್ಲಿ ಸಹಾಯವನ್ನು ತಲುಪಿಸುವುದು.

**ಸುರಕ್ಷಿತ ವಾತಾವರಣವನ್ನು ಸೃಷ್ಟಿಸುವುದು:** ಉತ್ತಮ ಜನಸಂದಣಿ ನಿರ್ವಹಣಾ ಪ್ರೋಟೋಕಾಲ್‌ಗಳನ್ನು ವಿನ್ಯಾಸಗೊಳಿಸಲು ಕ್ರೀಡಾಂಗಣದ ಅಧಿಕಾರಿಗಳು, ಕ್ರೀಡಾ ಸಂಸ್ಥೆಗಳು ಮತ್ತು ಲೀಗ್ ಪಾಲುದಾರರೊಂದಿಗೆ ನಿಕಟವಾಗಿ ಕೆಲಸ ನಿರ್ವಹಿಸುವುದು.

ಅಭಿಮಾನಿ-ಸುರಕ್ಷತಾ ಲೆಕ್ಕಪರಿಶೋಧನಾ ಚೌಕಟ್ಟನ್ನು ರಚಿಸಿ ಮತ್ತು ಜನಸಂದಣಿ ನಿರ್ವಹಣೆ ಮತ್ತು ತುರ್ತು ಪ್ರತಿಕ್ರಿಯೆಯ ಕುರಿತು ಸ್ಥಳೀಯ ತಂಡಗಳಿಗೆ ತರಬೇತಿ ನೀಡುವುದು. ಆರ್‌ಸಿಬಿಯ ಅತ್ಯಂತ ಉತ್ಸಾಹಭರಿತ ಅಭಿಮಾನಿಗಳ ಕಥೆಗಳು ಮತ್ತು ಹೆಸರುಗಳನ್ನು ಗೌರವಿಸಲು ಬೆಂಗಳೂರಿನಲ್ಲಿ ವಿಶೇಷ ಸ್ಮಾರಕ ಸ್ಥಳವನ್ನು ರಚಿಸುವುದು.

ಈ ತಂಡದ ಮೇಲಿನ ನಂಬಿಕೆ ಕ್ರೀಡಾಂಗಣಗಳಿಗೆ ಮಾತ್ರ ಸೀಮಿತವಾಗಿರಬಾರದು. ಕ್ರೀಡಾಂಗಣಗಳಲ್ಲಿ ಉದ್ಯೋಗಗಳನ್ನು ಸೃಷ್ಟಿಸಿ, ಸ್ಥಳೀಯ ಪ್ರತಿಭೆಗಳನ್ನು ಪೋಷಿಸಿ ಮತ್ತು ಮುಂದಿನ ಪೀಳಿಗೆಯ ಕ್ರೀಡಾ ವೃತ್ತಿಪರರನ್ನು ಬೆಂಬಲಿಸುವುದು. ಈ ಆರು ಉಪಕ್ರಮಗಳ ಮೂಲಕ ಆರ್‌ಸಿಬಿ ಕೇರ್ಸ್ ಮುಂದಿನ ದಿನಗಳಲ್ಲಿ ಕಾರ್ಯ ನಿರ್ವಹಿಸಲಿದೆ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ಸೋಷಿಯಲ್ ಮೀಡಿಯಾ ಮೂಲಕ ತಿಳಿಸಿದೆ. ಈ ನಡೆಯು ಆರ್‌ಸಿಬಿ ಕೇವಲ ಕ್ರಿಕೆಟ್ ತಂಡವಲ್ಲ, ಜವಾಬ್ದಾರಿಯುತ ಸಂಸ್ಥೆಯಾಗಿ ಸಮಾಜಕ್ಕೆ ಬದ್ಧವಾಗಿದೆ ಎಂದು ತೋರಿಸುತ್ತದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966